# ಪ್ರಸಾದ
ಮಾಸಿಕ

ಸಂಪುಟ 39 ಸಂಚಿಕೆ 10 ಅಕ್ಟೋಬರ್ 2024



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಮೈಸೂರು ಶ್ರೀ ಸುತ್ತೂರು ಮಠದಲ್ಲಿ  ಅಕ್ಟೋಬರ್ 12 ಶನಿವಾರ ವಿಜಯದಶಮಿಯಂದು ಪರಮಪೂಜ್ಯ ಜಗದ್ಗುರುಗಳವರು ಹಾಗೂ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋತ್‌ರವರು ಬಿಲ್ವಪತ್ರೆ ಹಾಗೂ ರುದ್ರಾಕ್ಷಿ ಗಿಡಗಳನ್ನು ನೆಟ್ಟು ನೀರೆರೆಯುತ್ತಿರುವುದು (12 ಅಕ್ಟೋಬರ್ 2024)

# ಪ್ರಸಾದ

**ಸಂಪುಟ 39 : ಸಂಚಿಕೆ 10** **ಅಕ್ಟೋಬರ್ 2024**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ  ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

ಮುಖಪುಟ ಚಿತ್ರ

ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಆವರಣದಲ್ಲಿ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಲಯ ಕಟ್ಟಡವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಂಧ್ರ ಪ್ರದೇಶದ ಘನತೆವೆತ್ತ ರಾಜ್ಯಪಾಲರಾದ ಶ್ರೀ ಎಸ್. ಅಬ್ದುಲ್ ನಜೀರ್‌ರವರು ಉದ್ಘಾಟಿಸಿದರು, ಶ್ರೀ ಎಸ್.ಪಿ. ಮಂಜುನಾಥ್, ಡಾ. ಸುರೀಂದರ್ ಸಿಂಗ್ ಮತ್ತು ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ ಮೊದಲಾದವರುಗಳಿದ್ದಾರೆ (23 ಅಕ್ಟೋಬರ್ 2024)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಪರಮಾಶ್ರಯ 9
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಅನ್ನ ದೇವರು 12
ಡಾ. ಎಂ.ಎನ್. ನಂದೀಶ್ ಹಂಚೆ

ಶಬರಶಂಕರ ವಿಲಾಸ–ಟೀಕು 15
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಶಿವಾಧಿಕ್ಯ ಪುರಾಣ : ಒಂದು ಅವಲೋಕನ 21
ಡಾ. ಎನ್.ಎಂ. ಗಿರಿಜಾಪತಿ

ಬಸವಣ್ಣನವರು 28
ಡಾ. ಗುರುಲಿಂಗಪ್ಪ ಧಬಾಲೆ

ತುಮಕೂರು ಜಿಲ್ಲೆಯ ವೀರಶೈವ ಮಠಗಳು 34
ಡಾ. ಬಿ. ನಂಜುಂಡಸ್ವಾಮಿ

ಚಿಕ್ಕಮಧುರೆಯ ಮಲ್ಲೇಶ್ವರ ದೇವಾಲಯ 43
ಡಾ. ಎಸ್.ಜಿ. ರಾಮದಾಸ ರೆಡ್ಡಿ
(ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ)

ಗ್ರಂಥ ಪರಾಮರ್ಶೆ 48
ನಗರ್ಲೆ ಶಿವಕುಮಾರ

ವಾರ್ತಾವಿಹಾರ 51
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 62

ಇನ್ನೇವೆನಿನ್ನೇವೆನೆಲೆ ತಂದೆ
ಹೆಣ್ಣು ಬಾಲೆಯ ಮೊರೆಯ ಕೇಳಯ್ಯ!

ಮುನ್ನ ಹುಟ್ಟಿದ
ಒಂಬತ್ತು ಮಕ್ಕಳ
ನಗೆ ನುಡಿಯ ಕೇಳಲಾರೆ !
ಮನೆಯ ಗಂಡನ
ಬೆಡಗು ಬಿನ್ನಾಣವ ನೋಡಲಾರೆ !
ನನ್ನ ಸಿರಿಯಲ್ಲಿ
ನಾನು ಓಲಾಡಲಾರೆ !

ಎನಗೊಂದು ಮಗುವ ಕೊಡಯ್ಯ - ಗುರುವೆ !
ಆ ಮಗುವಿನ ಕೈಯಿಂದ
ಗಂಡನ ತಲೆಯೊಡೆಯಲಿಕ್ಕಿಸು
[ಆ] ಮಕ್ಕಳ ಕೊರಳ ಕೊಯಿಸು
ಎನ್ನ ದಂಡವ ಕೊಳಿಸು !

ಪಟ್ಟಣಕ್ಕೆ ಹೋಗುವ ಹಾದಿ
ಮೂರು ಬಟ್ಟೆ ಕೂಡಿದ ಮಧ್ಯದಲ್ಲಿ
ಮಣಿಹವ ಮಾಡುತಿಪ್ಪ
ಕೈಕಾಲಿಲ್ಲದ ಮೋಟಂಗೆ
ಮೆಚ್ಚಿ ಮರುಳಾದ ಪತಿವ್ರತೆಯಯ್ಯ ನಾನು –
ಎನ್ನ ಕೊಂಡು ಹೋಗಿ
ಅವನಿಗೆ ಮದುವೆಯ ಮಾಡಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ !

– ಘನಲಿಂಗಿದೇವರು

# ಗುರುವಾಣಿ

ತ್ಯಜಿಸುವುದು ದುಸ್ಸಂಗವನು ನೀ
ಸೃಜಿಸುವುದು ಸತ್ಸಂಗವನು ಗಜ
ಬಜಿಸದಿರಹೋರಾತ್ರಿಯಲಿ ಧರ್ಮವನೆ ಸಂಗ್ರಹಿಸು ।
ಭಜಿಸು ನಿತ್ಯಾನಿತ್ಯವಸ್ತುವ
ವಿಜಯನಹೆಯಿಹಪರಕೆ ತತ್ತ್ವದ
ನಿಜವಿದೆಲೆ ಧೃತರಾಷ್ಟ್ರ ಚಿತ್ತೈಸೆಂದನಾ ಮುನಿಪ ॥

ಕುಮಾರವ್ಯಾಸ ಭಾರತದ ಉದ್ಯೋಗಪರ್ವದ ನಾಲ್ಕನೆಯ ಸಂಧಿಯ ಈ ಕಾವ್ಯಭಾಗದಲ್ಲಿ ಸನತ್ಸುಜಾತರು ಧೃತರಾಷ್ಟ್ರನಿಗೆ ಉಪದೇಶವನ್ನು ಮಾಡುತ್ತಾರೆ. ಅದರಲ್ಲಿ "ದುಷ್ಟರ ಸಹವಾಸವನ್ನು ಬಿಡು, ಸಜ್ಜನರನ್ನು ಸೇರು, ಆತಂಕಗೊಳ್ಳಬೇಡ, ಹಗಲು-ರಾತ್ರಿ ಎನ್ನದೆ ಧರ್ಮವನ್ನು ಸಂಪಾದಿಸು, ನಿತ್ಯಾನಿತ್ಯ ವಸ್ತುಗಳನ್ನು ಧ್ಯಾನಿಸು. ಹಾಗೆ ಮಾಡಿದರೆ ನೀನು 'ವಿಜಯಿ'ಯಾಗುವೆ. ಇಹಪರಗಳಲ್ಲಿ ಸಲ್ಲುವ ಇದುವೇ ನಿಜವಾದ ತತ್ತ್ವ. ಇದನ್ನು ಮನಸ್ಸಿನಲ್ಲಿ ಅಳವಡಿಸಿಕೋ" ಎನ್ನುತ್ತಾರೆ. ಅವರ ಮಾತುಗಳನ್ನು ಕೇಳಿದ ಧೃತರಾಷ್ಟ್ರ ತಾತ್ಕಾಲಿಕವಾಗಿ ಧರ್ಮಪರನಾದರೂ ಆನಂತರ ಆತನ ಸಹಜ ಸ್ವಭಾವವೇ ಮುಂದಾಯಿತು.

ಜೀವನದಲ್ಲಿ ನಿಜವಾದ ವಿಜಯವೆಂದರೆ ಸತ್ಸಂಗ, ಧರ್ಮಪಾಲನೆ, ನಿತ್ಯಾನಿತ್ಯ ವಸ್ತುಗಳ ಬಗೆಗಿನ ಸರಿಯಾದ ತಿಳಿವು. ಗಹನವಾದ ತತ್ತ್ವವಿಚಾರಗಳು ಶ್ರೀಸಾಮಾನ್ಯನಿಗೆ ನಿಲುಕದೆಂದು ಅರಿತ ನಮ್ಮ ಪೂರ್ವಿಕರು ಆ ತತ್ತ್ವವನ್ನು ಕಥೆ, ಪುರಾಣಗಳ ಮೂಲಕ ತಿಳಿಸಿಕೊಟ್ಟರು. ಇಂದು ಪುರಾಣ, ಕಾವ್ಯಗಳು ಕೇವಲ ಕಪೋಲಕಲ್ಪಿತ ಘಟನೆಯಂತೆ ರಮ್ಯ ಕಥೆಗಳಂತೆ ತೋರುತ್ತವೆ. ಭಾರತೀಯ ಕಲಾಪ್ರಕಾರಗಳು ಗಾಢವಾದ ತಾತ್ವಿಕತೆಯಿಂದಲೇ ಕೂಡಿದ್ದು, ವಿವಿಧ ಆಯಾಮಗಳಲ್ಲಿ ಅವು ಮಾನವನ ಅಭ್ಯುದಯಕ್ಕೆ ಕಾರಣೀಭೂತವಾಗಿವೆ.

ವಿಜಯದಶಮಿಯನ್ನೇ ಗಮನಿಸುವುದಾದರೆ, ಅದು ಎಷ್ಟೊಂದು ಅರ್ಥಪೂರ್ಣ, ವೈವಿಧ್ಯಪೂರ್ಣ ಎಂಬುದು ತಿಳಿಯುತ್ತದೆ. ಪಶ್ಚಿಮ ಮತ್ತು ಉತ್ತರ ಭಾರತಗಳಲ್ಲಿ ಶ್ರೀರಾಮನ ವಿಜಯೋತ್ಸವದ ಸಂಕೇತವಾಗಿ ಪೂರ್ವ ಮತ್ತು ದಕ್ಷಿಣ ಭಾರತದಲ್ಲಿ ಶರನ್ನವರಾತ್ರಿಯಾಗಿ ಹಾಗೂ ದುರ್ಗಾರಾಧನೆಯಾಗಿಯೂ ಆಚರಿಸುತ್ತಾರೆ. 'ವಿಜಯದಶಮಿ'ಯಲ್ಲಿರುವ 'ವಿಜಯ' ಎಂಬುದು ಗೆಲುವಿಗೆ ಪರ್ಯಾಯವಾಗಿದೆ. ಯಾವುದರ ವಿರುದ್ಧ ವಿಜಯ?

ಕುಮಾರವ್ಯಾಸನ ಮೇಲಿನ ಪದ್ಯವೇ ಹೇಳುವಂತೆ ಅದು ದುಷ್ಟಶಕ್ತಿಗಳ ವಿರುದ್ಧದ ವಿಜಯ. ದುರ್ಗಾಪೂಜೆಯು ಸ್ತ್ರೀಶಕ್ತಿಯ ಆರಾಧನೆಯನ್ನು ಸೂಚಿಸುತ್ತದೆ. ಶೈವ, ವೈಷ್ಣವಗಳಂತೆ ಶಾಕ್ತ ಪದ್ಧತಿಯೂ ಇಲ್ಲಿ ಬಳಕೆಯಲ್ಲಿದೆ. ಕೇವಲ ಹಿಂದೂಗಳಲ್ಲಿ ಮಾತ್ರವಲ್ಲದೆ, ಜೈನರಲ್ಲಿಯೂ 'ಭಗವತಿ ಆರಾಧನೆ' ಎಂಬ ಪೂಜಾವಿಧಾನ ಇದೆ. ನವರಾತ್ರಿಯಲ್ಲಿ ನವದುರ್ಗೆಯರನ್ನು ಪೂಜಿಸುವ ಪದ್ಧತಿ ಅತ್ಯಂತ ಪ್ರಮುಖವಾದುದು. ರಾಮಾಯಣದ ನೆನಪಿಗಾಗಿ ದೆಹಲಿಯಲ್ಲಿ ರಾವಣನ ಪ್ರತಿಕೃತಿಯನ್ನು ದಹಿಸುವ ಸಂಪ್ರದಾಯವಿದೆ. ರಾಮ, ರಾವಣರೆಂಬ ವ್ಯಕ್ತಿಗಳು ಬೇರೆಬೇರೆ ಜನಾಂಗಕ್ಕೆ ಸಂಬಂಧಿಸಿದವರೆಂಬ ವಿಚಿತ್ರವೂ, ಸಂಕುಚಿತವೂ ಆದ ಕಲ್ಪನೆ ಕೆಲವರದು. ವಾಸ್ತವದಲ್ಲಿ ಅದನ್ನು ಗಮನಿಸಬೇಕಾದ ರೀತಿ ಬೇರೆಯೇ ಆಗಿದೆ. ಕುವೆಂಪು ಅವರು 'ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ 'ಆ ರಾಮಂ ಆ ರಾವಣಂ ದಿಟಂ' ಎನ್ನುವ ಮೂಲಕ ರಾಮ ಮತ್ತು ರಾವಣ ಎನ್ನುವುದು ವ್ಯಕ್ತಿಗಳಾಗದೆ ವ್ಯಕ್ತಿತ್ವಕ್ಕೆ ಸಂಬಂಧಿಸಿದ ತತ್ತ್ವವೆಂಬುದನ್ನು ಮನೋಜ್ಞವಾಗಿ ಚಿತ್ರಿಸುತ್ತಾರೆ.

ಅಂತೆಯೇ ರಾಮಾಯಣವೆಂದರೆ ಅದು ದಶರಥನ ಕಥೆ. ದಶರಥನ ಹೆಸರಿನಲ್ಲಿರುವ 'ದಶ' ಎಂಬುದು ಐದು ಕರ್ಮೇಂದ್ರಿಯಗಳು ಹಾಗೂ ಐದು ಜ್ಞಾನೇಂದ್ರಿಯಗಳನ್ನು ಪ್ರತಿನಿಧಿಸುತ್ತದೆ. ಹತ್ತು ಇಂದ್ರಿಯಗಳನ್ನು ಯಾರು ನಿಯಂತ್ರಣದಲ್ಲಿ ಇಟ್ಟುಕೊಂಡಿರುತ್ತಾನೆಯೋ ಅವನೇ ದಶರಥ. ಅಂತಹವನ ಚಿತ್ತವೇ ಮನೋಹರವಾದ (ರಾಮ) ಆನಂದಕ್ಕೆ ನೆಲೆವೀಡು. ರಾಮ ಅಂದರೆ ಮನೋಹರವಾದ ಆನಂದ. ಆನಂದದ ವಿವಿಧ ಬೆಳಕುಗಳೆಂದರೆ ಮಹಾನಂದ, ಆತ್ಮಾನಂದ ಮತ್ತು ಬ್ರಹ್ಮಾನಂದ. ಅವು ಅನುಕ್ರಮವಾಗಿ ರಾಮನ ತಮ್ಮಂದಿರಾದ ಲಕ್ಷ್ಮಣ, ಭರತ, ಶತ್ರುಘ್ನರನ್ನು ಪ್ರತಿನಿಧಿಸುತ್ತವೆ. ಹಾಗೆಯೇ ದಶಕಂಠ ಎಂದರೆ ಹತ್ತು ತಲೆ ಹೊಂದಿರುವವನು. ಹತ್ತು ಇಂದ್ರಿಯಗಳನ್ನು ಅಧೀನದಲ್ಲಿಟ್ಟುಕೊಂಡವನು ದಶರಥನಾದರೆ, ಅದಕ್ಕೆ ಅಡಿಯಾಳಾದವನು ದಶಕಂಠ. ರಾವಣನಿಗೆ ಇಪ್ಪತ್ತು ಕೈಗಳು ; ಸಪ್ತಧಾತುಗಳು, ಸಪ್ತವ್ಯಸನಗಳು, ಅರಿಷಡ್ವರ್ಗಗಳು – ಇವೆಲ್ಲವೂ ಸೇರಿದರೆ ಇಪ್ಪತ್ತು. ರಾಮಾಯಣವನ್ನು ಹೀಗೆ ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುವ ಸಕೀಲ ಭಾರತೀಯ ಪರಂಪರೆಯಲ್ಲಿದೆ. ಪುರಾಣ ಕೃತಿಗಳನ್ನು ತಿಳಿಯುವ ಸಂಬಂಧ ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಭಾರತದಲ್ಲಿ ಮಹತ್ವದ ಅಧ್ಯಯನಗಳು ನಡೆದಿವೆ.

ಪರಂಪರೆಯನ್ನು ಸರಿಯಾಗಿ ಪೃಥಕ್ಕರಿಸಿ ನೋಡಬೇಕಾದ ಹೊಣೆಗಾರಿಕೆ ಎಲ್ಲರದು ಆಗಿದೆ. ಒಂದು ವಿಚಾರವನ್ನು ಅರಿಯದೆ ಆಚರಿಸುವುದು ಮೌಢ್ಯ. ಅರಿತರೆ ಜ್ಞಾನ. ಅರಿತು ಅಡಿಯಿಡಬೇಕಾದದ್ದು ಆದ್ಯತೆಯಾಗಬೇಕು. ಈ ಹಿನ್ನೆಲೆಯಲ್ಲಿ ಭಾರತೀಯ ಪರಂಪರೆಯ ಆಚರಣೆಗಳನ್ನು ಸೂಕ್ತವಾಗಿ, ಸೂಕ್ಷ್ಮವಾಗಿ ಅರ್ಥೈಸಿಕೊಳ್ಳಬೇಕಾದ ಜವಾಬ್ದಾರಿ ಎಲ್ಲರದು.

**– ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಕ್ಷುತ್ಕಾಮೋಪಿ ಜರಾಕೃಶೋಽಪಿ ಶಿಥಿಲಪ್ರಾಯೋಽಪಿ ಕಷ್ಟಾಂ ದಶಾ
ಮಾಪನ್ನೋಽಪಿ ವಿಪನ್ನದೀಧಿತಿರಪಿ ಪ್ರಾಣೇಷು ನಶ್ಯತ್ಸ್ವಪಿ ।
ಮತ್ತೇಭೇಂದ್ರ ವಿಭಿನ್ನ ಕುಂಭಪಿಶಿತಗ್ರಾಸೈಕಬದ್ಧಸ್ಪೃಹಃ
ಕಿಂ ಜೀರ್ಣಂ ತೃಣಮತಿ ಮಾನಮಹತಾಮಗ್ರೇಸರಃ ಕೇಸರೀ ॥
(ಭರ್ತೃಹರಿ)

ಹಸಿವಿನಿಂದ ಸೊರಗಿದ್ದರೂ, ಮುಪ್ಪಿನಿಂದ ಕೃಶವಾಗಿದ್ದರೂ, ಶಿಥಿಲವಾಗಿದ್ದರೂ, ಕಷ್ಟದ ಪರಿಸ್ಥಿತಿಯಲ್ಲಿದ್ದರೂ, ಆಪತ್ತಿನಲ್ಲಿದ್ದರೂ, ಜೀವವೇ ಹೋಗುತ್ತಿದ್ದರೂ. ಸ್ವಾಭಿಮಾನಿಗಳಲ್ಲಿ ಅಗ್ರಗಣ್ಯವಾದ ಸಿಂಹವು ಮದ್ದಾನೆಯ ಕುಂಭಸ್ಥಲವನ್ನು ಬಗೆದು ಮಾಂಸವನ್ನು ಬಯಸುವುದೇ ವಿನಾ ಒಣಹುಲ್ಲನ್ನು ತಿನ್ನುತ್ತದೆಯೇ? ಎನ್ನುವುದು ಭರ್ತೃಹರಿಯ ನೀತಿಶತಕದ ಮಾತು.

ಸ್ವಾಭಿಮಾನವೆಂದರೆ ಅಹಂಕಾರವಲ್ಲ. ತನ್ನ ನಿಷ್ಠೆ, ಗೌರವಕ್ಕೆ ಕುಂದು ಬಾರದಂತೆ ಬಾಳುವುದು. ಅಹಂಕಾರವು ತಮ್ಮ ಗುಣಗಳೇ ಮೇಲು, ತನ್ನಿಂದಲೇ, ಎಲ್ಲವೂ ತನ್ನದೇ ಎನ್ನುವ ಸಂಕುಚಿತ ಭಾವ. ಸ್ವಾಭಿಮಾನವು ವ್ಯಕ್ತಿತ್ವದ ಒಂದು ಮೌಲ್ಯ. ಅದೊಂದು ಗುಣವಿಶೇಷ. ಅಹಂಕಾರವೆಂಬುದು ಅವಗುಣ. ಸ್ವಾಭಿಮಾನ ತನ್ನದೇ ಸರಿತಪ್ಪುಗಳನ್ನು ಅಳೆದು ತೂಗಿ ರೂಪಿಸಿಕೊಂಡ ಬಂಗಾರ. ಅಹಂಕಾರ ಎನ್ನುವುದು ಸರಿ–ತಪ್ಪುಗಳ, ವಿವೇಕಾವಿವೇಕಗಳ ಅರಿವಿಲ್ಲದೆ ರೂಪುಗೊಂಡ ಕಾಗೆಬಂಗಾರ. ಸ್ವಾಭಿಮಾನವು ಇಹಪರಗಳಲ್ಲಿ ಸಲ್ಲುವ ಸಂಪದ; ಅಹಂಕಾರ ಇಹಹರಗಳ ನಡುವಣ ಕಂದಕ. ಸ್ವಾಭಿಮಾನ ಎನ್ನುವುದು ಸ್ವತಃ ನಾವೇ ಸಂಪಾದಿಸಿಕೊಳ್ಳಬೇಕಾದ ನಿರಹಂಕಾರ ಮೇಲರಿಮೆ. ಅಹಂಕಾರವು ಕೀಳರಿಮೆಯಿಂದ ಮೂಡುವ ವಿಶೇಷ ದೋಷ.

ಅನೇಕ ಬಾರಿ ನಮಗೆ ಸ್ವಾಭಿಮಾನ ಮತ್ತು ಅಹಂಕಾರಗಳ ನಡುವಿನ ವ್ಯತ್ಯಾಸವೇ ಗೊತ್ತಿಲ್ಲದಂತಾಗಿ ಒಂದಕ್ಕೊಂದು ಬೆರೆತುಹೋಗಿ ನಮ್ಮ ನಡವಳಿಕೆಯನ್ನು ರೂಪಿಸಿಕೊಳ್ಳುವ, ಸಮರ್ಥಿಸಿಕೊಳ್ಳುವ ಕಾರ್ಯಗಳನ್ನು ಮಾಡುತ್ತೇವೆ. ಅದೊಂದು ಹಾಲು ನೀರಿನ ಮಿಶ್ರಣದಂತೆ. ಒಂದರೊಡನೆ ಒಂದು ಬೆರೆತುಹೋಗುತ್ತದೆ. ಬೇರ್ಪಡಿಸಲೇ ಆಗದಷ್ಟು ಹೊಂದಿಕೊಂಡುಬಿಡುತ್ತದೆ. ಅದರೆ ಹಾಲು ಹಾಲೇ, ನೀರು ನೀರೇ. ಈ ಎರಡನ್ನು ಪ್ರತ್ಯೇಕಿಸಿ ಅನುಸರಿಸುವುದೇ ವಿವೇಕ. ಇದಕ್ಕೊಂದು ಸೂಕ್ತ ಉದಾಹರಣೆ ಎಂದರೆ ದುರ್ಯೋಧನ. ಆತ ಸ್ವಾಭಿಮಾನಿಯೂ ಹೌದು,

ಅಹಂಕಾರಿಯೂ ಹೌದು. ಅವುಗಳನ್ನು ಪ್ರತ್ಯೇಕಿಸುವುದು ಸಾಧ್ಯವಾಗದೇ ಅಂತ್ಯವನ್ನು ಕಂಡ. ಕಾವ್ಯದ ಕೊನೆಯಲ್ಲಿ ಅವನ ಸ್ವಾಭಿಮಾನವೇ ಪ್ರಕಟವಾಯಿತು ಎಂಬುದೊಂದು ಸಮಾಧಾನದ ವಿಷಯ. ನಮ್ಮ ನಡವಳಿಕೆಗಳು, ಶೀಲಚಾರಿತ್ರ್ಯಗಳು ಸಮಯಸಾಧಕವಾಗಿರಬಾರದು, ಅದೊಂದು ಸ್ಥಿತಿಸ್ಥಾಪಕ ತತ್ತ್ವವಲ್ಲ. ಸ್ಥಿತಿಸ್ಥಾಪಕತ್ವಕ್ಕೂ ತನ್ನದೇ ಆದ ಒಳಸತ್ವವಿದೆ. ನೀರು ಯಾವ ಪಾತ್ರೆಗೆ ಹಾಕಿದರೂ ಆ ಪಾತ್ರೆಯ ಆಕಾರಕ್ಕೆ ಬದಲಾಗುತ್ತದೆ. ಆದರೆ ಅದು ತನ್ನ ಮೂಲಗುಣವನ್ನು ಕಳೆದುಕೊಳ್ಳುವುದಿಲ್ಲ. ಅಂತೆಯೇ ಪರಿಸ್ಥಿತಿಗೆ ಹೊಂದಿಕೊಳ್ಳುವುದೆಂದರೆ, ಸಿರಿತನವಿದ್ದಾಗ ಬಾಳಿದಂತೆಯೇ, ಬಡತನ ಬಂದಾಗಲೂ ಹಾಗೆಯೇ ಬದುಕಬೇಕಂದಲ್ಲ. ಅದರಿಂದ ಅಪಾಯವೇ ಹೆಚ್ಚು. ಹಾಗೆ ಬದುಕಲೇಬೇಕೆನ್ನುವುದು ಅಹಂಕಾರವಾಗುತ್ತದೆ. ಅದಕ್ಕೆ ಬದಲಾಗಿ ಪರಿಸ್ಥಿತಿಗೆ ಅನುಸಾರವಾಗಿ ನಮ್ಮ ಭೌತಿಕ ಸಲಕರಣೆಗಳು ಬದಲಾಗಬೇಕೇ ಹೊರತು, ನಮ್ಮ ಬೌದ್ಧಿಕ ಸ್ಥಿತಿಯಲ್ಲ. ನಮ್ಮ ಆಲೋಚನೆಯಲ್ಲಿ ಸ್ವಾಭಿಮಾನ ಎನ್ನುವುದು ಕೇವಲ ವೈಯಕ್ತಿಕವಾದುದಲ್ಲ. ಅದು ವ್ಯಕ್ತಿ, ಭಾಷೆ, ಧರ್ಮ, ಎಲ್ಲದರ ಒಟ್ಟು ಸಂಕೀರ್ಣ ಸ್ವರೂಪ ಆಗಿರಬಹುದು.

ಇಂದು ನಮ್ಮ ಯುವಸಮುದಾಯ ಬದುಕಿನ ಇಂತಹ ಚಿಂತನೆಗಳಿಂದ ದೂರವಾಗುತ್ತಿದ್ದಾರೆ, ಅಥವಾ, ಗೊಂದಲದಲ್ಲಿದ್ದಾರೆ. ಅಥವಾ ಬದುಕನ್ನು ಸ್ವತಃ ಗೊಂದಲಗೊಳಿಸಿಕೊಂಡಿದ್ದಾರೆ. ಹೇಗೋ ಬದುಕು ಸಾಗಿಸಬೇಕು ಎನ್ನುವ ಪ್ರವೃತ್ತಿ, ಸಿರಿತನದಲ್ಲಿ ಬಾಳಬೇಕು ಎನ್ನುವ ಹಪಹಪಿ ಅವರಲ್ಲಿ ಹೆಚ್ಚುತ್ತಿದೆ. ಬದುಕಿಗೆ ಬೆಲೆ ಬರಬೇಕಾದರೆ ನಮ್ಮ ಬಾಳು ನಿಯಮಿತವಾಗಿ ಸಾಗಬೇಕು. ನಮ್ಮ ನಡತೆಯಿಂದ ಬದುಕೇ ಸಿರಿತನವಾಗಬೇಕೇ ಹೊರತು, ಸಿರಿತನದಿಂದ ಬದುಕುವುದೇ ದೊಡ್ಡದಲ್ಲ. ಹಣ ತಂದುಕೊಡುವ ಗೌರವ ತಾತ್ಕಾಲಿಕವಾದದ್ದು. ಅದೊಂದು ಕಾಮನಬಿಲ್ಲಿನಂತೆ ವರ್ಣರಂಜಿತವಾಗಿ ಕಾಣುತ್ತದೆಯೇ ಹೊರತು, ಅದು ಸತ್ಯವಲ್ಲ. ಅದೊಂದು ನೆರಳು–ಬೆಳಕಿನ ಭ್ರಮೆ. ಇಂದು ಯುವಕರು ಭ್ರಮಾಧೀನತೆಯ ಬದುಕಿನತ್ತ ಸಾಗುತ್ತಿರುವುದು ಅಪಾಯಕಾರಿ. ಸ್ವಾಭಿಮಾನವಿಲ್ಲದವರಿಂದ ಚರಿತ್ರೆ ಸೃಷ್ಟಿ ಆಗುವುದಿಲ್ಲ, ಚಾರಿತ್ರ್ಯನಿರ್ಮಾಣವೂ ಆಗುವುದಿಲ್ಲ. ಆದರ್ಶವಂತೂ ಇನ್ನೂ ದೂರದ ಮಾತು. ಇದಕ್ಕೆ ನಮ್ಮ ಸುತ್ತಲಿನ ವಾತಾವರಣ, ಶಿಕ್ಷಣಗಳೂ ಕಾರಣವಾಗಿದ್ದು ಅಲ್ಲಿ ಆದರ್ಶವೇ ಮಾಯವಾಗಿದೆ. ಬದುಕು ಒಂದು ವ್ಯಾಪಾರದ ಸರಕಾಗಿದೆ. ಇಂದಿನ ಶಿಕ್ಷಣವೂ ಯುವಕರನ್ನು ಕೇವಲ ಮಾರುಕಟ್ಟೆಯ ಸರಕಾಗಿ ರೂಪಿಸುತ್ತಿದೆ. ಶಿಕ್ಷಣವು ಇಂದು ಯುವಕರನ್ನು ಸಂಪಾದನೆಯ ಒಂದು ಯಂತ್ರವಾಗಿ ಮಾತ್ರ ರೂಪಿಸುತ್ತಿದೆ. ಈ ಹಿನ್ನೆಲೆಯಲ್ಲಿ, ಚಾರಿತ್ರ್ಯ ಮತ್ತು ಶೀಲಗಳು ಮಾತ್ರ ನಮ್ಮನ್ನು ರಕ್ಷಿಸುವುದರಿಂದ ಯುವಕರು ಸ್ವಾಭಿಮಾನಿಗಳಾಗಬೇಕಾದುದು ಅತ್ಯಂತ ಅಗತ್ಯ.

**– ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಪರಮಾಶ್ರಯ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

**ತದ್ವನಂ ನಾಮ ತದ್ವನಂ ಇತಿ ಉಪಾಸಿತವ್ಯಂ**

**ಕೇನೋಪನಿಷತ್ ೪(೬)**

'ತದ್ವನಂ' ದೇವನಿಗೆ ಅನ್ವರ್ಥಕನಾಮ. ಏನು ಆ ವನದ ವೈಭವ! ಅಲ್ಲಿ ಮುಗಿಲೆತ್ತರದ ಮರಗಳು. ವಿಶಾಲವಾಗಿ ಹಬ್ಬಿದ ಪರ್ವತಶ್ರೇಣಿಗಳು. ನಿಸರ್ಗ ನಿರ್ಮಿತ ಪ್ರಶಾಂತ ಗುಹೆಗಳು. ತಿಳಿನೀರಿನ ಹೊಳೆಗಳು. ಜುಳುಜುಳು ಹರಿಯುವ ಹಳ್ಳಗಳು. ಆಳವಾದ ಕೊಳ್ಳಗಳು. ಸಿಹಿಫಲದ ವೃಕ್ಷರಾಶಿ. ಹಸಿರು ಹಾಸಿಗೆ, ಮಂದ ಮಾರುತ. ದಟ್ಟಮರಗಳ ಮಧ್ಯದಿಂದ ತೂರಿಬರುವ ಹಿತವಾದ ರವಿಕಿರಣ! ಆಗೀಗ ಸುರಿಯುವ ಮಳೆ. ಘನಗಂಭೀರ ಕತ್ತಲೆ! ಬೆಳ್ಳಂಬೆಳಕು!!

ಈ ಬೃಹದಾರಣ್ಯದಲ್ಲಿ ಬಲಿಷ್ಠ-ದುರ್ಬಲ, ಕ್ರೂರ-ಸಾಧು, ಶಾಕಾಹಾರಿ-ಮಾಂಸಾಹಾರಿ, ಹತ್ತು ಹಲವು ವಿಧದ ಪಶು-ಪಕ್ಷಿ ಜೀವಜಂತುಗಳು ಆಶ್ರಯ ಪಡೆದು ಪ್ರಶಾಂತ ಜೀವನ ಸಾಗಿಸುತ್ತಲಿವೆ! ಸಾಮಾನ್ಯವಾಗಿ ಪ್ರಾಣಿಗಳು ಭಯಗೊಂಡಾಗ ಅರಣ್ಯವನ್ನು ಪ್ರವೇಶಿಸುತ್ತವೆ. ಅರಣ್ಯವು ಅವುಗಳಿಗೆಲ್ಲ ಅಭಯವನ್ನು ಕೊಟ್ಟು ಕಾಪಾಡುತ್ತದೆ. ಅಂತೆಯೇ ಅದು ಅಭಯಾರಣ್ಯ!

ಹಾಗೆಯೇ ಮಾನವ ಮೊದಲು ಮಾಡಿ ಪ್ರಪಂಚದ ಸಕಲ ಜೀವರಾಶಿಗಳು ಯಾವುದನ್ನು ಆಶ್ರಯಿಸಿವೆಯೋ ಅದು ವನ, ದೇವವನ! ಒಳ್ಳೆಯದು ಕೆಟ್ಟದ್ದು ಎನ್ನದೆ ಈ ದೇವವನದಲ್ಲಿ ಸಕಲ ಜೀವರಾಶಿಗಳಿಗೆ ಸಮಾನ ಅವಕಾಶ, ರಕ್ಷಣೆ! ಈ ದೇವವನದಲ್ಲಿ ಶ್ರದ್ಧೆಯಿಂದಿರುವ ಮನುಷ್ಯನು ನಿಜವಾದ ಆನಂದವನ್ನು ಪಡೆಯುತ್ತಾನೆ. ಆದ್ದರಿಂದ ಇದು ಆನಂದವನವೂ ಅಹುದು!

ಹೀಗೆ 'ವನ' ಇದು ದೇವನಿಗೆ ಬರೀ ಹೆಸರಲ್ಲ. ಅದು ಉಪನಿಷತ್ತಿನ ಋಷಿಗಳು ದೇವನಿಗೆ ಕೊಟ್ಟಿರುವ ಲಾಕ್ಷಣಿಕ ಅಭಿಧಾನ! 'ವನ' ಎಂದರೆ ಆಶ್ರಯಸ್ಥಾನ. ಪರಮಾತ್ಮನು ಈ ವಿಶ್ವದ ಪರಮಾಶ್ರಯ! ನಾವೀ ಪ್ರಪಂಚದಲ್ಲಿ ಲೌಕಿಕವಾದ ಎಲ್ಲ ಆಶ್ರಯಗಳನ್ನೂ ಬಿಟ್ಟಿರಬಹುದು. ಆದರೆ ಪರಮಾತ್ಮನನ್ನು ಬಿಟ್ಟು ಒಂದು ಅರೆಗಳಿಗೆಯೂ ಇಲ್ಲಿ ಯಾವುದೂ ಯಾರೂ ಬಾಳರು. ಇಂಥ ಪರಮಾತ್ಮನ ಅರಿವನ್ನು ಮಾಡಿಕೊಡುವ ಗುರುವೂ ನಮಗೆ ಪರಮಾಶ್ರಯನೇ! ಅಂತೆಯೇ ಗುರುವೂ ಸಕಲರನ್ನೂ ಸಮನಾಗಿ ಕಾಣುವನು,

ಕರುಣಿಸುವನು. ಹೀಗೆ ಈ ಜಗತ್ತಿನಲ್ಲಿ ಎರಡು ದಿವ್ಯ ಪರಮಾಶ್ರಯಗಳು. ದೇವರು ಹಾಗೂ ದೇವಸ್ವರೂಪನಾದ ಗುರು!

ಸಾಗರದಲ್ಲಿ ಜೀವಿಸುವ ಮೀನಿಗೆ ಸಾಗರವೇ ಆಶ್ರಯ. ಅದು ಸಾಗರದಲ್ಲಿಯೇ ಹುಟ್ಟಿ, ಬೆಳೆದು ಅಲ್ಲಿಯೇ ಇಲ್ಲವಾಗುತ್ತದೆ! ಪರಮಾತ್ಮನಿಗೆ ಅದರ ಪರಿಶುದ್ಧ ಜೀವನ ಕಂಡು ಕರುಣೆ ಹುಟ್ಟಿತು. ಒಮ್ಮೆ ಒಂದು ಮೀನಿನ ಬಳಿಗೆ ಹೋಗಿ ಹೇಳಿದ, "ನಾನು ನಿನ್ನನ್ನು ಉದ್ಧರಿಸಲು ಬಂದಿದ್ದೇನೆ!" ಮೀನು ಹೇಳಿತು "ದೇವಾ, ನಾನು ಧನ್ಯನಾದೆ; ಆದರೆ ಹೇಗೆ ಉದ್ಧರಿಸುವೆ?"

"ನಿನ್ನನ್ನು ಸ್ವರ್ಗಕ್ಕೆ ಕರೆದೊಯ್ದು ಸುಖದ ಸಾಮ್ರಾಜ್ಯದಲ್ಲಿ ಇರಿಸುತ್ತೇನೆ" ಎಂದನು ಪರಮಾತ್ಮ. "ಅದು ನನ್ನ ಭಾಗ್ಯವೆಂದು ಭಾವಿಸುತ್ತೇನೆ. ಆದರೆ ನಿನ್ನ ಸ್ವರ್ಗದಲ್ಲಿ ಸಾಗರವಿದೆಯೆ?" ಎಂದು ಕೇಳಿತು ಆ ಮೀನು!

ಮೀನಿನ ಕನಸು ಮನಸ್ಸಿನಲ್ಲಿಯೂ ಸಾಗರವೇ ತುಂಬಿತ್ತು! ಸ್ವರ್ಗದ ವೈಭವಕ್ಕಿಂತ ಅದಕ್ಕೆ, ತನ್ನ ಸಾಗರವೇ ದೊಡ್ಡದು. ಏಕೆಂದರೆ ಸಾಗರವು ಮೀನಿಗೆ ಪರಮಾಶ್ರಯ; ಹಾಗೆಯೆ ಜೀವನಿಗೆ ದೇವನೇ ಪರಮಾಶ್ರಯ, ಪರಮಸಂಪದ!

ಗುರುವಾದರೂ ದೇವರಂತೆ ನಮಗೆಲ್ಲ ಪರಮಾಶ್ರಯನೇ! ಅಂತೆಯೇ ಗುರುವು ಮಾನವರಲ್ಲಿ ಯಾವ ಬಗೆಯಾದ ಭೇದವನ್ನೂ ಎಣಿಸನು. ಸರ್ವರಿಗೂ ಸಮನಾಗಿ ಅರಿವಿನಾಶ್ರಯವನ್ನಿತ್ತು ಉದ್ಧರಿಸುವನು.

ಒಂದು ದಿನ ಬುದ್ಧನ ಬಳಿಗೆ ಒಬ್ಬನು ಬಂದು ವಂದಿಸಿ ಹೇಳಿದ, "ಪೂಜ್ಯರೆ, ತಾವು ನನಗೆ ಆಶ್ರಯ ಕೊಡಬೇಕು. ನಾನೊಬ್ಬ ನಿರ್ಗತಿಕ." "ಆಗಲಿ, ನಿನಗೆ ಆಶ್ರಯವನ್ನು ಕೊಡಲಾಗುತ್ತದೆ" ಎಂದ ಬುದ್ಧ. "ಆದರೆ, ನಾನೊಬ್ಬ ಶೂದ್ರ" ಎಂದ ಆಗಂತುಕ.

"ಯಾರಾದರೂ ಸರಿ, ಇದು ನಿರ್ವಾಣಕ್ಷೇತ್ರ. ಬುದ್ಧವನ. ಇಲ್ಲಿ ಎಲ್ಲರಿಗೂ ಆಶ್ರಯವಿದೆ!" ಎಂದು ಬುದ್ಧ ಭಗವಾನರು ನುಡಿದಾಗ ಆಗಂತುಕನ ಕಣ್ಣಲ್ಲಿ ಆನಂದ ಬೆಳಗಿತು. ಸಕಲರಿಗೂ ಆಶ್ರಯವನ್ನಿತ್ತ ಬುದ್ಧನು ಪರಮಗುರು!

ಬುದ್ಧನಂತೆಯೇ ಬಸವಣ್ಣನವರೂ ಸಕಲ ಶರಣರಿಗೆ ಆಶ್ರಯವನ್ನಿತ್ತರು. "ಶರಣರು ಬರುವುದೇ ಎಮಗೆ ಪ್ರಾಣ ಜೀವಾಳವಯ್ಯಾ!" ಎಂದರು. ದೇಶದ ಎಲ್ಲ ಭಾಗಗಳಿಂದ ಸಮಾಜದ ಎಲ್ಲ ವರ್ಗದ ಶರಣರನ್ನು ಹೃದಯದುಂಬಿ ಬರಮಾಡಿಕೊಂಡರು. 'ಭಕ್ತಿಮಂದಿರ'ದಲ್ಲಿ ಸರ್ವರನ್ನೂ ಸ್ವಾಗತಿಸಿದರು. ಅಂತೆಯೇ ಕಲ್ಯಾಣವು ಬಸವಕಲ್ಯಾಣವಾಯಿತು, ಶಿವಕಲ್ಯಾಣವಾಯಿತು. "ಸಕಲ ಜೀವರಾಶಿಗಳ ಲೇಸನ್ನೇ" ಬಯಸಿತು.

ಹೀಗೆ ಪ್ರಪಂಚಕ್ಕೆಲ್ಲಾ ಪರಮಾಶ್ರಯರಾದ 'ದೇವ'ರ ಅರಿವು ನಮಗಿಲ್ಲ. ಅಂತೆಯೇ ನಮ್ಮಲ್ಲಿ ನಿರರ್ಥಕ ಅಹಂಕಾರ, ಅಭಿಮಾನ ತಲೆದೋರಿದೆ. ನಾವೇ ಶ್ರೇಷ್ಠರೆಂಬ ಭಾವ

ಬಲಿತಿದೆ.  ಅದೇ ಭಕ್ತಿಗೆ ಆತಂಕವಾಗಿದೆ. ನಿಜವಾಗಿ ನೋಡಿದರೆ ಈ ಜಗತ್ತಿನಲ್ಲಿ ಯಾರು ಶ್ರೇಷ್ಠರು? ಯಾರು ಶಕ್ತಿವಂತರು?

ಅದೊಂದು ವಿಶಾಲವಾದ ಭೂಪ್ರದೇಶ. ಅಲ್ಲೊಂದು ಗರಿಕೆಯು ತನ್ನನ್ನು ಸಲುಹಿದ ಸೃಷ್ಟಿಯ, ಮೇಲಾಗಿ ಭೂದೇವಿಯ ಸ್ತುತಿಯನ್ನು ಮಾಡುತ್ತಾ ನಿರಹಂಕಾರಿಯಾಗಿ ಸದುವಿನಯದಿಂದ ಸಂತಸದೊಂದಿಗೆ ಬದುಕಿತ್ತು. ಭಗವದರ್ಪಿತ ಬಾಳನ್ನು ಬಾಳುತ್ತಿತ್ತು!

ಒಂದು ದಿನ ಗಾಳಿಯು 'ನಾನೇ ಈ ಜಗತ್ತಿನಲ್ಲಿ ಶಕ್ತಿವಂತ' ಎಂದು ಹೆಮ್ಮೆಯ ಹಾಡನ್ನು ಹೇಳುತ್ತ ಸಾಗಿತ್ತು. ಅದನ್ನು ಕೇಳಿಸಿಕೊಂಡ ಗರಿಕೆ ನುಡಿಯಲು "ಗಾಳಿಯೇ, ನಿನ್ನಷ್ಟು ಶಕ್ತಿವಂತರು ಈ ಜಗತ್ತಿನಲ್ಲಿ ಯಾರೂ ಇಲ್ಲವೇನು?" "ಯಾರಿದ್ದಾರೆ? ನಾನೇ ಎಲ್ಲರಿಗಿಂತ ಶಕ್ತಿವಂತ!" ಎಂದು ಗಾಳಿಯು ದರ್ಪದಿಂದ ಹೇಳಿತು. "ಹಾಗಾದರೆ ನನ್ನ ಮೇಲೆ ನಿನ್ನ ಶಕ್ತಿಯನ್ನು ಪ್ರಯೋಗಿಸು, ನನ್ನ ಬೇರನ್ನು ಕಿತ್ತುಹಾಕು, ನೋಡೋಣ!" ಎಂದಿತು ಗರಿಕೆ.

'ಈ ಕ್ಷುದ್ರಜೀವಿಯು ನನ್ನೊಂದಿಗೇ ವಾದಿಸುತ್ತದೆಯಲ್ಲಾ!' ಎಂದು ಗಾಳಿಯು ವಿಪರೀತವಾಗಿ ಬೀಸತೊಡಗಿತು. ಬೀಸಿ ಬೀಸಿ ಸುಸ್ತಾಯಿತು. ಅಷ್ಟು ಹೊತ್ತಿಗೆ ಮುಗಿಲೆತ್ತರದ ಮರಗಳೇ ಉರುಳಿದ್ದವು. ಸಾಗರವೆಲ್ಲ ಅಲ್ಲೋಲಕಲ್ಲೋಲವಾಗಿತ್ತು. ನದಿಗಳು, ಹಳ್ಳಗಳು ತಮ್ಮ ಪಾತ್ರವನ್ನೇ ಬದಲಿಸಿದ್ದವು. ಆದರೆ ಗರಿಕೆ ಮಾತ್ರ ನಸುನಗುತ್ತಲಿತ್ತು! ಅದನ್ನು ಕಂಡು "ನಾನೇ ಶಕ್ತಿವಂತ"ನೆಂದು ಅಹಂಕರಿಸುತ್ತಿದ್ದ ಗಾಳಿಯ ತಲೆ ಕೆಳಗಾಗಿತ್ತು! ಪರಮಾಶ್ರಯವಾದ ಪರಿಸರವನ್ನು ಪರಮಾತ್ಮನನ್ನೇ ನಂಬಿ ನಿರಹಂಕಾರದಿಂದಿದ್ದ ಗರಿಕೆಗೆ ಗೆಲುವಾಗಿತ್ತು!!

ಒಂದು ಕತ್ತೆ. ಅದರ ಮೇಲೆ ಮುತ್ತುರತ್ನದ ಗಂಟು ಹೊರಿಸಿದ್ದರು. ಅದಕ್ಕೆ ಕುದುರೆ ಕೇಳಿತು, "ಗೆಳೆಯಾ, ನಿನ್ನ ಮೇಲೆ ಎಂಥಾ ಅಮೂಲ್ಯ ಸಂಪದವಿದೆ. ಆ ಕುರಿತು ನಿನ್ನಲ್ಲಿ ಎಳ್ಳನಿತೂ ಅಭಿಮಾನವಿಲ್ಲವಲ್ಲ,  ಏಕೆ?"

ಕತ್ತೆ ಹೇಳಿತು, "ಆ ಸಂಪತ್ತು ನನ್ನ ಮೇಲಿದೆ. ನಾನು ಆ ಸಂಪತ್ತಿನ ಮೇಲಿಲ್ಲ. ಅದಕ್ಕೆ ನಾನು ಆಶ್ರಯನೇ ವಿನಾ ಅದು ನನಗೆ ಆಶ್ರಯವಲ್ಲ. ನನ್ನನ್ನೇ ಆಶ್ರಯಿಸಿರುವ ಇಂಥ ಜಡಸಿರಿಯ ಕುರಿತು ನಾನೇಕೆ ಅಭಿಮಾನ ಪಡಬೇಕು? ಒಂದು ವೇಳೆ ಆ ಸಂಪತ್ತು ಅವನ ಕೈಬಿಟ್ಟುಹೋದರೆ ಅವನ ದುಃಖ ಹೇಳತೀರದು. ಈ 'ಚಿಂತೆ-ಚಿತೆ'ಯ 'ದುಃಖ-ದುಮ್ಮಾನ'ದ ಸಿರಿಯ ಅಭಿಮಾನ ಅವನಿಗೆ, ನನಗಲ್ಲ!" ಎಂದಿತಾ ಜಾಣ ಪ್ರಾಣಿ.

ಸಂಸಾರದ ಎಲ್ಲ 'ಸಿರಿಸಂಪದ' ನಮ್ಮನ್ನು ಆಶ್ರಯಿಸಿದೇ ವಿನಾ ನಾವು ಅದನ್ನು ಆಶ್ರಯಿಸಿಲ್ಲ.  ಪರಾವಲಂಬಿಯೂ, ನಶ್ವರವೂ ಆದ ಇಂಥ ಜಡಸಿರಿ ಕುರಿತು ನಾವೇಕೆ ಅಭಿಮಾನಿಸಬೇಕು?  ಬದಲಾಗಿ ನಿತ್ಯನಿರಾಲಂಬನೂ, ಜಗದ ಪರಮಾಶ್ರಯನೂ ಆದ ದೇವನಲ್ಲಿ ಅಚಲವಾದ ಶ್ರದ್ಧೆಯನ್ನಿಟ್ಟು ನಿರಹಂಕಾರಿ ಯಾಗಿರುವುದೇ ನಿಜಭಕ್ತಿ!

❑

# ಅನ್ನ ದೇವರು

**ಡಾ. ಎಂ.ಎನ್. ನಂದೀಶ್ ಹಂಚೆ**

ಬಾನಾಡಿಗಳೆಲ್ಲ ತಮ್ಮ ಪಯಣ ಮುಗಿಸಿ ಮುಸ್ಸಂಜೆ ತಮ್ಮ ಗೂಡುಗಳಿಗೆ ಹಿಂದಿರುಗುತ್ತಿದ್ದ ಸಮಯ. ಅವುಗಳ ಚಿಲಿಪಿಲಿ ಮಠದ ವಾತಾವರಣಕ್ಕೆ ಅದ್ವಿತೀಯವಾದ ಆಧ್ಯಾತ್ಮಿಕ ಪರಿವೇಷವನ್ನು ನಿರ್ಮಿಸಿದ್ದವು. ದೂರದ ಬಳ್ಳಾರಿಯಿಂದ ಬಂದ ನನಗೆ ರಾಜೇಂದ್ರ ಶ್ರೀಗಳನ್ನು ಕಂಡು, ಮಾತನಾಡಿಸಿ, ಅವರ ಆಶೀರ್ವಾದ ಪಡೆಯುವುದು ಮುಖ್ಯ ಉದ್ದೇಶವಾಗಿತ್ತು. ಸರಿಸುಮಾರು ಸಂಜೆ 5.30. ಶ್ರೀಮಠದಲ್ಲಿ ಹೆಚ್ಚೇನೂ ಭಕ್ತರಿರಲಿಲ್ಲ. ನಾನು ಬಂದಿರುವುದನ್ನು ತಿಳಿದ ರಾಜೇಂದ್ರ ಶ್ರೀಗಳು ನನ್ನನ್ನು ಒಳಕರೆದರು. "ಯಾವಾಗ ಬಂದಿರಿ" ಎಂದರು. ನಾನು "ಬೆಳಗ್ಗೆ ಬಂದೆ, ಸ್ನೇಹಿತರನ್ನು, ಸಂಬಂಧಿಕರನ್ನು ನೋಡಿಕೊಂಡು, ಸ್ವಲ್ಪ ಸ್ವಂತ ಕಾರ್ಯಗಳಿದ್ದವು, ಅವುಗಳನ್ನೆಲ್ಲ ಮುಗಿಸಿಕೊಂಡು ತಮ್ಮ ದರ್ಶನ ಮಾಡೋಣವೆಂದು ಬಂದೆ" ಎಂದೆ. "ತಮ್ಮ ವಕೀಲ ವೃತ್ತಿ ಹೇಗಿದೆ" ಎಂದರು ಶ್ರೀಗಳು. "ಚೆನ್ನಾಗಿದೆ, ಬಳ್ಳಾರಿಯಲ್ಲಿ ಭೂವ್ಯವಹಾರಕ್ಕೆ ಸಂಬಂಧಿಸಿದ ಮೊಕದ್ದಮೆಗಳೇ ಹೆಚ್ಚು ಬುದ್ಧಿ. ಸಣ್ಣಪುಟ್ಟ ವಿಷಯಕ್ಕೂ ಜನ ಪೊಲೀಸ್ ಠಾಣೆ, ಕೋರ್ಟುಗಳಿಗೆ ಬರುತ್ತಾರೆ. ವಿವೇಕ ಕಡಿಮೆ ತಮ್ಮಲ್ಲೇ ಕುಳಿತು ಬಗೆಹರಿಸಿಕೊಳ್ಳಬಹುದಾದ ಎಷ್ಟೋ ವಿಷಯಗಳನ್ನು ಪ್ರತಿಷ್ಠೆಗೆ ಬಿದ್ದು ಕಟಕಟೆಗೆ ಬರುತ್ತಾರೆ" ಎಂದೆ. "ತಮ್ಮ 'ರೈತ ಪತ್ರಿಕೆ' ಹೇಗೆ ನಡೆಯುತ್ತಿದೆ. ಪ್ರಸಾರ ಚೆನ್ನಾಗಿದೆಯೇ" ಎಂದು ವಿಚಾರಿಸಿದರು ಶ್ರೀಗಳು. "ಪರವಾಗಿಲ್ಲ ಬುದ್ಧಿ, ಪ್ರಸಾರ ಅಷ್ಟೇನೂ ಚೆನ್ನಾಗಿಲ್ಲ" ಎಂದೆ, "ಬೇಜಾರೇನೂ ಇಲ್ಲ, ರೈತರೇ ಈ ದೇಶದ ಬೆನ್ನೆಲುಬು. ಅವರ ಕೃಷಿ ಬದುಕು ಸಮೃದ್ಧವಾಗಬೇಕು. ಆಧುನಿಕ ಕೃಷಿ ಬೇಸಾಯದ ತಿಳುವಳಿಕೆ ಅವರಿಗೆ ದೊರೆಯಬೇಕು. ಹೊಸ ಹೊಸ ಸಾಧನ–ಸಲಕರಣೆಗಳ ಪರಿಚಯವಾಗಬೇಕು. ಅದಕ್ಕಾಗಿ ಪತ್ರಿಕೆಯನ್ನು ಅನೇಕ ಬಾರಿ ನನ್ನನ್ನು ಭೇಟಿಯಾದ ರೈತರಿಗೆ ಉಚಿತವಾಗಿಯೇ ನೀಡುತ್ತಿದ್ದೇವೆ" ಎಂದೆ.

"ತಮ್ಮ ಕರ್ನಾಟಕ ಏಕೀಕರಣದ ಹೋರಾಟ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದೆ. ಆದಷ್ಟು ಬೇಗ ಅದು ಸಂಪನ್ನಗೊಳ್ಳಬೇಕು. ಎಲ್ಲ ಕನ್ನಡಿಗರೂ ಒಂದೇ ಸೂರಿನಡಿ ಬಾಳುವಂತಾಗಬೇಕು" ಎಂದು ತಮ್ಮ ಸದಾಶಯವನ್ನು ಶ್ರೀಗಳು ವ್ಯಕ್ತಪಡಿಸಿದರು. ಬಳ್ಳಾರಿ, ರಾಯಚೂರು, ಗದಗ, ಬೀದರ್ ಹೀಗೆ ಅನೇಕ ಕಡೆಗಳಲ್ಲಿ ವೀರಶೈವ–ಲಿಂಗಾಯತ

ಮಠಗಳ ಸ್ವಾಮಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದ ರಾಜೇಂದ್ರ ಶ್ರೀಗಳಿಗೆ ನಾಡಿನಾದ್ಯಂತ ನಡೆಯುತ್ತಿದ್ದ ಏಕೀಕರಣ ಹೋರಾಟದ ಎಲ್ಲ ಮಾಹಿತಿಯೂ ಇತ್ತು. ನನ್ನ ಹಾಗೂ ಗುರುಗಳ ಸಂಭಾಷಣೆ ನನ್ನ ವೃತ್ತಿಯಿಂದ ಮೊದಲುಗೊಂಡು ಎಲ್ಲ ವಿಷಯಗಳ ಬಗ್ಗೆ ಗಾಢವಾದ ವಿಚಾರ ವಿನಿಮಯ ಜರುಗುತ್ತಿರುವಾಗಲೇ, ಯಾರೋ ಮಠದ ಒಬ್ಬಾತ (ಆತನ ಪರಿಚಯವಿರಲಿಲ್ಲ ನನಗೆ) ಬಂದು ಶ್ರೀಗಳ ಕಿವಿಯಲ್ಲಿ ಏನೋ ಹೇಳಿದ. ತಕ್ಷಣಕ್ಕೆ ಮಾತು ಬದಲಾಯಿಸಿದ ಶ್ರೀಗಳು, "ಚೆನ್ನಬಸಪ್ಪನವರೆ ತಾವು ಇಂದು ಮೈಸೂರಿನಲ್ಲೇ ಉಳಿಯುತ್ತಿದ್ದೀರ" ಎಂದರು. ಹಾಗೆ ಕೇಳುವಾಗ ಅವರಲ್ಲಿ ಒಂದು ಬಗೆಯ ವಿಚಿತ್ರ ದುಗುಡವಿತ್ತು. ಆ ವ್ಯಕ್ತಿ ಹೇಳಿದ ಯಾವುದೇ ವಿಷಯದಿಂದಲೇ ಆ ದುಗುಡ ಉಂಟಾದದು ಎನ್ನುವುದು ನನಗೆ ಗೊತ್ತಾಯಿತು. ಶ್ರೀಗಳ ಮಾತಿಗೆ ನಾನು "ಹೌದು ಬುದ್ಧಿ" ಎಂದೆ. "ಸರಿ, ಹಾಗಾದರೆ ನಾಳೆ ಬೆಳಗ್ಗೆ ತಮ್ಮನ್ನು ಭೇಟಿಯಾಗುತ್ತೇವೆ" ಎಂದು ಎದ್ದು ಹೊರಟೇ ಬಿಟ್ಟರು. ನನಗೆ ಏನೊಂದೂ ತಿಳಿಯದಾಯಿತು.

ಮಾರನೆಯ ದಿನ ಬೆಳಗ್ಗೆ ನಿಗದಿತ ವೇಳೆಗೆ ಶ್ರೀಮಠಕ್ಕೆ ತೆರಳಿ, ಶ್ರೀಗಳನ್ನು ಭೇಟಿಯಾದೆ ಪೂಜೆ, ಪ್ರಸಾದ ಸ್ವೀಕರಿಸಿ ನನಗಾಗಿ ಕಾಯುತ್ತಿದ್ದಂತೆ ತೋರಿತು. ಶ್ರೀಮಠದ ಮುಂದೆ ಮೂಟೆ ತುಂಬಿದ್ದ ಎಂಟ್ಹತ್ತು ಎತ್ತಿನ ಗಾಡಿಗಳು ನಿಂತಿದ್ದವು. ಶ್ರೀಗಳ ಕಾಲಿಗೆ ನಮಸ್ಕರಿಸಿದೆ. "ಪ್ರಸಾದವಾಯಿತೆ" ಎಂದರು. "ಆಯಿತು" ಎಂದೆ. "ನಿಮಗಾಗಿಯೇ ಕಾಯುತ್ತಿದ್ದೆ" ಎಂದರು. "ಅಯ್ಯೋ ತಾವೇಕೆ ನನಗಾಗಿ ಕಾಯಬೇಕು ಬುದ್ಧಿ, ಅಂತಹ ಮಹತ್ವದ ಯಾವ ಕಾರ್ಯವೂ ನನಗಿಲ್ಲ, ಕೇವಲ ತಮ್ಮನ್ನು ಕಾಣುವುದಕ್ಕಾಗಿ ಬಂದಿದ್ದೆ, ಅಷ್ಟೆ" ಎಂದೆ. "ಇಲ್ಲ ಇಲ್ಲ, ನಿನ್ನೆ ದಿನ ತಾವು ನನ್ನನ್ನು ಕಾಣಲು ಬಂದು, ತಮ್ಮ ಯೋಗಕ್ಷೇಮವನ್ನು ಸಂಪೂರ್ಣವಾಗಿ ವಿಚಾರಿಸದೆ ಅರ್ಧಕ್ಕೇ ಹೊರಟುಬಿಡಬೇಕಾಯಿತು. ಅದು ನನಗೆ ಸೂಕ್ತವೆನಿಸಲಿಲ್ಲ" ಎಂದರು. ಶ್ರೀಗಳ ಮಾತು ನನ್ನನ್ನು ಗಾಢ ಮೌನಕ್ಕೆ, ಒಂದು ತೆರನಾದ ದಿವ್ಯಾನುಭೂತಿಗೆ ತಳ್ಳಿತ್ತು. ಒಂದು ಭವ್ಯ ಮಠದ ಮಠಾಧಿಪತಿಗಳು ಸಾಮಾನ್ಯನಾದ ನನ್ನಂಥವನ ಬಗ್ಗೆ ಹೊಂದಿರುವ ಆಲೋಚನಾ ಕ್ರಮ, ನನ್ನನ್ನು ನಿಬ್ಬೆರಗುಗೊಳಿಸಿತ್ತು. ಸಾವರಿಸಿಕೊಂಡು "ತಾವು ನಿನ್ನೆ ಅಷ್ಟೊಂದು ದುಗುಡದಲ್ಲಿ ತೆರಳಿದಿರಲ್ಲ, ಏನಾಯಿತು ಬುದ್ಧಿ, ಯಾರಿಗಾದರೂ ಅಪಾಯ ಸಂಭವಿಸಿತೇ ಅಥವಾ ಯಾರಾದರು ನಿಧನರಾಗಿದ್ದರೆ" ಎಂದೆ ಸಹಜ ಕುತೂಹಲದಿಂದ. ಅದಕ್ಕೆ ಶ್ರೀಗಳು "ಇಲ್ಲ ಚೆನ್ನಬಸಪ್ಪನವರೆ, ನಿನ್ನೆ ದಿನ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಪ್ರಸಾದಕ್ಕೆ ಬೇಕಾದ ದವಸಧಾನ್ಯಗಳು ಮುಗಿದುಹೋಗಿದ್ದವು. ರಾತ್ರಿಗೆ ಏನೂ ಇರಲಿಲ್ಲ. ಈ ವಿಚಾರವನ್ನು ನಿನ್ನೆಯೇ ನನ್ನ ಗಮನಕ್ಕೆ ತಂದಿದ್ದರು. ಕೆಲಸಗಳ ಗಲಾಟೆಯಲ್ಲಿ ಅದು

ಮರೆತುಹೋಗಿತ್ತು. ಆತ ಮತ್ತೆ ನೆನಪಿಸಿದಾಗ ಗಾಬರಿಯಾಯಿತು. ಅದಕ್ಕಾಗಿ ತಮ್ಮ ಯೋಗಕ್ಷೇಮದ ಮಾತನ್ನು ಅರ್ಧಕ್ಕೇ ನಿಲ್ಲಿಸಬೇಕಾಯಿತು. ರಾತ್ರಿ ಶ್ರೀರಂಗಪಟ್ಟಣದ ಹಳ್ಳಿಗಳಿಗೆ ತೆರಳಿ ಧಾನ್ಯವನ್ನು ಸ್ವೀಕರಿಸಿ ಬರಬೇಕಾಯಿತು. ಎಲ್ಲವೂ ಮುಗಿದು ಶ್ರೀಮಠಕ್ಕೆ ತಲುಪಿದಾಗ ಬೆಳಗಿನ ಜಾವ ಮೂರು ಗಂಟೆ. ತಮ್ಮನ್ನು ಬರಹೇಳಿದ್ದೆವಲ್ಲ ಎಂದು ಬಂದ ಕೂಡಲೇ ಉಳಿದ ಎಲ್ಲ ಕಾರ್ಯ ಮುಗಿಸಿ, ಪೂಜೆ ಮುಗಿಸಿ ನಿಮಗಾಗಿ ಕಾಯುತ್ತಿದ್ದೆವು" ಎಂದರು. "ಇಷ್ಟೆಲ್ಲ ಅವಸರದಿಂದ ಇದನ್ನೆಲ್ಲಾ ಮಾಡಬೇಕಾಗಿತ್ತೆ ಬುದ್ಧಿ, ರಾತ್ರಿ ತಮ್ಮ ಪೂಜೆ ಪ್ರಸಾದವೂ ಇಲ್ಲದೆ ಇವೆಲ್ಲ ಬೇಕಿತ್ತೆ" ಎಂದೆ. "ಚೆನ್ನಬಸಪ್ಪನವರೆ, ನಮ್ಮ ಒಬ್ಬರ ಹಸಿವಿನ ಬಗ್ಗೆ ತಾವು ಇಷ್ಟೊಂದು ಯೋಚಿಸುತ್ತಿದ್ದೀರಿ. ಆದರೆ ನಮ್ಮನ್ನೇ ನಂಬಿ, ಇಲ್ಲಿಗೆ ಓದಲು ಬಂದಿರುವ ವಿದ್ಯಾರ್ಥಿಗಳು ರಾತ್ರಿ ಹಸಿದಿದ್ದಾರೆ ಎಂದು ಯೋಚಿಸಿ. ಅನ್ನವೇ ನಿಜವಾದ ದೇವರಲ್ಲವೇ? ಅದನ್ನು ಸ್ವೀಕರಿಸಿದಾಗ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮೂಡುವ ಆನಂದವೇ ಪೂಜೆಯಲ್ಲವೇ? ಉಳಿದಂತೆ ನಾವು ಮಾಡುವುದು ಕೇವಲ ತೋರಿಕೆಯ ಪೂಜೆ ಅಷ್ಟೆ" ಎಂದರು.

ಒಂದು ಸಂಪ್ರದಾಯಸ್ಥ ಅಧಿಪತಿಗಳಾಗಿದ್ದ ಅವರಾಡಿದ ಆ ಮಾತು ನನ್ನನ್ನು ದಿಗ್ಭ್ರಮೆಗೊಳಿಸಿತ್ತು. ನಾನು ಬದುಕಿನುದ್ದಕ್ಕೂ ರಾಜೇಂದ್ರ ಶ್ರೀಗಳನ್ನು ದೇವರಂತೆ ಕಂಡದ್ದು ಈ ಕಾರಣದಿಂದಲೇ, ಅವರ ಆ ಭೂತದಯೆಯೇ ನಮ್ಮ ನಾಡಿನ ಸಂತ ಸಂಪ್ರದಾಯದ ಮಹಾಮಾರ್ಗವಾಗಿ ಕಂಡಿತ್ತು ನನಗೆ. ಮನಸ್ಸು ಧನ್ಯತೆಯಲ್ಲಿ ಮಿಂದೆದ್ದಿತ್ತು.

❑

ಸಟೆದಿಟವೆಂಬ ಎರಡುವಿಡಿದು ನಡೆವುದೀ ಲೋಕವೆಲ್ಲವು
ಸಟೆದಿಟವೆಂಬ ಎರಡುವಿಡಿದು ನುಡಿವುದೀ ಲೋಕವೆಲ್ಲವು
ಸಟೆದಿಟವೆಂಬ ಎರಡುವಿಡಿದು ನಡೆವನೆ ಶರಣನು ?
ಗುರುಲಿಂಗಜಂಗಮದಲ್ಲಿ ಸಟೆಯ ಬಳಸಿದಡೆ
ಅವನು ತ್ರಿವಿಧಕ್ಕೆ ದ್ರೋಹಿ, ಅಘೋರ ನರಕಿ
ಉಂಬುದೆಲ್ಲ ಕಿಲ್ಬಿಷ, ತಿಂಬುದೆಲ್ಲ ಅಡಗು, ಕುಡಿವುದೆಲ್ಲ ಸುರೆ
ಹುಸಿಯೆಂಬುದೆ ಹೊಲೆ, ಶಿವಭಕ್ತಂಗೆ ಹುಸಿಯೆಂಬುದುಂಟೆ ಅಯ್ಯಾ ?
ಹುಸಿಯನಾಡಿ ಲಿಂಗವ ಪೂಜಿಸಿದಡೆ ಹೊಳ್ಳ ಬಿತ್ತಿ ಫಲವನರಸುವಂತೆ

**– ಅಕ್ಕಮಹಾದೇವಿ**

ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರವಿಲಾಸ–ಟೀಕು

**ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು**

ಮ ॥ಸ್ರ॥ ಚರಣನ್ಯಾಸಕ್ಕೆ ಕೂರ್ಮಂ ಕುಸಿಯೆ ಫಣಿ ಫಣಾಮಂಡಲಂ ಬಳ್ಕೆ ಬಾಹಾ ।
ಪರಿಘೌಘಭ್ರಾಂತಿಯಿಂ ತಿರ್‍ರನೆ ತಿರುಗೆ ಮಹಾಪುಷ್ಕಲಾವರ್ತಕಂ ಭಾ ॥
ಸ್ಕರಚಂದ್ರಾದಿ ಗ್ರಹವ್ರಾತಮು ಮರುಣ ಜಟಾಘಾತದಿಂ ಸೂಸೆ ತಾರೋ ।
ತ್ಕರಮೆತ್ತಂಮೆಯ್ಯಾಳಂಧಾಸುರನ ಮಸಗಿ ದೈನ್ಯತ್ಯದಿಂ ಮೃತ್ಯುವೈರಿ ॥ ೧೧ ॥

**ಟೀಕೆ** ॥ ಮೃತ್ಯುವೈರಿ–ಕಾಲಶತ್ರುವಾದಶಿವನೇ! ಚರಣನಾಸಕ್ಕೆ – ನೀನಡಿಯಿಡುವುದಕ್ಕಾಗಿ, ಕೂರ್ಮಂ – ಪಾತಾಳಕಮಠನು, ಕುಸಿಯೆ – ಕುಗ್ಗಲು, ಫಣಿಫಣಾಮಂಡಲಂ – ಶೇಷನ ಹೆಡೆಗಳ ಗುಂಪು, ಬಳ್ಕೆ – ನಡುಗಲು, ಬಾಹಾಪರಿಘೌಘಭ್ರಾಂತಿಯಿಂ ಪರಿಘಾಯುಧಗಳ ಹಾಗಿರುವ ತೋಳುಗಳ ಭ್ರಮಣದಿಂದ, ಮಹಾಪುಷ್ಕಳಾವರ್ತಕಂ – ನವಮೇಘಗಳೂ. ಭಾಸ್ಕರಚಂದ್ರಾದಿ ಗ್ರಹವ್ರಾತಮುಂ–ಸೂರ್ಯಚಂದ್ರರೇ ಮೊದಲಾದ ಗ್ರಹಗಳ ಗುಂಪೂ, ತಿರ್‍ರಗೆತಿರು – ಗಿರಗಿರನೆ ತಿರುಗುತ್ತಿರಲು, ಅರುಣಜಟಾಘಾತದಿಂ – ಕೆಂಪುಜಡೆಗಳ ಪೆಟ್ಟಿನಿಂದ, ತಾರೋತ್ಕರಂ–ನಕ್ಷತ್ರಸಮೂಹವು, ಎತ್ತಂ – ಎಲ್ಲಿಯೂ, ಸೂಸೆ – ಸುರಿಯುತ್ತಿರಲು, ಅಂಧಾಸುರನ – ಅಂಧಕಾಸುರನ, ಮೆಯ್ಯೊಳು – ಶರೀರದಲ್ಲಿ, ನೃತ್ಯದಿಂದ – ನಾಟ್ಯದಿಂದ, ಮಸಗಿದ್ದೈ – ಕೆರಳಿದೆ.

**ತಾ** ॥ ಅಂಧಕಾಸುರನನ್ನು ಕೆಡವಿಕೊಂಡು ಅವನ ಎದೆಯ ಮೇಲೆ ನೀನು ಕುಣಿಯುವಾಗ ನಿನ್ನ ತುಳಿತಕ್ಕೆ ಭೂಮಿಯು ಜಗ್ಗಲು ಕೆಳಗೆ ಹೊತ್ತಿರುವ ಆದಿಕೂರ್ಮನು ಕುಸಿದನು. ಭೂಮಿಯಂ ಪೊತ್ತಿರುವ ಶೇಷನ ಸಾವಿರ ಹೆಡೆಗಳು ಬಳುಕಿದವು. ನೀನು ದಶಭುಜಗಳ ಅಭಿನಯಹಸ್ತಗಳಿಗಾಗಿ ತಿರುಗಿಸಿದಾಗ ನವಮೇಘಗಳೂ ನವಗ್ರಹಗಳೂ ತಿರುಗಿದವು. ನಿನ್ನ ಕೆಂಜೆಡೆಗಳು ತಗುಲಿ ಚುಕ್ಕೆಗಳುದುರುತ್ತಿದ್ದವು.

**ಕಥೆ** ॥ ಮಂದರಾದ್ರಿಯ ಶೃಂಗಾರಾರಾಮದೊಳು ವಿಲಾಸಾರ್ಥವಾಗಿ ಗೌರಿಯು ಹರನ ಕಣ್ಣು ಮುಚ್ಚಿದಾಗ ಲೋಕತ್ರಯವೂ ಅಂಧಕಾರಮಯವಾಯಿತು. ಕಣ್ಣು ತೆರೆದ ಬಳಿಕ ಗಿರಿಜೆಯ ಕೈಯೊಳಗಿನಿಂದ ಗಂಗೆ ಹುಟ್ಟಿದ ಬಳಿಕ ಲೋಕವಂ ತೀವಿರ್ದ ಅಂಧಕಾರವೆಲ್ಲವೂ ಮೂರ್ತೀಭವಿಸಿ ಅಂಧಕಾಸುರನೆಂಬ ಶಿಶುವಾಯಿತು. ಆ ಶಿಶುವನ್ನು ಪುತ್ರಾರ್ಥಿಯಾಗಿ ತಪವಂಗೆಯ್ವುತಿರ್ದ ಹಿರಣ್ಯಾಕ್ಷನೆಂಬ ದೈತ್ಯನಿಗೆ ಶಿವನೇ

ಕರುಣಿಸಿಕೊಟ್ಟನು. ಅಂಧಕಾಸುರನು ತಪವಂಗೆಯ್ದು. ವರಗಳಂ ಪಡೆದು ಹಿರಣ್ಯಾಕ್ಷ ಹಿರಣ್ಯಕಶಿಪುಗಳಂ ಕೊಂದ ವಿಷ್ಣುವಂ ಸೋಲಿಸಿ ಸೆರೆಯೊಳಗಿಟ್ಟು ಪ್ರಹ್ಲಾದನಂ ಹೊಡೆದಟ್ಟಿ ಲೋಕತ್ರಯದವನಾಳಿದ. ಬ್ರಹ್ಮಾಂಡದೊಳಗೆ ಅವನಿಗೆ ಯಾರೂ ಪ್ರತಿಯಿಲ್ಲದಿರಲು ನಾರದಮುನಿಯ ಬಂದು ನೀನು ಶಿವನೋರ್ವನಂ ಗೆಲ್ಲಲಿಲ್ಲವೆಂದು ರೇಗಿಸಲಾಗಿ ಆ ದೈತ್ಯನು ಕೈಲಾಸದ ಮೇಲೆ ಯುದ್ಧಕ್ಕೆ ಹೊರಟನು.

ಪ್ರಮಥರೊಡನೆ ಅಸುರಸೈನ್ಯಕ್ಕೆ ಕಾಳಗವಾಗುತ್ತಿರಲು ಸರ್ವದೇವಪ್ರಾರ್ಥಿತನಾದ ಶಿವನೇ ಬಂದು ಅಂಧಕಾಸುರನಂ ಕೆಡಹಿದನು. ಆಗ ಭಕ್ತನಾದ ಅಂಧಕಾಸುರನು ಪ್ರಾರ್ಥಿಸಿದ್ದರಿಂದ ಅವನೆದೆಯ ಮೇಲೆ ಪರಮೇಶ್ವರನು ತಾಂಡವವನ್ನು ಮಾಡಿ ಅವನಿಗೆ ಪ್ರಮಥಗಣಗಳಲ್ಲಿ ರುದ್ರಪದವಿಯಿತ್ತನೆಂಬುವುದು ಐದು ಪುರಾಣಗಳಲ್ಲಿ ಹೇಳಲ್ಪಟ್ಟು ಪ್ರಸಿದ್ಧವಾಗಿದೆ. ನೆಟ್ಟನಂಧಕಾಸುರನೆದೆಯ ಮೇಲೆ ಭರತದ ಕಟ್ಟಳೆಗೆ ಕುಣಿದುದು ನಿನ್ನ ಪಾದ ಎಂದು 'ಕೈವಲ್ಯಪದ್ಧತಿ'ಯಲ್ಲಿ ನಿಜಗುಣರು ಹೇಳಿದ್ದಾರೆ ॥ ೧೧ ॥

ಮ ॥ಸ್ರ॥ ರವಿಚಂದ್ರರ್ಗಾಲಿಗಳ್ಸಾರಥಿ ಬಿದಿ ಪಳೆವಾತಶ್ವಮುರ್ವೀತಳಂ ಭೂ ।
ರಿವರೂಥಂ ಮೇರು ಚಾಪಂಪೆದೆ ಫಣಿಪತಿಬಾಣಂ ಮುಕುಂದಂ ಸಮಂತ ॥
ಪೊವಿಶೇಷಾಟೋಪದಿಂ ಮುಪ್ಪೊಳಲನುರುಪಿ ದೇವಾಂಗನಾಬಂಧನಂ ಪಿಂ ।
ಗುವಿನನ್ನೀಂ ರಕ್ಷಣಂಗೆಯ್ಯದೊಡುಳಿವರೆ ದೇವರ್ಕಳರ್ಧೇಂದುಚೂಡಾ ॥

**ಟೀಕೆ** ॥ ರವಿಚಂದ್ರರ್ – ಸೂರ್ಯಚಂದ್ರರು, ಗಾಲಿಗಳ್ – ಚಕ್ರಗಳು, ಸಾರಥಿ – ಬಂಡಿಯಂ ನಡೆಯಿಸುವವನು, ಬಿದಿ – ವಿಧಿ (ಬ್ರಹ್ಮನ), ಅಶ್ವಂ– ಕುದುರೆಯು, ಪಳೆವಾತು – ಹಳೆಯ ಮಾತು (ವೇದವು), ಭೂರಿವರೂಥಂ – ದೊಡ್ಡ ರಥವು, ಉರ್ವೀತಳಂ – ಭೂಪ್ರದೇಶವೇ, ಚಾಪಂ – ಬಿಲ್ಲು, ಮೇರು – ಮೇರಪರ್ವತವು, ಪಥ–ಹೆದೆ (ಬಿಲ್ಲಿಗೆ ಕಟ್ಟಿದ ಹಗ್ಗ), ಫಣಿಪತಿ – ಹೆಡೆಗಳುಳ್ಳ ಹಾವುಗಳಿಗೊಡೆಯನು (ಶೇಷನು), ಬಾಣಂ – ಸರಳು, ಮುಕುಂದಂ–ಮೋಕ್ಷವನ್ನು ಕೊಡುವ ವಿಷ್ಣುವು, ಸಮಂತು– ಎಲ್ಲವೂ, ಅಗೆ – ಆಗುತ್ತಲೂ, ಅರ್ಧೇಂದುಚೂಡ – ಅರ್ಧಚಂದ್ರನು ಶಿರೋಭೂಷಣವಾಗಿ ಉಳ್ಳವನೆ, ಮುಪ್ಪೊಳಲಂ – ತ್ರಿಪುರವನ್ನು, ವಿಶೇಷಾಟೋಪದಿಂ ಅಪಾರವಾದ ಆಡಂಬರದಿಂದ, ಉರುಪಿ – ಸುಟ್ಟು, ದೇವಾಂಗನಾಬಂಧನಂ – ದೇವ ಸ್ತ್ರೀಯರ ಸೆರೆಯು, ಪಿಂಗುವಿನಂ – ಹಿಂಜರಿಯುವಂತೆ, ನೀಂ – ನೀನು, ರಕ್ಷಣಂಗೆಯ್ಯದೊಡೆ – ಪಾಲಿಸದಿದ್ದರೆ, ದೇವರ್ಕಳ್ – ದೇವತೆಗಳು, ಉಳಿವರೆ ನಿಲ್ಲುವರೋ (ಬದುಕುವರೋ).

**ತಾ** ॥ ವಿಷ್ಣುಬ್ರಹ್ಮಾದಿ ದೇವತೆಗಳನ್ನು ಯುದ್ಧಸಾಧನಗಳನ್ನಾಗಿ ಮಾಡಿಕೊಂಡು ತ್ರಿಪುರಗಳನ್ನು ಸುಟ್ಟು ದೇವಸ್ತ್ರೀಯರ ಸೆರೆಯಂ ಬಿಡಿಸಿ ದೇವತೆಗಳನ್ನು ಪೊರೆದ ಪಶುಪತಿ ನೀನೆಂದು, ತ್ರಿಪುರದಹನ ಲೀಲೆಯಂ ಕೊಂಡಾಡಿದರ್.

**ಕಥೆ** – ಕುಮಾರಸ್ವಾಮಿಯಿಂದ ಕೊಲ್ಲಲ್ಪಟ್ಟ ತಾರಕಾಸುರನ ಮಕ್ಕಳಾಗಿದ್ದ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿಗಳೆಂಬುವರು ಬ್ರಹ್ಮನಂ ಕುರಿತು ತಪವಂ ಗೆಯ್ದು ವರವಂ ಪಡೆದು, ಆಕಾಶದಲ್ಲಿ ಚರಿಸುವಂಥ ತ್ರಿಪುರಗಳನ್ನು ನಿರ್ಮಿಸಿಕೊಂಡು ದುರ್ಜಯರಾಗಿ ದೇವರ್ಕಳಂ ಗೆದ್ದು ದೇವಸ್ತ್ರೀಯರಂ ಸೆರೆವಿಡಿದು ಲೋಕಕಂಟಕರಾಗಿದ್ದರೂ ತಪೋಬಲ ವುಳ್ಳವರಾದ್ದರಿಂದ ಅವರಂ ಜಯಿಸಲು ಯಾರಿಂದಲೂ ಆಗದೆ ದೇವತೆಗಳೆಲ್ಲರೂ ಪಶುಗಳಾಗಿ ಶಿವನಿಗೆ ಪಶುಪತಿಪಟ್ಟಮಂ ಕಟ್ಟಿ ತ್ರಿಪುರಂಗಳಂ ಜಯಿಸುವಂತೆ ಪ್ರಾರ್ಥಿಸಿದರು. ಭೂಮಿಯೇ ರಥ ಮೇರುವೇ ಬಿಲ್ಲು, ವೇದಗಳೇ ಕುದುರೆಗಳು, ಚಂದ್ರಸೂರ್ಯರೇ ಬಂಡಿಗಳು, ಬ್ರಹ್ಮನೇ ಸಾರಥಿಮ ಆದಿಶೇಷನೇ ಹೆದೆಮ ವಿಷ್ಣುವೇ ಬಾಣ, ಹೀಗೆ ಯುದ್ಧ ಸಾಧನಗಳಾಗಿ ಬರುತಲೂ ಪರಮೇಶ್ವರನು ರಥದ ಮೇಲೆ ಅಡಿಯಿಡುವಾಗ್ಗೆ ಅದು ತಡೆಯಲಾದರೆ ಜಗ್ಗುತ್ತಿರುವಾಗ ವಿಷ್ಣುವು ವೃಷಭಾವತಾರದಿಂದ ಆ ರಥವನ್ನು ಎತ್ತಿದನು. ಆಗ ಆ ಎತ್ತಿನ ಕಾಲು ಬಿಂದು ಎರಡು ಗೊರಸುಗಳಾದವು, ಅಂದಿನಿಂದ ಗೋಜಾತಿಯು ದ್ವಿಶಫವೆನಿಸಿತು. ಇಷ್ಟಾದರೂ ತ್ರಿಪುರಾಸುರರ ಪೆಣ್ಗಳು ಪತಿವ್ರತೆಯರಾಗಿಯೂ ಅವರ ಬಳಗವು ತಪೋಬಲವುಳ್ಳದ್ದಾಗಿಯೂ ಇದ್ದುದರಿಂದ ಅವರ ಪುಣ್ಯಕ್ಷಯಾರ್ಥವಾಗಿ ವಿಷ್ಣುವು ಬೌದ್ಧಾವತಾರವಂ ಗೆಯ್ದು ತ್ರಿಪುರಗಳಿಗೆ ಹೋಗಿ ಅವರಿಗೆ ಅನ್ಯಥಾಜ್ಞಾನವನ್ನು ಉಪದೇಶಂಗೆಯ್ದು ತಪವಂ ಕೆಡಿಸಿ ತನ್ನ ದಿಗಂಬರ ರೂಪದರ್ಶನದಿಂದ ಆ ಸ್ತ್ರೀಯರ ಪಾತಿವ್ರತ್ಯವಂ ನಾಶಗೊಳಿಸುತಲೂ ತ್ರಿಪುರಾಸುರರು ನಷ್ಟವಿದ್ಯರಾದರು. ಆ ಪುರಗಳಲ್ಲಿದ್ದ ಅಮೃತಸರೋವರದ ಬಲದಿಂದ ಸತ್ತ ದೈತ್ಯರೆಲ್ಲರೂ ಮರಳಿ ಮರಳಿ ಬದುಕುತ್ತಿರಲಾಗಿ ಅವರನ್ನು ಜಯಿಸುವುದು ಅಶಕ್ಯವಾದ್ದರಿಂದ ವಿಷ್ಣುವು ಗೋರೂಪವಂ ಧರಿಸಿ ಅಮೃತವಾಪಿಯಂ ಕುಡಿದು ಬರಿಗೆಯ್ವುತಲೂ ಅಲ್ಲಿಗೆ ದೈತ್ಯರು ನಿರ್ವೀರ್ಯರಾದರು. ಬಳಿಕ ದಿವ್ಯಸಹಸ್ರವರ್ಷಗಳ ತುದಿಯಲ್ಲಿ ತ್ರಿಪುರಗಳು ಒಂದುಗೂಡಿದಾಗ ಒಂದೇ ಬಾಣದಿಂದ ಅದಂ ಹೊಡೆಯಬೇಕೆಂಬ ನಿಯಮಕ್ಕಾಗಿ ಬಾಣರೂಪನಾದ ವಿಷ್ಣುವಂ ಬಿಲ್ಲಿಗೆ ಜೋಡಿಸಿ ಹಿಡಿದು ಪಶುಪತಿಯು ತ್ರಿಪುರಂಗಳಂ ನೋಡಿ ಇವುಗಳಂ ಸುಡುವುದಕ್ಕೆ ಇಷ್ಟು ಪರುಠವಣೆಯೇಕೆಂದು ನಕ್ಕುದರಿಂದಲೇ ತ್ರಿಪುರಗಳು ಉರಿದು ಭಸ್ಮವಾಗಿ ಪೋದವು ದೇವಸ್ತ್ರೀಯರ ಸೆರೆ ಬಿಡಲ್ಪಟ್ಟು ದೇವತೆಗಳ ರಕ್ಷಣೆಯಾಯಿತು. ಹೀಗೆ ಸರ್ವದೇವತಾಸೇವ್ಯನಾದ ಶಂಕರನು ತನ್ನ ಮಂದಸ್ಮಿತಲೇಶಮಾತ್ರದಿಂದ ತ್ರಿಪುರಂಗಳಂ ಉರುಹಿದನೆಂಬುವುದು ಶಿವನು ಪಂಚವಿಂಶತಿಲೀಲೆಗಳಲ್ಲೊಂದು ಲೀಲೆಯಾಗಿರುವಂತೆ ನಿಗಮಾಗಮ ಪುರಾಣಂಗಳಲ್ಲಿ ಬಹುಮುಖವಾಗಿ ಹಲವು ಬಗೆಯಿಂದ ಪ್ರಖ್ಯಾತಿಗೊಂಡಿದೆ ॥ ೧೨ ॥

ಮ ॥ಸ್ರ॥ ವಿಳಯಾಂಭೋರಾಶಿಯಂ ಧಿಕ್ಕರಿಸಿ ಗುಳುಗುಳು ಧ್ವಾನದಿಂ ಪರ್ವಿಧಾತ್ರೀ ।
ತಳಮೆತ್ತಾಕಾಶಮೇತ್ತೆಣ್ದೆಸೆಯ ಪಸರಮೆತ್ತೆಂಬ ವೋಲ್ತುಂಗಭಂಗಾ ॥
ವಳಿಯಂ ಧೀಂಕಿಟ್ಟು ಮೂಲೋಕವನಳುರ್ವ ಮಹಾಗಂಗೆಯಂ ಮೂರ್ಧದೊಳ್ಮಂ
ಜುಳಪುಷ್ಪಂದಾಳ್ದವೊಳ್ತಾಳ್ದಿರದೆ ಪೊರೆದೆ ಸರ್ವೋರ್ವಿಯಂ ಪಾರ್ವತೀಶ ॥

**ಟೀಕೆ** ॥ ವಿಲಯಾಂಭೋರಾಶಿಯಂ – ಪ್ರಳಯಕಾಲದ ಕಡಲನ್ನು, ಗುಳುಗುಳು ಧ್ವಾನದಿಂ – ಗುಳುಗುಳು ಶಬ್ದದಿಂದ, ಧಿಕ್ಕರಿಸಿ ಪಳಿದು, ಪರ್ಬಿ – ಹಬ್ಬಿ, ಧಾತ್ರೀತಳಂ – ಭೂಪ್ರದೇಶವು, ಎತ್ತ ಆವಕಡೆಯಿದೆ, ಆಕಾಶಮೆತ್ತ – ಬಾಂದಳವಲ್ಲಿದೆ, ಏಣ್ದೆಸೆಯ ಪಸರಮೆತ್ತ – ಅಷ್ಟದಿಕ್ಕುಗಳ ಸಂಘವೆಲ್ಲಿದೆ, ಎಂಬವೋಲ್ – ಎಂದೆಲ್ಲರಿಗೂ, ವಿವೇಕತಪ್ಪುವಂತೆ ತುಂಗಭಂಗಾವಳಿಯಿಂ – ಉದ್ದವಾದ ಅಲೆಗಳ ಸಾಲಿನಿಂದ, ಧೀಂಕಿಟ್ಟು – ಧುಮ್ಮಿಕ್ಕಿ, ಮೂಲೋಕವಂ – ಮೂರು ಲೋಕಗಳನ್ನೂ, ಅಳುರ್ವ – ವ್ಯಾಪಿಸುವ (ನಾಶಗೊಳಿಸುವ), ಮಹಾ ಗಂಗೆಯಂ – ಮಂದಾಕಿನೀ ನದಿಯನ್ನು, ಮೂರ್ಧದೋಳ್ – ತಲೆಯಲ್ಲಿ, ಮಂಜುಳಪುಷ್ಪಂ – ಮನೋಹರವಾದ ಹೂವನ್ನು, ತಾಳ್ದವೋಲ್ – ಧರಿಸಿದ ಹಾಗೆ, ತಾಳ್ದು – ಧರಿಸಿ, ಇರದೆ – ಉಪೇಕ್ಷಿಸದೆ, ಪಾರ್ವತೀಶ – ಗೌರೀಪತಿಯೇ, ಸರ್ವೋರ್ವಿಯಂ – ಸಕಲ ಭೂಮಿಯನ್ನು, ಪೊರೆದೆ – ರಕ್ಷಿಸಿದೆ.

**ತಾ** ॥ ಗಂಗಾಧರ ಲೀಲೆಯಿಂದ ಲೋಕವಂ ರಕ್ಷಿಸಿದವನೆಂದು ಭಾವವು.

**ಕಥೆ** – ವೇದಸಾರವಾದ ಸಚ್ಚಿದಾನಂದ ಪ್ರವಾಹವು ಪರಮೇಶ್ವರನ ತಲೆಯೊಳಗೆ ಅನಾದಿಸಿದ್ಧವಾಗಿ ನಿತ್ಯವೆನಿಸಿರ್ಪುದರಿಂದ ಶಿವನಿಗೆ ಗಂಗಾಧರತ್ವವು ನೈಮಿತ್ತಿಕವಲ್ಲವಾದರೂ ಒಂದೊಂದು ಕಾಲದೊಳಗೆ ಒಂದೊಂದು ನಿಮಿತ್ತದಿಂದ ಆ ವೇದಸಾರವು ಗಂಗಾರೂಪವಾಗಿ ಒಂದೊಂದು ಬಗೆಯಿಂದ ಅವತರಿಸಿ ಕಡೆಗೆ ಶಿವನ ಜಟಾಜೂಟವನ್ನೇ ಸೇರಿತು. ಮಂದರದೊಳು ಕ್ರೀಡಾರ್ಥವಾಗಿ ಹರನ ಕಣ್ಮುಚ್ಚಿದ ಪಾರ್ವತಿಯ ಹಸ್ತದೊಳು ಹರನೇತ್ರದಿಂದೊಗೆದು ದಶಪ್ರವಾಳಗಳಾಗಿ ಸಮುದ್ರಂಗಳಂ ತುಂಬಿ ಲೋಕವಂ ಮುಳುಗಿಸುತ್ತಿರುವ ಮಹಾಜಲರೂಪವಾದ ಗಂಗೆಯಂ ಆಕರ್ಷಿಸಿ ಶಿವನು ಮಂಡೆಯೊಳಗೊಂದು ಕಾಲದಲ್ಲಿ ಧರಿಸಿದಂತೆ ಎಂದು ಪುರಾಣದೊಳು ಹೇಳಲ್ಪಟ್ಟಿದೆ. ಮಹಾಲಿಂಗದ ಊರ್ಧ್ವಾಧೋಭಾಗಗಳನ್ನು ದರ್ಶನ ಮಾಡಿ ಬರಲೆಳಸಿ ಹಂಸ ವರಾಹರೂಪಗಳಿಂದ ಪೊಗಿರ್ದ ವಿಧಿ ವಿಷ್ಣುಗಳಲ್ಲಿ ಬ್ರಹ್ಮನು ಪ್ರವಾಹದಲ್ಲಿ ಬೀಳುತ್ತಿರುವ ಕೇದಗೆಯೆಸಳಂ ತರುವಾಗ ತನ್ನ ಮಂಡಲದೊಳು ತುಂಬಿದ್ದ ಗಂಗಾತೀರ್ಥದಿಂದ ವಿಷ್ಣುವಿನ ತ್ರಿವಿಕ್ರಮಾವತಾರದ ಊರ್ಧ್ವಚರಣವಂ ತೊಳೆದಾಗ ಹರಿಚರಣೋದ್ಭವೆ ಎನಿಸಿದ ಗಂಗೆಯಂ ಭಕ್ತಪಾದೋದಕವೆಂದು ಹರನು ಮೈಯೊಳಾಂತನೆಂಬುದೊಂದು ಕಥೆ. ಮತ್ತು, ಹಿಮಾಚಲಕ್ಕೆ ಗಂಗಾಗೌರಿಯರೀರ್ವರು ಹೆಮ್ಮಕ್ಕಳು ಹುಟ್ಟುತ್ತಲು

ಹಿಮವಂತನು ಗಂಗೆಯಂ ದೇವರ್ಕಳಿಗೂ ಗೌರಿಯಂ ಶಂಕರನಿಗೂ ಕೊಟ್ಟನು. ದೇವಲೋಕದೊಳಿದ್ದ ಆ ಮಂದಾಕಿನಿಯಂ ಸಗರಪುತ್ರರ ಸದ್ಗತಿಗೋಸುಗ ಭಗೀರಥರಾಯನು ಪ್ರಾರ್ಥಿಸಿ ದೇವಲೋಕದಿಂ ಬೀಳುವ ಗಂಗೆಯಂ ಧರಿಸಬೇಕೆಂದು ಪರಮೇಶ್ವರನಂ ಬೇಡಿಕೊಂಡನು. ಗಂಗೆಯು ದೇವಲೋಕದಿಂದ ಭೂಲೋಕವಂ ಕೊರದುಹಾಕುವೆನೆಂದು ಭಗೀರಥನು ಪೂಜಿಸಿದ್ದ ಪಾರ್ಥಿವ ಲಿಂಗಂಗಳ ರಾಶಿಯ ಮೇಲೆ ಬಿದ್ದು ಶಿವಮಹಿಮೆಯಿಂದ ಅಡಗಿಹೋಗಿತ್ತು. ಬಳಿಕ ಭಗೀರಥನಿಂದ ಪ್ರಾರ್ಥಿತನಾದ ಶಂಕರನು ತನ್ನ ಜಟಾಜೂಟದ ವ್ಯೋಮಕೇಶದಿಂದ ಒಂದು ತೊಟ್ಟನ್ನು ಹಿಮಗಿರಿಯ ಬಿಂದುಸರೋವರದಲ್ಲಿ ಬಿಟ್ಟನು. ಅದು ಏಳು ಬಗೆಯಾಗಿ ಹರಿದು ಮೂರು ಪ್ರವಾಹ ಮೂಡಲಿಗೂ ಮೂರು ಪಡುವಲಿಗೂ ಒಂದು ಪ್ರವಾಹ ಭಗೀರಥರಾಯನ ರಥದ ಹಿಂದೆ ದಕ್ಷಿಣಕ್ಕೂ ಬಂತು. ಆ ಭಾಗೀರಥಿಯೇ ಪೂರ್ವಸಾಗರದಲ್ಲಿ ಬಿದ್ದು ಕಪಿಲನೇತ್ರ ದಗ್ಧರಾಗಿದ್ದ ಸಗರಪುತ್ರರಿಗೆ ಸ್ವರ್ಗವಂ ಕೊಟ್ಟಿತು. ಇಂತೆಂಬ ಗಂಗಾಧರ ಲೀಲೆಯೊಂದು ವಾಲ್ಮೀಕಿರಾಮಾಯಣದ ಬಾಲಕಾಂಡದಲ್ಲಿ ಹೇಳಲ್ಪಟ್ಟಿದೆ. ಹೀಗೆ ಗಂಗಾವತರಣವು ಹಲವು ಬಗೆಯಾಗಿ ಪುರಾಣಪ್ರಸಿದ್ಧವಾಗಿರ್ಪುದು ॥೧೩ ॥

ಚಂ॥ ದಿವಿಜರನೊಕ್ಕಲಿಕ್ಕಿ ಸುರಕಾಂತೆಯರಂ ಸೆರೆಗೆಯ್ದುಸೊರ್ಕಿ ಸಾ ।  
ರ್ಕೆವರ ಜಲಂಧರಂ ಗೆಲವೊಡರ್ಚೆ ಜವಂ ಮಿಗೆಚಕ್ರಮೊಂದನ ॥  
ರ್ಣವದೊಳೆ ಪಾದದಿಂ ನೆಗಳ್ದು ಮೇಣದರಿಂತರಿದಾಂತೆ ತತ್ತನೂ ।  
ದ್ಭವನ ಶಿರೋಬ್ಜಮಂ ಪೊಗಳೆ ಶೌರಿಮುಖಾಮರರಿಂದುಶೇಖರ ॥ ೧೪ ॥

**ಟೀಕೆ** ॥ ಇಂದುಶೇಖರ ಚಂದ್ರನು ಶಿರೋಭೂಷಣವಾಗಿ ಉಳ್ಳವನೇ, ಜಲಂಧರಂ – ಜಲಂಧರಾಸುರನು, ದಿವಿಜರಂ – ದೇವತೆಗಳನ್ನು, ಒಕ್ಕಲಿಕ್ಕಿ – ನಿಗ್ರಹಿಸಿ ವಶದಲ್ಲಿರಿಸಿಕೊಂಡು, ಸುರಕಾಂತೆಯರಂ – ದೇವಸ್ತ್ರೀಯರನ್ನು, ಸೆರೆಗೆಯ್ದು– ನಿರ್ಬಂಧದಲ್ಲಿಟ್ಟು, ಸೊರ್ಕಿ – ಗರ್ವಿಸಿ, ಸಾರ್ಕೆವರ – ಹತ್ತಿರಕ್ಕೆ ಬರುತ್ತಲೂ, ಗೆಲವೊಡರ್ಚೆ – ಜಯವನ್ನುಂಟುಮಾಡಿ (ಸೋತಂತೆ ತಾನೇ ಓಡತೊಡಗಿ), ಜವಂ – ವೇಗವು, ಮಿಗೆ – ಅತಿಶಯಿಸಲು, ಅರ್ಣವದೊಳೆ – ಸಮುದ್ರದಲ್ಲಿಯೇ, ಪಾದದಿಂ – ತನ್ನ ಎಡಗಾಲಿನುಂಗುಷ್ಠದಿಂದ, ಚಕ್ರವೊಂದು – ಒಂದು ಸುದರ್ಶನಯಂತ್ರವನ್ನು, ನೆಗಳ್ದು ಕಲ್ಪಿಸಿ – ಮೇಣಾ ಮತ್ತು ಅದರಿಂದ, ತರಿದು – ಕುಯ್ದು, ತತ್ತನೂದ್ಭವನ ಶಿರೋಬ್ಜಮಂ ತತ್ ಆ, ತನೂದ್ಭವನ – ರಾಕ್ಷಸನ, ಶಿರೋಬ್ಜಮಂ – ತಲೆಯೆಂಬ ತಾರೆಯನ್ನು, ಶೌರಿಮುಖಾಮರರ್ – ನಾರಾಯಣಾದಿ ಸುರರು, ಪೊಗಳೆ – ಹೊಗಳುತ್ತಿರಲು, ಅಂತೆ ಧರಿಸಿದೆ.

**ತಾ** ॥ ಜಲಂಧರಾಸುರನು ದೇವರ್ಕಳಂ ಗೆದ್ದು ನಿನ್ನ ಮೇಲೆ ಜಗಳಕ್ಕೆ ಬರುತಲು ನೀನು ಸಮುದ್ರಕ್ಕೆ ಹೋಗಿ ನೀರಿನಲ್ಲಿ ಚಕ್ರಾಸ್ತ್ರವಂ ಬರೆದು ಅಟ್ಟಿಕೊಂಡು ಬರುವ

ಜಲಂಧರನ ತಲೆಯಂ ಕತ್ತರಿಸಿ ವಿಷ್ಣ್ವಾದಿಗಳು ಕೊಂಡಾಡುತ್ತಿರಲು ಅವನ ತಲೆಯಂ ರುಂಡಮಾಲೆಯೊಳು ಧರಿಸಿದಿ.

**ಕಥೆ** – ಇಂದ್ರನು ಬಲಗರ್ವದಿಂದ ಶಿವನಂ ಕುರಿತು ತಪವಂ ಗೆಯ್ದು ಮೆಚ್ಚಿಸಿ ತನಗೆ ಶತ್ರುವಂ ಬೇಡಲಾಗಿ ಹರನು ಹಣೆಗಣ್ಣಿನಿಂದ ಕಿಡಿಯೊಂದನ್ನು ಕೆದರುತ್ತಲೂ ಅದು ಸಮುದ್ರದಲ್ಲಿ ಬಿದ್ದು ಘೋರವಾದ ದೈತ್ಯಶಿಶುವಾಯಿತು. ಸಮುದ್ರನು ತನ್ನ ಮಗನೆಂದು ಎತ್ತಿಕೊಳ್ಳುವಾಗ್ಗೆ ಆ ಶಿಶುವು ಅಳುತ್ತಲೂ ಆ ಶಬ್ದದಿಂದ ಬ್ರಹ್ಮಾಂಡವೇ ಒಡೆದು ಹೋಗುವಂತಾಯಿತು. ಅದನ್ನು ಕೇಳಿ ಬ್ರಹ್ಮನು ಬರುತಲೂ ಈ ಶಿಶುವು ಬ್ರಹ್ಮನಗಡ್ಡವನ್ನು ಕಿತ್ತದ್ದರಿಂದ ಬ್ರಹ್ಮನ ಕಣ್ಣಿನಿಂದ ಹೊರಟ ಜಲವು ಶಿಶುವಿನ ಮೇಲೆ ಬೀಳುತ್ತಲೂ ಅವನಿಗೆ ಜಲಂಧರನೆಂಬ ನಾಮಕರಣಂಗೆಯ್ದು ವರವಿತ್ತು ಬ್ರಹ್ಮನು ಪೋದನು. ಜಲಂಧರನು ತಂದೆ ಇವರಂಗಳಿಂ ಪಡೆದು ವಿಷ್ಣ್ವಾದಿ ದೇವರ್ಕಳಂ ಸೋಲಿಸಿ ಸುರಕಾಂತೆಯರಂ ಸೆರೆಯೊಳಗಿಟ್ಟು, ಕಡೆಗೆ ಶಿವನನ್ನು ಅಟ್ಟಿಕೊಂಡುಬರುತಲೂ ಶಿವನು ಓಡಿಹೋಗಿ ಸಮುದ್ರದೊಳು ಪಾದಾಗ್ರದಿಂದ ಚಕ್ರಾಸ್ತ್ರವನ್ನು ಬರೆದು, ಆ ದೈತ್ಯನು ಅದನ್ನು ತುಳಿಯುವಾಗ್ಗೆ ಅವನ ತಲೆಯನ್ನು ಹಾರಿಸಿ ತನ್ನ ರುಂಡಮಾಲೆಯಲ್ಲಿ ಧರಿಸಿದನು. ಜಲಂಧರನ ಆತ್ಮವು ಹರನ ಹಣೆಗಣ್ಣಿನಲ್ಲಿ ಸೇರಿತು. ಇಂದ್ರನಿಗೆ ಗರ್ವಭಂಗವಾಗಿ ಶಿವಜ್ಞಾನ ಹುಟ್ಟಿತು. ಆ ಚಕ್ರಾಸ್ತ್ರವನ್ನು ತಾನು ಪಡೆಯಬೇಕೆಂದು ವಿಷ್ಣುವು ತಪವಂ ಗೆಯ್ಯತೊಡಗಿದನು. ಈ ಕಥೆಯು ಶೈವಪುರಾಣಗಳಲ್ಲುಂಟು ಮತ್ತು ಆಗಮಪ್ರಸಿದ್ಧವೂ

ಅಗ್ನಿ ಸರ್ವವ್ಯಾಪಕನಾಗಿರುವಂತೆ
ಚಿದ್ವಹ್ನಿರೂಪನಾದ ಶಿವನು ಸರ್ವವ್ಯಾಪಕನಾಗಿರ್ಪನು
ಹೃದಯಕಮಲವು ಮುಕುರದೋಪಾದಿಯಲ್ಲಿ ಪ್ರಕಾಶಿಸುತಿರ್ದಪುದು
ಆ ಕನ್ನಡಿಯೋಪಾದಿಯ ಹೃದಯಕಮಲದಲ್ಲಿ
ವ್ಯಾಪಕನಾದ ಶಿವನು
ಆತ್ಮನೆನಿಸಿಕೊಂಡು ಪ್ರತಿಬಿಂಬಿಸುತಿರ್ದಪನು
ವೇದೋಪನಿಷದ್ಗಾಯತ್ರಿ ಪ್ರಸಿದ್ಧವಾದೀ ರಹಸ್ಯವ
ಗುರೂಪದೇಶದಿಂ ತಿಳಿವುದಯ್ಯ
ಶ್ರೀ ಚೆನ್ನಮಲ್ಲಿಕಾರ್ಜುನದೇವಾ

**– ಅಕ್ಕಮಹಾದೇವಿ**

# ಶಿವಾಧಿಕ್ಯ ಪುರಾಣ : ಒಂದು ಅವಲೋಕನ

ಡಾ. ಎನ್.ಎಂ. ಗಿರಿಜಾಪತಿ

ಕವಿ ಬಸವಲಿಂಗ ದೇಶಿಕರ (ಕ್ರಿ.ಶ 1550) ಇನ್ನೊಂದು ಹೆಸರು 'ಮುಖಧೂಳನದ ಬಸವಲಿಂಗ' ಎಂದು ಕೃತಿಯಲ್ಲಿ ಪ್ರಸ್ತಾಪಿಸಿದೆ. ಈತನನ್ನು ತೋಂಟದ ಸಿದ್ಧಲಿಂಗ ಯತಿಗಳ ಸಮಕಾಲೀನನೆಂದು ಗುರುತಿಸಿದೆ. 'ಶಾಂತದೇಶಿಕನ ಕರುಣದಲಿ ಇಂದುಮೌಳಿಯ ಕೃತಿ ರಚಿಸಿದೆನು' ಎಂದು ಕವಿ ಹೇಳಿರುವುದರಿಂದ ಈತನ ಗುರು ಶಾಂತದೇಶಿಕ, ಕೃತಿ ರಚನೆಗೆ ಪ್ರೇರಣೆ ನೀಡಿದ ಗುರುವಾಗಿ ಚೆನ್ನವೀರದೇಶಿಕನನ್ನು ಕವಿ ಸ್ತುತಿಸಿದ್ದಾನೆ. ಆದರೆ ತನ್ನ ಪರಿಚಯವನ್ನು ಕುರಿತಂತೆ ಹೆಚ್ಚಿನ ಮಾಹಿತಿಗಳನ್ನು ಪ್ರಸ್ತಾಪಿಸಿಲ್ಲ. ಈತನ ಕೃತಿ ಇದೊಂದೇ ಆಗಿರುವಂತೆ ತೋರುತ್ತದೆ. ಇದು ಶೈವ ಮತ್ತು ವೈಷ್ಣವ ಧರ್ಮಗಳ ನಡುವೆ ನಡೆಯುತ್ತಿದ್ದ ಸಂಘರ್ಷಗಳು ಮತ್ತು ಜೈನ ಧರ್ಮವು ಮುಖ್ಯಧಾರೆಯಿಂದ ಹಿನ್ನಡೆ ಅನುಭವಿಸಿದ್ದ ಸಂಕೀರ್ಣ ಕಾಲದ ಕೃತಿ. ಸಂಘರ್ಷದ ಉದ್ದೇಶಗಳೇನೇ ಇದ್ದರೂ ಇಲ್ಲಿನ ಸಾಹಿತ್ಯ ಮೌಲಿಕ ಕೃತಿಗಳಿಂದ ಸಮೃದ್ಧಿಗೊಂಡಂತೆ ತೋರುತ್ತದೆ.

ಕನ್ನಡವನ್ನು ಒಳಗೊಂಡಂತೆ ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಸಂಸ್ಕೃತ ಭಾಷಿಕ ರಚನಾವಲಯಗಳ ಮೂಲಕ ತನ್ನದೇ ಆದ ಪ್ರಾಮುಖ್ಯತೆ ಪಡೆದುಕೊಂಡಿರುವ ಪ್ರಾಚೀನ ರೂಪದ ಮಾದರಿಗಳ ರಚನೆಗಳಲ್ಲಿ ಪುರಾಣ ಸಾಹಿತ್ಯವೂ ಪ್ರಮುಖವಾಗಿದೆ. 'ಪುರಾಣ' ಎಂಬ ಪ್ರಯೋಗ ಹಾಗೂ ಪರಿಕಲ್ಪನೆ ಭಾರತೀಯ ಸಂದರ್ಭಗಳಲ್ಲಿ ಸಹಸ್ರಾರು ವರ್ಷಗಳ ಅಲಿಖಿತ ಇತಿಹಾಸವನ್ನು ಒಳಗೊಂಡಿದೆ (ಜನಪದ ಪರಂಪರೆಯಲ್ಲಿ ಮೌಖಿಕವಾಗಿ ರೂಪಗೊಂಡ ಪುರಾಣಗಳೂ ನಮ್ಮಲ್ಲಿವೆ). ಹಾಗೆಯೇ ಪುರಾಣ ಎಂದರೆ ಹಳೆಯ, ಪುರಾತನ, ಪ್ರಾಚೀನ ಎಂಬ ಅರ್ಥಗಳಿವೆ. 'ಪುರಾ ಭವಮ್ ಪುರಾಣಂ, ಪುರಾಪಿ ನವಮ್ ಪುರಾಣಮ್' ಎಂದು ಹೇಳಿರುವ ಪುರಾಣದ ನಿಷ್ಪತ್ತಿಯಲ್ಲಿ ಹಳೆಯ ಮತ್ತು ನಿತ್ಯನೂತನವಾದ ಸಂಕಥನಗಳಿಂದ ಕೂಡಿರುವುದು ಪುರಾಣವೆನಿಸಿದೆ. ಇಂಗ್ಲಿಷ್‌ನಲ್ಲಿ ಪುರಾಣಸಾಹಿತ್ಯವನ್ನು 'Myth, Mythology' ಎಂದು ಕರೆಯಲಾಗುತ್ತದೆ. ಆದರೆ ಪಾಶ್ಚಾತ್ಯರ ಪುರಾಣಗಳ ವಿಮರ್ಶನಕ್ರಮದಲ್ಲಿ ಮುಖ್ಯವಾಗಿ ಆತ್ಮ, ಚೇತನ ಎಂಬ ವಿಷಯ ಸರಣಿಗಳಿವೆ. ಭಾರತೀಯರಲ್ಲಿ ಹಾಗಾಗದೆ ಬ್ರಹ್ಮ, ವಿಷ್ಣು (ಹರಿ), ಶಿವ (ಹರ, ರುದ್ರ), ಜೊತೆಗೆ ಇತರ ದೇವತೆಗಳನ್ನು ಕೇಂದ್ರವಾಗುಳ್ಳ ವಿವಿಧ ರೀತಿಯ

ರಚನೆಗಳಿವೆ. ಹಾಗೆಯೇ ಮತೀಯ ತತ್ವಗಳಿಗೆ ಅನುಗುಣವಾಗಿ ಶೈವ, ವೈಷ್ಣವ, ಶಾಕ್ತ ಮುಂತಾದ ವಿಭಿನ್ನ ಪಾಂಥಿಕ ಜಿಜ್ಞಾಸೆಗಳು ಇರುವುದರಿಂದ ಇಲ್ಲಿ ದೇವತೆಗಳಿಗೆ ಅನೇಕ ಹೆಸರುಗಳು ಸೇರ್ಪಡೆಗೊಂಡು, ಹೆಸರಿಗೆ ತಕ್ಕಂತೆ ಆಕೃತಿ, ಅದರಲ್ಲಿ ಸಾಕಾರ (ಆಕಾರಸಮೇತವಾಗಿ ಆರಾಧಿಸಲಾಗುವ ದೇವರು, ವಿಗ್ರಹಾರಾಧನೆ ಸ್ಥಾವರಗಳ ನಿರ್ಮಾಣದ ಪರಿಧಿಯಲ್ಲಿ ಇವುಗಳನ್ನು ಗುರುತಿಸಬಹುದು), ಆ ಸಾಕಾರಕ್ಕೆ ತಕ್ಕ ಸಗುಣ (ಗುಣಗಳಿಂದ ಕೂಡಿರುವುದು), ಇತ್ಯಾದಿಗಳಿರುವಂತೆ ನಿರಾಕಾರ (ಆಕಾರ ಇಲ್ಲದಿರುವುದು, ಲಿಂಗಾಕಾರದ ಶಿವ. ಇಲ್ಲಿ ಶಿವದೇಗುಲ ಸ್ಥಾವರವಾದರೆ ಆ ಶಿವ ಚಿತ್ಕಳೆಯ ಪ್ರತೀಕವಾಗಿ ಎಡಗೈಯಲ್ಲಿ ಪೂಜಿಸುವ ಇಷ್ಟಲಿಂಗ ಜಂಗಮರೂಪವಾಗುತ್ತದೆ), ನಿರ್ಗುಣೋಪಾಸನೆ, ಕೆಲವು ಕಡೆ ಎರಡೂ ಸೇರಿದ ಉಪಾಸನಾ ಕ್ರಮಗಳು ಪುರಾಣಗಳ ಮೂಲಕ ನಿರೂಪಿತವಾಗಿವೆ. ಹಾಗಾಗಿ ಇಲ್ಲಿನ ಪುರಾಣಗಳ ರಚನೆ ಬಹುತಿರುವುಗಳಿಂದ ಕಥಾನಕಗಳನ್ನು ಒಳಗೊಂಡಿದ್ದು ಸಂಕೀರ್ಣ ಸ್ವರೂಪದಲ್ಲಿರುತ್ತದೆ. ವೇದೋಪನಿಷತ್ತುಗಳ ಅರ್ಥವಿಸ್ತಾರಕ್ಕೆ ಬ್ರಾಹ್ಮಣಗಳು, ಆರಣ್ಯಕಗಳು ಸೃಷ್ಟಿಯಾದಂತೆ, ಧಾರ್ಮಿಕ ಆಚಾರ ವಿಚಾರ, ತಾತ್ವಿಕ ಸಂಹಿತೆಗಳ ಸರಳೀಕರಣಕ್ಕೆ ಅಂದರೆ, ಸರಳಗೊಳಿಸುವ ಮೂಲಕ ಜನರನ್ನು ತಮ್ಮತ್ತ ಸೆಳೆಯುವಲ್ಲಿ, ಮತ, ಧರ್ಮಾನುಯಾಯಿ ಪಂಡಿತರಿಂದ ಪುರಾಣಗಳು ರಚನೆಗೊಂಡವು. ಪುರಾತನಸ್ಯ ಕಲ್ಪಸ್ಯ ಪುರಾಣಾನಿ ವಿದುರ್ಬುಧಾಃ ಪುರಾಣಗಳು ಆಗಿಹೋದ, ನಡೆದ ವಾಸ್ತವ ಘಟನೆಗಳನ್ನು ಕುರಿತು ಹೇಳುತ್ತವೆ. ಜೊತೆಗೆ ಇವು ಜನಾಂಗಗಳ ಧಾರ್ಮಿಕ ನಂಬುಗೆ, ಆಚರಣೆ, ಪದ್ಧತಿಗಳನ್ನು ದಾಖಲಿಸುತ್ತವೆ. ಪ್ರಾರಂಭದ ವೀರಶೈವ ಕವಿಗಳ ಗಮನವೆಲ್ಲ ಶಿವಶರಣರ ಚಾರಿತ್ರ್ಯ ನಿರೂಪಣೆಯತ್ತಲೇ ಇದ್ದುದರಿಂದ ಪುರಾಣಗಳ ರಚನೆಯ ಬಗ್ಗೆ ಚಿಂತಿಸಿದಂತಿಲ್ಲ.

'ಶಿವಾಧಿಕ್ಯ ಪುರಾಣ'ಕ್ಕೆ ಸಮಯಾಚಾರದ ಮತದ ಪುರಾಣ, ಬಳ್ಳಿಗಾವೆಯ ಮಹಾತ್ಮೆ ಎಂಬ ಹೆಸರುಗಳೂ ಇವೆ. ಈ ಕೃತಿಗೆ ನೀಲಕಂಠ ನಾಗನಾಥಾಚಾರ್ಯನ 'ವೀರಮಾಹೇಶ್ವರಾಚಾರ ಸಂಗ್ರಹ' ಆಕರವಾಗಿದೆ ಎಂಬುದನ್ನು ಕವಿಯು ನೇರವಾಗಿ ಪ್ರಸ್ತಾಪಿಸಿದ್ದಾನೆ (ಪದ್ಯ 1.28). ತನ್ನ ಕೃತಿಯನ್ನು ಮಹಾಕಾವ್ಯವೆಂದು ಹೇಳಿಕೊಂಡಿರುವ ಕವಿ ಬಸವಲಿಂಗ ದೇಶಿಕ ಪುರಾಣದ ಪ್ರಾರಂಭದಲ್ಲಿ ಮಹಾಕಾವ್ಯಗಳ ಲಕ್ಷಣಗಳಂತೆ ಅಷ್ಟಾದಶ ವರ್ಣನೆಗಳ ನಿಯಮಕ್ಕೆ ಅನುಗುಣವಾಗಿ ಸಮುದ್ರವರ್ಣನೆ, ಮೇರುಪರ್ವತ, ಕೈಲಾಸಗಿರಿಯ ವರ್ಣನೆ, ಬಳ್ಳಿಗಾವೆ ಪುರ, ಅಲ್ಲಿನ ಸೂಳೆಗೇರಿಗಳ ಚಿತ್ರಣ, ಜಲಕ್ರೀಡೆಗಳ ಚಿತ್ರಣಗಳನ್ನೆಲ್ಲ ಸೇರ್ಪಡೆ ಮಾಡಿದ್ದಾನೆ. ಹಾಗೆಯೇ ವೀರಶೈವ ಧರ್ಮದ ಸಂಹಿತೆಗಳಾದ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲಗಳ ವಿವರಗಳೂ ಇವೆ. ಶಿವಪುರಾಣದಲ್ಲಿ ವ್ಯಕ್ತವಾಗಿರುವ ಶಿವನ ಪಂಚವಿಂಶತಿ (25) ಲೀಲೆಗಳ ಕಥೆಗಳು, ಸಾಂದರ್ಭಿಕ ಸಂಗತಿಗಳ ಸಮರ್ಥನೆಗಾಗಿ ವಚನಕಾರರು ಮತ್ತು ವಚನೋತ್ತರ ಕಾಲದಲ್ಲಿನ ಅಲ್ಲಮ

ಪ್ರಭು, ಬಸವಾದಿ ಶಿವಶರಣರ, ಶರಣೆಯರ ಸ್ತುತಿ ಮತ್ತು ಅವರ ಕಥೆಗಳು ಇಲ್ಲಿವೆ. ಅವುಗಳಲ್ಲಿ ಅಲ್ಲಮನ ವೈರಾಗ್ಯ, ಬಸವಣ್ಣನ ಭಕ್ತಿ, ಚೆನ್ನಬಸವಣ್ಣನ ಜ್ಞಾನ, ಸಿದ್ಧರಾಮ, ಅಜಗಣ್ಣ, ಮಡಿವಾಳಯ್ಯ, ವೀರಸೊಡ್ಡಳ, ಗುಪ್ತಭಕ್ತಿಯ ಮರುಳು ಶಂಕರದೇವ, ಬೊಮ್ಮಿದೇವ, ಅಪ್ಪಣ್ಣ, ಗುರುರೇವಣಾರ್ಯ, ಮುದ್ದಯ್ಯ, ಮಾರಯ್ಯ, ಮಾಯಿದೇವ, ನಾಗಾಂಬೆ, ಗಂಗಾಂಬೆ, ನೀಲಾಂಬಿಕೆ, ಮಹದೇವಿ, ಬಿಜ್ಜದೇವಿ, ತಿಲಕವ್ವೆ, ವೈಜವ್ವೆ, ವೀರ ಚೋಳವ್ವೆ, ಸುಗ್ಗಲದೇವಿ, ಚಂಗಳೆ, ಶಿವದೇವಿ, ಗುರುಭಕ್ತೆ ಲಿಂಗಮ್ಮ, ಲಕ್ಕಮ್ಮನವರ ಕಥೆಗಳು ಸಹ ಸೇರ್ಪಡೆಗೊಂಡಿವೆ.

ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿರುವ ಈ ಪುರಾಣದಲ್ಲಿ 18 ಸಂಧಿಗಳಿವೆ, ಅವುಗಳನ್ನು ಮೂರು ಕಾಂಡಗಳಲ್ಲಿ ವಿಂಗಡಿಸಲಾಗಿದೆ. ಒಟ್ಟು 928 ಪದ್ಯಗಳಿದ್ದು ಇಲ್ಲಿ ಷಟ್ಪದಿಯೊಂದಿಗೆ ಕಂದ ಛಂದಸ್ಸಿನ ಬಳಕೆ, ಖ್ಯಾತ ಕರ್ಣಾಟಕ ವೃತ್ತಗಳು ಮತ್ತು ಸಂಸ್ಕೃತ ವೃತ್ತಗಳಲ್ಲಿಯೂ ಪದ್ಯಗಳುರ ರಚನೆಗೊಂಡಿವೆ. ಜೊತೆಗೆ ಸಂಸ್ಕೃತ ಗ್ರಂಥಗಳಲ್ಲಿನ ಸೂತ್ರ, ಉಕ್ತಿಗಳನ್ನು ಯಥಾವತ್ತಾಗಿ ಬಳಸಿಕೊಂಡಿದ್ದಾನೆ. ಇದನ್ನು ವರ್ಣಕ ಮತ್ತು ವಸ್ತುಕವೆಂದು ಎರಡೂ ಶೈಲಿಗಳನ್ನು ಕವಿ ಹೆಸರಿಸಿದ್ದಾನೆ. ತನ್ನ ಕೃತಿರಚನೆಯ ಕಾಲವನ್ನು ಕವಿ ಸೂಚಿಸಿರುವುದನ್ನು ಅನುಸರಿಸಿ ಕವಿಚರಿತೆಕಾರರು ಇದರ ಕಾಲವನ್ನು ಕ್ರಿ.ಶ. 1611 ಎಂದು ಊಹಿಸಿದ್ದಾರೆ. ಇಲ್ಲಿನ ಆಶ್ವಾಸಗಳನ್ನು ಪ್ರಧಾನವಾಗಿ ಮೂರು ಕಾಂಡಗಳನ್ನಾಗಿ ವಿಂಗಡಿಸಬಹುದಾಗಿದೆ, ಪ್ರತಿ ಕಾಂಡದಲ್ಲಿ ಆರು ಸಂಧಿಗಳಿವೆ. ಮೊದಲನೆಯ ಕಾಂಡದ ಸಂಧಿಗಳಲ್ಲಿ ಕ್ರಮವಾಗಿ ಶಿವಕಾರುಣ್ಯ, ಕೈಲಾಸಪುರ ವರ್ಣನೆ, ವಿಶ್ವೇಶ್ವರಾಚಾರ್ಯನ ಜನ್ಮಪ್ರಸಂಗ, ಲಿಂಗದೀಕ್ಷೆ ಅಂದರೆ ಶಿವದೀಕ್ಷಾ ವಿವರಣೆ, ಅಂತ್ಯಜ ಶಿವದೇವಯ್ಯನ ಮನೆಯಲ್ಲಿ ಪ್ರಸಾದ ಸ್ವೀಕರಿಸಿದ ಪ್ರಸಂಗ, ವೇದವಾದಿಗಳ ತರ್ಕ, ಅಷ್ಟಾವರಣ, ಗುರುಮಹಿಮೆ ಕುರಿತ ವಿವರಗಳಿವೆ.

ಎರಡನೆಯ ಕಾಂಡದಲ್ಲಿ ಶಿವತತ್ವಜ್ಞಾನ ಪಾರಮ್ಯ, ಶಿವಾಧಿಕ್ಯದ ನಿರೂಪಣೆ ಶಿವಕಾರುಣ್ಯ, ವಿಷ್ಣುವಿನ ಜನ್ಮಾಂತರಗಳ ನಿರೂಪಣೆ, ಮೋಹಿನಿವೃತ್ತಾಂತ ಮತ್ತು ಶಿವನು ಪಾರ್ವತಿಯನ್ನು ಕೈಹಿಡಿದ ಶಿವಪುರಾಣದಲ್ಲಿನ ಗಿರಿಜಾಕಲ್ಯಾಣ ಕಥಾಪ್ರಸಂಗದ ಪ್ರಸ್ತಾಪವಿದೆ (ಕವಿ ಹರಿಹರ ಗಿರಿಜಾಕಲ್ಯಾಣ ಕುರಿತಂತೆ ಚಂಪೂಕಾವ್ಯವನ್ನು ರಚನೆ ಮಾಡಿದ್ದಾನೆ).

ಕೊನೆಯ ಕಾಂಡದಲ್ಲಿ ಶಿವಪಾರ್ವತಿಯರ ಕಲ್ಯಾಣದ ಪ್ರಸಂಗ ಮುಂದುವರೆದಿದೆ. ಶಿವಪಾರ್ವತೀ ಕಲ್ಯಾಣ, ಶಿವಪುರಾಣೋಕ್ತ ಪಂಚವಿಂಶತಿ ಲೀಲೆಗಳು, ವೃಷಭೇಶ್ವರನ ಪ್ರಕರಣ, ಗಾರ್ಗ್ಯ ಋಷೀಶ್ವರನ ಪ್ರಸಂಗ, ವಿಶ್ವೇಶ್ವರಾಚಾರ್ಯರು ರಾಜನ ಸಭೆಯಲ್ಲಿ ವೇದವಾದಿಗಳ ಮೇಲೆ ಸಾಧಿಸಿದ ವಿಜಯ, ಇದಕ್ಕೆ ಪೂರಕವಾಗಿ ಮೃಡಶರಣರ ಭಕ್ತಿಯನ್ನೊಳಗೊಂಡ ಕಥೆಗಳು ಇಲ್ಲಿವೆ. ಪುರಾಣವು ವಿವಿಧ ಬಗೆಯ ಛಂದೋ

ಪ್ರಯೋಗಗಳಿಗೆ ಸಾಕ್ಷಿಯಾಗಿದೆ: ಕಂದಪದ್ಯ : 105, ವೃತ್ತ : 39 ಮತ್ತು ವಾರ್ಧಕ ಷಟ್ಪದಿ : 825 ಒಟ್ಟು ಪದ್ಯಗಳ ಸಂಖ್ಯೆ 1684. ಇಲ್ಲಿ ಕವಿಗೆ ಶಿವಾಧಿಕ್ಯವನ್ನು ನಿರೂಪಿಸುವಲ್ಲಿ ಅದಕ್ಕೆ ಪ್ರಮಾಣುಗಳೆಂಬಂತೆ ಶ್ರುತಿಪ್ರಮಾಣುಗಳನ್ನು (43) ಹಾಗೆಯೇ ಇತರ ಗ್ರಂಥಪ್ರಮಾಣುಗಳನ್ನು (772) ಕವಿ ಒದಗಿಸಿದ್ದಾನೆ (ಇಲ್ಲಿ ಶ್ರುತಿ ಮತ್ತು ಗ್ರಂಥ ಎಂದರೆ ವೇದಾಗಮಗಳ ಸಾಹಿತ್ಯ). ಕವಿ ಹೀಗೆ ಪ್ರಮಾಣುವನ್ನು ಒದಗಿಸುವ ಹಿನ್ನೆಲೆಯನ್ನು ಕುರಿತಂತೆ ಗಮನಿಸಬೇಕಿದೆ. ಭಾರತೀಯ ಧಾರ್ಮಿಕ ಸಾಂಸ್ಕೃತಿಕ ಮತ್ತು ಸಾಹಿತ್ಯವಲಯದಲ್ಲಿ ಪ್ರಧಾನವಾಗಿ ಶಿವಸಂಸ್ಕೃತಿಯ ಶೈವಸಾಹಿತ್ಯ ಮತ್ತು ವೈಷ್ಣವ ಪ್ರತಿನಿಧೀಕರಣದ ಭಾಗವತ ಮುಂತಾದ ವೈಷ್ಣವ ಸಾಹಿತ್ಯಗಳು ಹೆಚ್ಚು ಪ್ರಮಾಣದಲ್ಲಿ ಕಂಡುಬರುತ್ತವೆ. ಅದರಲ್ಲಿಯೂ ದಕ್ಷಿಣ ಭಾರತದ ಧಾರ್ಮಿಕ ಧರ್ಮ ಮತ್ತು ಸಾಂಸ್ಕೃತಿಕ ಪರಂಪರೆಯಲ್ಲಿ ವೀರಶೈವ ಪುರಾಣ, ಪೌರಾಣಿಕ ಕಾವ್ಯಗಳಿಗೆ ವಿಶಿಷ್ಟ ಸ್ಥಾನವಿದೆ. ಬಹುಜನರ ಆರಾಧ್ಯ ದೈವನಾದ ಶಿವನನ್ನು ಕುರಿತಂತೆ ಸಂಸ್ಕೃತದ ವೇದೋಪನಿಷತ್ತುಗಳು, ಶಿವಾಗಮಗಳು ವಿಶೇಷವಾಗಿ ನಿರೂಪಿಸಿವೆ. ಶೈವಪಂಥಗಳಾದ ಕಾಳಾಮುಖ, ಪಶುಪತ, ಲಕುಲೀಶ ಮುಂತಾದ ಸಪ್ತಶೈವಗಳ ಚಿತ್ರಣಗಳು ಸಂಸ್ಕೃತವನ್ನು ಒಳಗೊಂಡಂತೆ ಕನ್ನಡ, ತಮಿಳು, ತೆಲುಗು ಮುಂತಾದ ಪ್ರಾದೇಶಿಕ ಭಾಷೆಗಳಲ್ಲಿಯೂ ರಚನೆಗೊಂಡಿವೆ. ಹೀಗೆ ನಿರೂಪಿತವಾಗಿರುವ ಸಂಗತಿಗಳನ್ನು ದೃಢೀಕರಣಕ್ಕೆಂಬಂತೆ ಬಸವಲಿಂಗ ದೇಶಿಕನು ಇಲ್ಲಿ ಉಲ್ಲೇಖಿಸಿದ್ದಾನೆ. ಕಾರಣ ಅಂದಿನ ದಿನಮಾನಗಳಲ್ಲಿ ಮತೀಯ ಪೈಪೋಟಿಯಂತೆ ನಡೆಯುತ್ತಿದ್ದ ಈ ಬಗೆಯ ಪಂಡಿತರ ನಡುವಣ ವಾಗ್ವಾದಗಳಿಗೆ ಅಧಿಕೃತವಾದ ಆಧಾರಗಳಿರಬೇಕಾಗಿತ್ತು. ಹಾಗೆ ಮಾಡಿ ತಮ್ಮ ಪ್ರತಿವಾದಿಗಳನ್ನು ಸೋಲಿಸಿ ತಮ್ಮ ಧರ್ಮಜ್ಞಾನದ ಔನ್ನತ್ಯನ್ನು ಸಾಕ್ಷೀಕರಿಸಬೇಕಿತ್ತು.

ತನ್ನನ್ನು ತಾನು ವರಕವಿ ಗಜನಿಕರ ವೈರಿಯು / ಹರಿಕವಿ ಕಂಠೀರವನಿವಹಕೆ ಶರಭಯೆನಿಪಂ ॥ ಪರಮ ಶಿವಕವಿಗಳನುವನು। ಶರಣ ಷಟ್ಸ್ಥಲಕೆ ಭೃತ್ಯನು ವಚಿಸಿದನೊಲವಿಂ ॥ (ಸಂಧಿ : 18 ಪ – 50) ಎಂದು ಕವಿ ಸ್ವತಃ ಹೇಳಿಕೊಂಡಿರುವುದ ರಿಂದ ಇಡೀ ಕೃತಿ ಶೈವ–ವೈಷ್ಣವ ಸಂಘರ್ಷದ ನೆಲೆಯಲ್ಲಿ ಶಿವಸಂಸ್ಕೃತಿಯ ಪ್ರಾಧಾನ್ಯತೆಯನ್ನು ಪ್ರತಿಪಾದಿಸಿ ತೋರುವ ಏಕಮಾತ್ರ ಉದ್ದೇಶದಿಂದ ಕೂಡಿದೆ. ಅದಕ್ಕೆ ಕವಿ 'ಬಸವಲಿಂಗದೇಶಿಕನೊರೆದ ಕೃತಿ ವಿಪ್ರವಾದಿಗಳ ಭಂಗಿಸುವ ಶಾಸ್ತ್ರವೆನಿಕುಂ' (18.46) ಎಂದು ಹೇಳಿರುವ ಸಾಲು ನಿದರ್ಶನವಾಗಿದೆ. ಒಟ್ಟಾರೆ ಪರಮತಖಂಡನೆ, ಟೀಕೆ, ಸ್ವಮತಪ್ರಶಂಸೆಗಳು ಕೃತಿಯಲ್ಲಿವೆ. ಪ್ರತಿ ಸಂಧಿಯ ಕೊನೆಗೆ 'ಇದು ಬಸವಲಿಂಗದೇಶಿಕ ಭಕ್ತರುಗಳೊಡನೆ । ಸದುವಿನಯ ಸಹಜ ವಚನದೊಳಿಪ್ಪ ಕಾಲದೊಳು ಮ । ದಹರನು ನಿತ್ಯ ಮಾಧವನು ಸಾವಯವವೆಂಬ ವಿಧವೆಂತು ಸ್ವಾಮಿಯೆನಲು । ಮುದದಿಂದಲೊರೆದ ವಿಶ್ವಾಚಾರ್ಯರೊಳು ವಿಪ್ರ । ರೊದಗಿ ವಾದಿಸಲವರ ಭಂಗಿಸಿದ ಕಥನವನು । ತುದಿ

ಮೊದಲು ಪಿಡಿದು ಭಕ್ತರಿಗೆ ವಚಿಸಿದ ವಾಕ್ಯವಿದೆ ಶಿವಾಧಿಕ್ಯ ಕೃತಿಯು ॥ ಎಂದು ವಿವರಿಸಿದ್ದಾನೆ. ವಿಶ್ವಾಚಾರ್ಯರ ಜೊತೆ ವಿಪ್ರರು ವಾದ ಮಾಡಿ ಸೋಲು ಅನುಭವಿಸಿದ ಕಥೆಯನ್ನಾಗಿ ಕವಿ ನಿರೂಪಿಸಿದ ಅಂಶವನು ಪ್ರತಿ ಪದ್ಯದ ಕೊನೆಯಲ್ಲಿ ಸೂಚಿಸಿದ್ದಾನೆ. ವೇದಾಗಮಂಗಳೊಳ ಪುರಾಣದೊಳಗುಳ್ಳ ಗ್ರಂಥದಿಂದ' ವಿಪ್ರರನ್ನು ಸೋಲಿಸಿ ಮೆರೆದ ಕಥೆಯನ್ನು ಹೇಳುವೆನು (1.30) ನರಕವಿಗಜನಿಕರ ವೈರಿ ಹರಿಕವಿ ಕಂಠೀರವನಿವಹಕೆ ಶರಭನುಮೆನಿಪಂ । ಪರಮ ಶಿವಕವಿಗಳಣುಗನು । ಶರಣ ಷಟ್ಸ್ಥಲಕೆ ಭೃತ್ಯನು ವಚಿಸಿದನೊಲವಿಂ (18.47), ಎಂದೆಲ್ಲ ಹೇಳಿದ್ದಾನೆ. ಕೃತಿಯ ತವರಾಜದುಗ್ಧ ಸರ್ಪಿಯಂ। ನವಯೌವನೆ ಕನಕವಟ್ಟಲೊಳಗಿಡೆ ಪುರುಷಂ । ಸವಿಯಲ್ಕನಿದಹ ತೆರದಿಂ । ಕವಿಗಳ್ಗತಿ ಮುದವನೀವುದೀ ಸತ್ಕಥನಂ । ಈ ಕೃತಿಯು 'ವೀರಮಾಹೇಶ್ವರಾಚಾರ ಸಂಗ್ರಹಮೆಂಬ ಕ್ಷೀರಾಬ್ಧಿಯೊಳಗಣ ಕಥಾಕುಳವ ಸರಗೊಳಿಸಿ ಸೇರಿಸಿದನೀ ಕೃತಿಯು ಶಿವಮಹಿಮದುನ್ನತಿಯ ಚಾರಿತ್ರಮೆಂಬ ಕಥೆಯ (1.28) ವಿಶ್ವಾಚಾರ್ಯ ದ್ವಿಜರುಗಳ ಕಾಕು ಮಾಡಿದ ಕಥೆಯಿದು (1.35) ಎಂದು ವರ್ಣಿಸುತ್ತಾನೆ.

ಅಂಗಲಿಂಗದೊಳೇಕವಾದ ಸಮರಸಭಾವ
ದಿಂಗಿತವನರಿದು ಷಟ್ತ್ರಿಶಂಗಳಿಂದತ್ತ
ಲಿಂಗಶತ ಷೋಡಶಂಗಳನು ಮೀರಿ, ನೂರೊಂದು ಸ್ಥಲದನ್ವಯವನು ।
ಅಂಗವಿಸಿದಚಲ ಷಟ್ಸ್ಥಲ ಜ್ಞಾನಿಗಳ
ನಿರ್ಮಲಾಂಘ್ರಿವಾರಿಜ ಭ್ರಮರಮುಖ ಧೂಳನದ ಬಸವ ।
ಲಿಂಗದೇಶಿಕನೊರೆದ ಕೃತಿ ವಿಪ್ರವಾದಿಗಳ ಭಂಗಿಸಿದ ಶಾಸ್ತ್ರವೆನಿಕುಂ । (16.46)

ಕಡಲೊಳಗೆ ರತ್ನಮೌಕ್ತಿಕವಿಡಿಕಿರಿದೊಲಿರುತಿಹುದು ಶ್ರುತಿಗ್ರಂಥಗಳಿಂ (1.12) ಕೇಶವನ ಕೊರತೆಯನು ಈಶ್ವರನ ಘನತೆಯನು ತ್ರಾಸಿನೊಳು ತೂಗಿ ಪೇರಿಸಿದಂತೆ ಪೇಳುವುದು ಈ ಶಾಸ್ತ್ರವತ್ಯಧಿಕವೆಂದು (1.29) ಎಂದು ಸ್ವತಃ ಧೃಡೀಕರಿಸಿರುವ ಕವಿಯ ಆತ್ಮವಿಶ್ವಾಸವನ್ನು ಸಾಕ್ಷೀಕರಿಸುವಂತಿವೆ.

ಈ ಕೃತಿಗೆ ಮೂಲವೆಂತೆನೆ ಬಳ್ಳಿಗಾವಿಯೊಳು
ಸಾಕ್ಷಾತ್ ಭಕ್ತ ಶಿವದೇವಯ್ಯಗಳ ಗೃಹದಿ
ಪಾಕ ಪ್ರಯತ್ನವಾಗಿರಲವರ ಭಕ್ತಿಯ ಸ್ವೀಕರಿಸಲಾಚಾರ್ಯರು ।
ನೀಕರಿಸಿ ವಿಪ್ರರೆಲ್ಲ ವಿಶ್ವಾಚಾರ್ಯರನು
ವಾಕು ದುರ್ಜನೆಯಿಂದ ನಿಂದನೆಯ ಗಳಹಲ್ಕೆ
ಆ ಕಿನಿಸಿನಿಂದ ವಿಶ್ವಾಚಾರ್ಯದ್ವಿಜರುಗಳ ಕಾಕು ಮಾಡಿದ ಕಥೆಯಿದು ॥ (1–34)

ಬಳ್ಳಿಗಾವಿಯಲ್ಲಿರುವ ಶಿವಭಕ್ತ ಶಿವದೇವಯ್ಯನ ಮನೆಯಲ್ಲಿ ವಿಶ್ವಾಚಾರ್ಯರು ಭೋಜನ ಮಾಡಿದುದನ್ನು ಕಂಡ ಬ್ರಾಹ್ಮಣರು ಕೋಪದಿಂದ ಅದನ್ನು ವಿರೋಧಿಸಿದ ಪ್ರಸಂಗವೇ ಈ ಪುರಾಣದ ಕಥಾವಸ್ತು. ಈ ಕೃತಿಯ ಕಥಾನಾಯಕ ಬಳ್ಳಿಗಾವೆಯವನು,

ಈ ಬಳ್ಳಿಗಾವಿ ಪ್ರಥಮ ಕಲ್ಯಾಣವೆಂದು ಮನ್ನಣೆ ಪಡೆದಿದ್ದ ಪಟ್ಟಣ. ಅಲ್ಲಿನ ಶಿವಭಕ್ತರಾಗಿದ್ದ ಶಂಭುಭಟ್ಟ ಮತ್ತು ಸೋಮಲಾಂಬಿಕೆಯರು ಬಹಳ ಕಾಲದವರೆಗೆ ಮಕ್ಕಳಿಲ್ಲದೆ ಚಿಂತೆ ಮಾಡುತ್ತಿರುತ್ತಾರೆ. ಅದೊಂದು ಅವರ ಮನೆ ಮುಂದೆ ಶತರುದ್ರನೆಂಬ ಜಂಗಮ ತನ್ನ ಪಾಡಿಗೆ ಅತ್ತಿತ್ತ ಓಡಾಡುತ್ತಿದ್ದುದನ್ನು ಕಂಡ ಇವರು ಆತನನ್ನು ತಮ್ಮ ಮನೆಯೊಳಗೆ ಕರೆದು ಸೇವೆ ಸಲ್ಲಿಸುತ್ತಾರೆ. ಅವರ ಸೇವೆಯಿಂದ ಸಂತುಷ್ಟನಾದ ಆ ಜಂಗಮ ನಿಮ್ಮ ಕೋರಿಕೆಯನ್ನು ಶಿವ ಈಡೇರಿಸುತ್ತಾನೆಂದು ಹೇಳುತ್ತಾನೆ. ಆ ಹೇಳಿಕೆಯನ್ವಯ ಇವರಿಗೆ ಜನಿಸಿದ ಮಗುವೇ ವಿಶ್ವಾಚಾರ್ಯ ಈ ಪುರಾಣದ ಕಥಾನಾಯಕ. ಈ ಮಗುವಿಗೆ ಸ್ವತಃ ಶಿವನು ವಿಶ್ವನಾಥನೆಂಬ ಹೆಸರಿನಿಂದ ಬಂದು ಶಿವದೀಕ್ಷೆಯನ್ನು ನೀಡಿ, ಪಂಚಾಕ್ಷರಿ ಮಂತ್ರ ತಂದೆ ತಾಯಿಗಳಿಗೆ ಜಂಗಮಭೇದವನ್ನು ಬೋಧಿಸುತ್ತಾನೆ. ಮುಂದೆ ಬೆಳೆದಂತೆ ವಿಶ್ವಾಚಾರ್ಯ ವೇದ, ಶಾಸ್ತ್ರ, ಆಗಮ, ಷಟ್ಸ್ಥಲ, ಅಷ್ಟಾವರಣ, ಪಂಚಾಚಾರಗಳ ಜ್ಞಾನಸಂಪನ್ನನಾಗುತ್ತಾನೆ. ತನ್ನಲ್ಲಿಗೆ ಬಂದ ಶಿಷ್ಯರಿಗೆ ಜ್ಞಾನಬೋಧನೆ ಮಾಡುತ್ತಿರುತ್ತಾನೆ.

ಅದೊಮ್ಮೆ ಈತ ತನ್ನ ಶಿಷ್ಯರ ಕೋರಿಕೆಯ ಮೇರೆಗೆ ಬಳ್ಳಿಗಾವೆಯಲ್ಲಿದ್ದ ವಸಂತವನಕ್ಕೆ ವಿಹಾರಕ್ಕೆ ಹೋಗುತ್ತಾನೆ. ಅಲ್ಲಿ ಜಲಕ್ರೀಡೆಯಾದ ನಂತರ ಶಿವಪೂಜೆ ಮಾಡಿಕೊಂಡು ಕುಳಿತುಕೊಂಡಿರುತ್ತಾರೆ. ಆಗ ಅಲ್ಲಿಗೆ ಬಂದ ಪುರದ ಅಂತ್ಯಜ ಶಿವಭಕ್ತ ಶಿವದೇವಯ್ಯ ತಮ್ಮ ಮನೆಗೆ ಬರುವಂತೆ ಬಿನ್ನಹ ಮಾಡಿಕೊಂಡಾಗ ವಿಶ್ವಾಚಾರ್ಯರು ಸಂತೋಷದಿಂದ ಒಪ್ಪಿಕೊಂಡು ಹೋಗಿ ಪ್ರಸಾದ ತೆಗೆದುಕೊಂಡು ಬಂದದ್ದು ಬಹು ದೊಡ್ಡ ಅಪರಾಧವಾಗಿ ಅಲ್ಲಿನ ಬ್ರಾಹ್ಮಣಸಮುದಾಯಗಳಿಗೆ ಕಾಣುತ್ತದೆ. ಈತನ ನಡೆಯನ್ನು ಜಾತಿಗೆಟ್ಟ ನಡೆಯೆಂದು ಉಗ್ರವಾಗಿ ಖಂಡಿಸುತ್ತಾರೆ. 'ಎಲೆ ವಿಶ್ವಾಚಾರ್ಯ ಅತ್ತಲೆ ಹೋಗು ಬಂದಡೆಯು, ಕೊಲುವೆವಲ್ಲದೆ ನಿನ್ನ ಬಿಡೆವು, ಮುಂದಡಿಯಿಡಲು ಇಳೆಯಾಳ್ದನಾಣೆ, ನೀನೂರ ಪೊಗದಿರು, ಥುನ್ನ ಕುಲಗೇಡಿಯಾದೆ. ನೀನು ತಿಳಿದು ನೀನಂತ್ಯಜರ ಗೃಹದೊಳನ್ನವನುಂಡು ಪೊಲೆಗಲಿಸಿದನೀಗ ಪುರವ ಪುಗದಿರು ನೀನು ತೊಲಗು ನಿನ್ನಯ ಮಾತಾಪಿತರು ಸಹನಾಗಿಯೆನುತ ಘರ್ಜಿಸಿ ನುಡಿದರು' (ಪದ್ಯ : 6–10). ಊರಿನಿಂದಲೇ ಬಹಿಷ್ಕಾರ ಹಾಕಿರುವುದಾಗಿ ಎಚ್ಚರಿಸಿ ನಿನ್ನ ತಂದೆ ತಾಯಿಯವರೊಂದಿಗೆ ನೀನು ಕೂಡಲೇ ಊರು ಬಿಟ್ಟು ಹೊರಡೆಂದು ಕಟ್ಟಪ್ಪಣೆ ಮಾಡುತ್ತಾರೆ. ಆದರೆ ಶರಣ ಸಂಪ್ರದಾಯದ ಶಿವಭಕ್ತನ ಭಕ್ತಿಭಾವವನ್ನು ಅರಿತುಕೊಳ್ಳದೆ ವಿಪ್ರಸಮುದಾಯ ಶಿವದೇವಯ್ಯನನ್ನು, ತನ್ನನ್ನು ಅಪಮಾನ ಮಾಡಿದ್ದಕ್ಕೆ ನೊಂದುಕೊಳ್ಳುವ ವಿಶ್ವಾಚಾರ್ಯರು ಅಲ್ಲಿದ್ದ ಬ್ರಾಹ್ಮಣರಿಗೆ ಭಕ್ತರ ಮಹಿಮೆಯನ್ನು ಕುರಿತಂತೆ ಹೇಳಿ ನಿಮ್ನ ಜಾತಿಯವನೆಂದು ಸಮಾಜ ಪರಿಗಣಿಸಿದ್ದ ಶ್ವಪಚಯ್ಯನೆಂಬುವನು ಸಾಮವೇದಿಯೆಂಬ ಬ್ರಾಹ್ಮಣನಿಗೆ (ಹರಿಹರನ ಸಾಮವೇದಿ ರಗಳೆ ಎಂಬ ಕೃತಿಯಲ್ಲಿ ಈ ಸಾಮವೇದಿಯ ಪ್ರಸಂಗ ವಿವರವಾಗಿ ದೊರೆಯುತ್ತದೆ) ಲಿಂಗ ಪೂಜಾ ಕ್ರಮ ಮತ್ತು ಶಿವ ಮಹಿಮೆಯನ್ನು,

ಅಷ್ಟಾವರಣದಂತಹ ವಿಚಾರಗಳನ್ನು ತಿಳಿಸಿಕೊಟ್ಟ ಉದಾಹರಣೆಯನ್ನು ಹೇಳುತ್ತಾರೆ. ಆದರೆ ಇದನ್ನೊಪ್ಪದ ವಿಪ್ರರು ಅಲ್ಲಿನ ದೊರೆಯಲ್ಲಿ ಈ ಗ್ರಾಮದಲ್ಲಿನ ವಿಶ್ವಾಚಾರ್ಯನೆಂಬ ಬ್ರಾಹ್ಮಣ, ಇಡೀ ಬ್ರಾಹ್ಮಣ ಸಮುದಾಯವನ್ನು ವೇದಬಾಹಿರರೆಂದು ಕರೆಯುತ್ತಾ, ಅವಿಚಾರಿಯಾಗಿ ಲಿಂಗವನ್ನು ಕಟ್ಟಿಕೊಂಡು, ಅಚ್ಯುತ ಮೊದಲಾದ ದೈವಗಳ ಬಗ್ಗೆ ಅವಹೇಳನ ಮಾಡುತ್ತಿದ್ದಾನೆ ಎಂದು ದೂರು ನೀಡುತ್ತಾರೆ. ಈ ದೂರಿನನ್ವಯ ವಿಶ್ವಾಚಾರ್ಯರನ್ನು ರಾಜಸಭೆಗೆ ಕರೆಯಿಸಲಾಗುತ್ತದೆ. ಆ ಸಭೆಯಲ್ಲಿ ವಿಶ್ವಾಚಾರ್ಯರು ವೇದ, ಆಗಮ, ಪುರಾಣ, ಶಾಸ್ತ್ರ, ಸ್ಮೃತಿ, ಇತಿಹಾಸ ಮತ್ತು ಉಪನಿಷತ್ತುಗಳ ಮೂಲಕ ಹರನ ಪಾರಮ್ಯವನ್ನು ಎತ್ತಿ ಹಿಡಿದು ವಿಪ್ರರನ್ನು ವಾದದಲ್ಲಿ ಸೋಲಿಸುತ್ತಾನೆ. ಕೊನೆಗೆ ರಾಜನೂ ಸಹ ಈ ವಾದದಲ್ಲಿ ಸತ್ಯಾಂಶಗಳನ್ನು ಮನಗಂಡು ಶಿವಭಕ್ತನಾಗಿ ದೀಕ್ಷೆಯನ್ನು ಸ್ವೀಕರಿಸುತ್ತಾನೆ. ಇದೆಲ್ಲವನ್ನೂ ಕಂಡ ಕೈಲಾಸಾಧಿಪತಿ ಶಿವನು ಸಂತೋಷಗೊಂಡು ಪುಷ್ಪಕ ವಿಮಾನದ ಮೂಲಕ ವಿಶ್ವೇಶ್ವರನನ್ನು ಆತನ ತಂದೆತಾಯಿಗಳನ್ನು ಕೈಲಾಸಕ್ಕೆ ಬರಮಾಡಿಕೊಳ್ಳುವುದರೊಂದಿಗೆ ಕಥೆ ಮುಕ್ತಾಯಗೊಳ್ಳುತ್ತದೆ.

❑

ಅರಿವು ಸಾಧ್ಯವಾಯಿತ್ತೆಂದು,
ಗುರುಲಿಂಗಜಂಗಮವ ಬಿಡಬಹುದೆ ?
ಸಂದು ಸಂಶಯವಳಿದು ಅಖಂಡ ಜ್ಞಾನವಾಯಿತ್ತೆಂದು
ಪರಧನ ಪರಸ್ತ್ರೀಯರುಗಳಿಗೆ ಅಳುಪಬಹುದೆ ?
'ಯತ್ರ ಜೀವಃ ತತ್ರ ಶಿವಃ' ಎಂಬ ಅಭಿನ್ನ ಜ್ಞಾನವಾಯಿತ್ತೆಂದು
ಶುನಕ ಸೂಕರ ಕುಕ್ಕುಟ ಮಾರ್ಜಾಲಂಗಳ ಕೂಡೆ ಭುಂಜಿಸಬಹುದೆ ?
ಭಾವದಲ್ಲಿ ತನ್ನ ನಿಜದ ನೆಲೆಯನರಿತಿಹುದು'
ಸುಜ್ಞಾನ ಸತ್ಕ್ರಿಯಾ ಸುನೀತಿ ಮಾರ್ಗದಲ್ಲಿ ವರ್ತಿಸುವುದು.
ಹೀಂಗಲ್ಲದೆ ಜ್ಞಾನವಾಯಿತ್ತೆಂದು ತನ್ನ ಮನಕ್ಕೆ ಬಂದಹಾಂಗೆ
ಮೀರಿನುಡಿದು ನಡೆದೆನಾದಡೆ
ಶ್ವಾನಗರ್ಭದಲ್ಲಿ ಹುಟ್ಟಿಸದೆ ಬಿಡುವನೆ ಚೆನ್ನಮಲ್ಲಿಕಾರ್ಜುನಯ್ಯನು ?

**– ಅಕ್ಕಮಹಾದೇವಿ**

# ಬಸವಣ್ಣನವರು

ಡಾ. ಗುರುಲಿಂಗಪ್ಪ ಧಬಾಲೆ

**ಪೀಠಿಕೆ :** ಬಸವಣ್ಣನವರು ನಾಡು, ದೇಶ ಮಾತ್ರವಲ್ಲ ಇಡೀ ವಿಶ್ವವೇ ಕಂಡ ಒಬ್ಬ ಮಹಾನ್ ವ್ಯಕ್ತಿ. ಮಹಾ ದಾರ್ಶನಿಕ – ಭಕ್ತ – ಶರಣ – ಪ್ರವಾದಿ – ಸಮಾಜ ಸುಧಾರಕ, ದಲಿತೋದ್ಧಾರಕ, ಶ್ರೇಷ್ಠ ಅರ್ಥಶಾಸ್ತ್ರಜ್ಞ, ಪ್ರಖರ ವಿಚಾರವಾದಿ, ಜಗದ ಬೆಳಕು – ಮಹಾ ಉತ್ಸಾಹಿ – ಮಹಾಶಕ್ತಿ – ಮಹಾಋಷಿ – ದಿವ್ಯಜ್ಞಾನಿ ಈ ಎಲ್ಲ ಪದಗಳ ಅರ್ಥಶ್ರೀಮಂತಿಕೆಗೆ ಮೀರಿದ ಅಗಾಧ, ಅದ್ಭುತ ವ್ಯಕ್ತಿತ್ವ ಅವರದು.

ವಿಶ್ವದ ವಿಭೂತಿಪುರುಷರ ಸಾಲಿನಲ್ಲಿ ಬಸವಣ್ಣನವರಿಗೆ ಮೊದಲನೇ ಸ್ಥಾನ. ವಿದ್ವಾಂಸರು ಗುರುತಿಸಿದಂತೆ ವಿಶ್ವದ ಎಲ್ಲ ವಿಭೂತಿಪುರುಷರನ್ನು ನಾವು ಬಸವಣ್ಣನವರೊಬ್ಬರಲ್ಲಿಯೇ ಕಾಣುತ್ತೇವೆ. ಗೌತಮಬುದ್ಧರ ಕರುಣೆ, ಮಹಾವೀರರ ಅಹಿಂಸೆ, ಮಹಮದ್ ಪೈಗಂಬರರ ನಿಷ್ಠೆ, ಏಸುಕ್ರಿಸ್ತರ ಸೇವೆ, ಝುರತುಷ್ಟ್ರರ ಮಾನವೀಯತೆ, ಮಹಾತ್ಮ ಗಾಂಧೀಜಿಯವರ ದೇಶಪ್ರೇಮ, ಸತ್ಯ–ಅಹಿಂಸೆ, ಅಂಬೇಡ್ಕರ್‌ರವರ ದಲಿತಪ್ರಜ್ಞೆ, ಸಾಮಾಜಿಕ ಕಾಳಜಿ, ಸಾಂವಿಧಾನಿಕ ಪ್ರತಿಭೆ, ಗಾಡಗೆ ಮಹಾರಾಜರ ಸ್ವಚ್ಛತಾಪ್ರಜ್ಞೆ, ಪ್ಲೇಟೋ ಅವರ ಆದರ್ಶ ಸಮಾಜಚಿಂತನೆ, ಕಾರ್ಲ್ ಮಾರ್ಕ್ಸ್‌ರ ಕಾರ್ಮಿಕ ಮನ್ನಣೆ, ಕನಫ್ಯೂಶಿಯಸ್‌ರ ಜೀವನಪ್ರೀತಿ ಎಲ್ಲವೂ ಬಸವಣ್ಣನವರಲ್ಲಿ ಸಮಾವೇಶಗೊಂಡಿವೆ. ಈ ದೃಷ್ಟಿಯಿಂದ ಅವರು ಎಲ್ಲ ಮಾನವೀಯ ಆದರ್ಶಗಳ ಮಹಾಸಂಗಮ.

ಕಾಲ, ಧರ್ಮ, ತತ್ವದ ದೃಷ್ಟಿಯಿಂದ ಹಂಪೆಯ ಹರಿಹರ ಬಸವಣ್ಣನವರಿಗೆ ಅತ್ಯಂತ ಸಮೀಪ. ಈ ಹರಿಹರನಿಂದ ಹಿಡಿದು ಇದುವರೆಗೆ ಬಸವಣ್ಣನವರನ್ನು ಕುರಿತು ಅನೇಕ ಅಧ್ಯಯನಗಳಾಗಿವೆ. ಪುರಾಣಗಳು ರಚನೆಯಾಗಿವೆ. ಕಾವ್ಯ, ಮಹಾಕಾವ್ಯಗಳು ಸೃಷ್ಟಿಯಾಗಿವೆ. ಇಂಥ ಇನ್ನೂ ಅದೆಷ್ಟೋ ಬರಹಗಳು, ರಚನೆಗಳು, ಅಧ್ಯಯನಗಳು ನಿರಂತರವಾಗಿ ನಡೆಯುತ್ತಲೇ ಇವೆ. ಆದರೆ ಯಾವ ಬರಹ–ರಚನೆ–ಅಧ್ಯಯನಕ್ಕೂ ಅವರು ಸಂಪೂರ್ಣವಾಗಿ ದಕ್ಕಿಲ್ಲ. ಯಾರೊಬ್ಬರಿಂದಲೂ ಅವರನ್ನು ಸಮಗ್ರವಾಗಿ ಹಿಡಿದಿಡಲು ಸಾಧ್ಯವಾಗಿಲ್ಲ. ಏಕೆಂದರೆ ಅವರ ವ್ಯಕ್ತಿತ್ವವೇ ಅಂತಹುದು. ಅದು ಭೂಮಿಯಷ್ಟು ವಿಸ್ತಾರ, ಸಾಗರದಷ್ಟು ಆಳ, ಬೆಟ್ಟದಷ್ಟು ಎತ್ತರ, ಆಕಾಶದಷ್ಟು ವಿಶಾಲ. ನೋಡಿದಷ್ಟೂ ನೋಡಬೇಕೆನ್ನುವ, ಮಾತಾಡಿದಷ್ಟೂ

ಮಾತಾಡಿಸಿಕೊಳ್ಳುವ, ಓದಿದಷ್ಟೂ ಓದಿಸಿಕೊಳ್ಳುವ, ಚಿಂತಿಸಿದಷ್ಟೂ ಚಿಂತನೆಗೆ ಒಳಪಡಿಸುವ, ಶೋಧಿಸಿದಷ್ಟೂ ಶೋಧಿಸಿಕೊಳ್ಳುವ, ವಿಮರ್ಶಿಸಿದಷ್ಟೂ ವಿಮರ್ಶೆಗೆ ಒಳಗಾಗುವ, ಬರೆದಷ್ಟು ಬರೆಸಿಕೊಳ್ಳುವ ವ್ಯಕ್ತಿತ್ವ ಬಸವಣ್ಣನವರದು. ಅವರವರ ಭಕ್ತಿ, ಭಾವ, ವಿಚಾರ, ಆಲೋಚನೆಗೆ ತಕ್ಕಂತೆ ತೆರೆದುಕೊಳ್ಳುವ ವ್ಯಕ್ತಿತ್ವ ಅದು. ಎಲ್ಲ ಕಾಲಕ್ಕೂ, ಎಲ್ಲ ಜನತೆಗೂ ಸಲ್ಲುವ ವ್ಯಕ್ತಿತ್ವ. ಇದೇ ಬಸವಣ್ಣನವರ ವ್ಯಕ್ತಿತ್ವದ ವೈಶಿಷ್ಟ್ಯ.

**ಜನನ–ಬಾಲ್ಯ :** ಬಸವಣ್ಣನವರು ಜನಿಸಿದ್ದು ಕ್ರಿ.ಶ. 1131ರಲ್ಲಿ ಶೈವ ಬ್ರಾಹ್ಮಣ (ಆಗಮಿಕ) ಮನೆತನದಲ್ಲಿ ಎಂದು ಹೇಳಲಾಗುತ್ತದೆ. ಕರ್ನಾಟಕದ ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಅವರ ಜನ್ಮಸ್ಥಳ. ತಾಯಿ ಮಾದಲಾಂಬಿಕೆ, ತಂದೆ ಮಾದರಸ. ಅಕ್ಕ ನಾಗಲಾಂಬಿಕೆ, ಭಾವ ಶಿವಸ್ವಾಮಿ. ಸೋದರಳಿಯ ಚನ್ನಬಸವಣ್ಣ. ಇಂಗಳೇಶ್ವರ ಮಾದಲಾಂಬಿಕೆಯ ತವರೂರಾದರೆ, ಬಸವನ ಬಾಗೇವಾಡಿ ಮಾದರಸರ ಊರು.

ಬಸವಣ್ಣನವರು ಜನ್ಮತಃ ಕ್ರಾಂತಿಕಾರಿ ಸ್ವಭಾವದವರು. ಪ್ರಖರವಾದ ವೈಚಾರಿಕ ನಿಲುವು ಅವರದು. ಶೈವಬ್ರಾಹ್ಮಣ ಮನೆತನಗಳಲ್ಲಿ ಮಕ್ಕಳ ಎಂಟನೇ ವಯಸ್ಸಿಗೆ ಧಾರ್ಮಿಕ ವಿಧಿಯಾದ ಉಪನಯನ ಕಾರ್ಯಕ್ರಮ ನಡೆಯುತ್ತದೆ. ಅನುಗುಣವಾಗಿ ಬಸವಣ್ಣನರು ಎಂಟನೇ ವಯಸ್ಸಿಗೆ ಕಾಲಿಟ್ಟಾಗ ಅವರ ತಂದೆ ಮಾದರಸರು ಉಪನಯನ ಕಾರ್ಯಕ್ರಮ ಏರ್ಪಡಿಸುತ್ತಾರೆ. ಆಗ ಬಸವಣ್ಣನವರು ವಯಸ್ಸಿನಲ್ಲಿ ಅಕ್ಕ ನಾಗಲಾಂಬಿಕೆ ನನಗಿಂತ ಹಿರಿಯಳು. ಹೀಗಾಗಿ ಉಪನಯನ ಸಂಸ್ಕಾರ ಆಗಬೇಕಾದದ್ದು ಮೊದಲು ಅವಳಿಗೆ, ಅಮೇಲೆ ನನಗೆ ಎಂದು ಹೇಳುತ್ತಾರೆ. ಆಗ ಮಾದರಸರು ನಮ್ಮ ಧರ್ಮದಲ್ಲಿ ಸ್ತ್ರೀಯರಿಗೆ ಉಪನಯನ ಮಾಡಲಾಗುವುದಿಲ್ಲ ಎಂದಾಗ, ಈ ರೀತಿ ಗಂಡು–ಹೆಣ್ಣಿನಲ್ಲಿ ಭೇದ ಬಗೆಯುವಂಥ ಧರ್ಮ ಹಾಗೂ ಆ ಧರ್ಮದ ಸಂಸ್ಕಾರ ನನಗೆ ಬೇಡ ಎಂದು ಹೇಳಿ ಮನೆಯನ್ನು ತೊರೆದು ಈಗಿನ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲಸಂಗಮ ಕ್ಷೇತ್ರಕ್ಕೆ ಬರುತ್ತಾರೆ.

**ಶಿಕ್ಷಣ :** ಕೂಡಲಸಂಗಮ ಘಟಪ್ರಭೆ, ಮಲಪ್ರಭೆ ಹಾಗೂ ಕೃಷ್ಣಾ ನದಿಗಳ ತ್ರಿವೇಣೀ ಸಂಗಮದ ಬಳಿಯಿರುವ ಪ್ರಕೃತಿರಮ್ಯ ಕ್ಷೇತ್ರ. ಅಲ್ಲಿ ಪ್ರಾಚೀನ ಕಾಲದ ಪ್ರಸಿದ್ಧ ಕೂಡಲಸಂಗಮೇಶ್ವರ ದೇವಸ್ಥಾನವಿದೆ. ಈಶಾನ್ಯ ಗುರುಗಳು ಅಲ್ಲಿನ ಸ್ಥಾನಪತಿ. ಇಂಥ ನಿಸರ್ಗಸಹಜ ಸುಂದರ ಆಧ್ಯಾತ್ಮಿಕ ಪರಿಸರಕ್ಕೆ ಬಂದ ಬಾಲಕ ಬಸವಣ್ಣನವರಲ್ಲಿ ಜನ್ಮತಃ ಅಂಟಿಕೊಂಡಿದ್ದ ಭಕ್ತಿಹೃದಯ, ಪ್ರಾಂಜಲ ಮನಸ್ಸು, ಸಂವೇದನಾಶೀಲ ಗುಣ, ಸೂಕ್ಷ್ಮ ದೃಷ್ಟಿ, ತೀಕ್ಷ್ಣ ಬುದ್ಧಿ, ಪಾರದರ್ಶಕತೆ, ಪ್ರತಿಭೆ ಇತ್ಯಾದಿಗಳು ಮತ್ತಷ್ಟು ಎದ್ದು ತೋರಿದುವು. ಇದನ್ನು ಗಮನಿಸಿದ ಈಶಾನ್ಯ ಗುರುಗಳು ಅವರಿಗೆ ಅಲ್ಲಿನ ದೇವಸ್ಥಾನದಲ್ಲಿ ಆಶ್ರಯ ನೀಡುತ್ತಾರೆ. ಮಾತ್ರವಲ್ಲ, ವಿದ್ಯಾಭ್ಯಾಸಕ್ಕೆ ಬೇಕಾದ ಎಲ್ಲ

ಅನುಕೂಲತೆಗಳನ್ನು ಒದಗಿಸಿಕೊಡುತ್ತಾರೆ. ಇಂಥ ಸುಂದರ ಪರಿಸರ ಕೂಡಲಸಂಗಮೇಶ್ವರನ ಸಾನ್ನಿಧ್ಯ ಹಾಗೂ ಈಶಾನ್ಯ (ಜಾತವೇದ ಮುನಿಗಳ) ಗುರುಗಳ ಆಶ್ರಯದಲ್ಲಿ ಬಸವಣ್ಣನವರು 12 ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡುತ್ತಾರೆ. ವೇದ, ಶಾಸ್ತ್ರ, ಪುರಾಣ, ತರ್ಕ, ಆಗಮ, ಉಪನಿಷತ್ತು, ಇತಿಹಾಸ, ಕಾವ್ಯ, ಯೋಗ ಹೀಗೆ ಎಲ್ಲ ಜ್ಞಾನಧಾರೆಗಳನ್ನೂ ತಲಸ್ಪರ್ಶಿಯಾಗಿ ಅಧ್ಯಯನಮಾಡಿ ಅವುಗಳಲ್ಲಿ ಪಾರಂಗತರಾಗುತ್ತಾರೆ.. ಅವರ ಅರಿವಿನ ದಿಗಂತ ವಿಸ್ತರಿಸುತ್ತದೆ. ವೈಚಾರಿಕತೆ, ವೈಜ್ಞಾನಿಕತೆಯ ಮೊಗ್ಗು ಅರಳತೊಡಗುತ್ತದೆ.

**ಕೂಡಲಸಂಗಮದಿಂದ ಮಂಗಳವೇಡೆಯೆಡೆಗೆ :** ಕೂಡಲಸಂಗಮದ ಸುಂದರ ಪರಿಸರದಲ್ಲಿ ಪ್ರಬುದ್ಧ, ಪ್ರಗಲ್ಭ ಹಂತ ತಲುಪಿದ ಬಸವಣ್ಣನವರ ಮನಸ್ಸು ಸಮಾಜದ, ದೇಶದ ಅಭಿವೃದ್ಧಿಯನ್ನು ಕುರಿತು ಚಿಂತಿಸತೊಡಗುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಈಶಾನ್ಯ ಗುರುಗಳು ಅವರನ್ನು ಈಗಿನ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಮಂಗಳವೇಡೆಗೆ ಹೋಗುವಂತೆ ಸೂಚಿಸುತ್ತಾರೆ.

ಮಂಗಳವೇಡೆ ಅಂದು ಒಂದು ಪ್ರಮುಖ ರಾಜಕೀಯ ಕೇಂದ್ರವಾಗಿತ್ತು. ಕಲ್ಯಾಣಿ ಚಾಲುಕ್ಯ ಸಾಮ್ರಾಜ್ಯದ ಒಂದು ಬಹು ದೊಡ್ಡ ಮಂಡಳವಾಗಿದ್ದ ಈ ಪ್ರಾಂತ್ಯವನ್ನು ಕಳಚುರಿ ಮನೆತನದ ಬಿಜ್ಜಳ ಆಳುತ್ತಿದ್ದ. ಅವನಿಗೆ ಬಲದೇವರಸ ಮತ್ತು ಸಿದ್ಧರಸ ಎನ್ನುವವರೀರ್ವರು ಪ್ರಧಾನ ಮಂತ್ರಿಗಳಾಗಿದ್ದರು. ಅವರಲ್ಲಿ ಬಲದೇವರಸ ಬಸವಣ್ಣನವರ ಸೋದರಮಾವ. ತನ್ನಲ್ಲಿಗೆ ಬಂದ ಸೋದರಳಿಯ ಬಸವಣ್ಣನಿಗೆ ಬಲದೇವರಸ ಬಿಜ್ಜಳನ ಆಸ್ಥಾನದಲ್ಲಿ ಕರಣಿಕ ವೃತ್ತಿಯನ್ನು ಒದಗಿಸಿಕೊಡುವುದರೊಂದಿಗೆ ತನ್ನ ಮಗಳು ಗಂಗಾಂಬಿಕೆಯನ್ನು ಕೊಟ್ಟು ಮದುವೆಯನ್ನೂ ಮಾಡುತ್ತಾರೆ.

ಬಿಜ್ಜಳನ ಆಸ್ಥಾನದಲ್ಲಿ ಇನ್ನೋರ್ವ ಪ್ರಧಾನಮಂತ್ರಿಯಾಗಿದ್ದ ಸಿದ್ಧರಸನಿಗೆ ನೀಲಾಂಬಿಕೆ ಎಂಬ ಮಗಳಿದ್ದಳು. ಯುದ್ಧವೊಂದರಲ್ಲಿ ಸಿದ್ಧರಸ ಮರಣವನ್ನಪ್ಪಿದ ಹಿನ್ನೆಲೆಯಲ್ಲಿ ಅವನ ಮಗಳು ನೀಲಾಂಬಿಕೆ ಬಿಜ್ಜಳನ ಸಾಕುತಂಗಿಯಾಗಿ ಬೆಳೆಯುತ್ತಾಳೆ. ಗಂಗಾಂಬಿಕೆ ಹಾಗೂ ನೀಲಾಂಬಿಕೆ ಬಾಲ್ಯದ ಗೆಳತಿಯರು. ಅವರು ಆಡುವುದು, ಉಣ್ಣುವುದು, ಮಲಗುವುದು, ಓದುವುದು, ಬರೆಯುವುದು ಎಲ್ಲವನ್ನೂ ಒಟ್ಟೊಟ್ಟಾಗಿ ಮಾಡುತ್ತ ಮದುವೆಯಾದರೆ ಒಬ್ಬನೇ ಗಂಡನನ್ನು ಮದುವೆಯಾಗಬೇಕು ಎಂಬ ಕನಸನ್ನು ಸಹ ಕಂಡವರು. ಅಷ್ಟೊಂದು ಅನ್ಯೋನ್ಯವಾದ ಸ್ನೇಹ ಅವರದು.

ಕರ್ತವ್ಯಪ್ರಜ್ಞೆ–ನಿಷ್ಠೆ, ಪ್ರಾಮಾಣಿಕತೆ, ಉತ್ಸಾಹ–ಉಲ್ಲಾಸ, ಚುರುಕುತನದಿಂದ ಕೂಡಿದ್ದ ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಕರಣಿಕ ವೃತ್ತಿಯನ್ನು ಅತ್ಯಂತ ಸಾಮರ್ಥ್ಯದಿಂದ ನಿರ್ವಹಿಸುತ್ತಿದ್ದರು. ಇದೆಲ್ಲವನ್ನೂ ಅತ್ಯಂತ ಹತ್ತಿರದಿಂದ ಗಮನಿಸಿದ ಅರಸ ಬಿಜ್ಜಳ ಗಂಗಾಂಬಿಕೆಯ ಅಂತರಂಗದ ಗೆಳತಿ ತನ್ನ ಸಾಕುತಂಗಿಯೂ ಆದ ನೀಲಾಂಬಿಕೆಯನ್ನು

ಬಸವಣ್ಣನವರಿಗೆ ಕೊಟ್ಟು ಮದುವೆ ಮಾಡುತ್ತಾನೆ. ಹೀಗಾಗಿ ಬಸವಣ್ಣನವರಿಗೆ ಗಂಗಾಂಬಿಕೆ ಹಾಗೂ ನೀಲಾಂಬಿಕೆ ಎಂಬ ಇಬ್ಬರು ಹೆಂಡಂದಿರು. ಗಂಗಾಂಬಿಕೆಗೆ ಸಿದ್ಧರಸ ಹಾಗೂ ನೀಲಾಂಬಿಕೆಗೆ ಬಾಲಸಂಗಯ್ಯ ಎಂಬ ಮಕ್ಕಳು ಹುಟ್ಟಿದರು. ಆದರೆ ಅವರೀರ್ವರೂ ಬಾಲ್ಯದಲ್ಲಿಯೇ ತೀರಿಕೊಂಡರು ಎಂದು ಹೇಳಲಾಗುತ್ತದೆ.

**ಮಂಗಳವೇಡೆಯಿಂದ ಕಲ್ಯಾಣದೆಡೆಗೆ :** ಬಿಜ್ಜಳ ತುಂಬ ಮುತ್ಸದ್ಧಿತನದಿಂದ ಕೂಡಿದ ಅತ್ಯಂತ ಮಹತ್ವಾಕಾಂಕ್ಷಿ ಅರಸ. ಚಾಲುಕ್ಯ ಜಗದೇಕಮಲ್ಲನ ಕಾಲದಿಂದಲೂ ಅವನು ಕಲ್ಯಾಣದ ಸಿಂಹಾಸನದ ಮೇಲೆ ಕಣ್ಣಿಟ್ಟಿದ್ದ. ಜಗದೇಕಮಲ್ಲನ ನಂತರ ಅಧಿಕಾರಕ್ಕೆ ಬಂದ ಚಾಲುಕ್ಯ ತೈಲಪ ವಿಲಾಸಿ ಅರಸನಾಗಿದ್ದುದನ್ನು ಗಮನಿಸಿ ಅವನನ್ನು ಸದೆಬಡಿದು ಕಲ್ಯಾಣದ ಸಿಂಹಾಸನವನ್ನು ವಶಪಡಿಸಿಕೊಂಡ ಬಿಜ್ಜಳ ಮಂಗಳವೇಡೆಯಿಂದ ಕಲ್ಯಾಣಕ್ಕೆ ಬಂದ. ಆಗ ಬಸವಣ್ಣನವರೂ ಬಿಜ್ಜಳನೊಂದಿಗೆ ಕಲ್ಯಾಣಕ್ಕೆ ಬಂದರು.

ಕಲ್ಯಾಣಕ್ಕೆ ಬಂದ ಮೇಲೆ ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ತಮ್ಮ ಪ್ರತಿಭೆ, ಕರ್ತವ್ಯನಿಷ್ಠೆ, ಪ್ರಾಮಾಣಿಕತೆಯಿಂದ ಹಂತಹಂತವಾಗಿ ಬೆಳೆಯುತ್ತ ಭಂಡಾರಿಯಾಗಿ, ದಂಡಾಧಿಕಾರಿಯಾಗಿ, ಕೊನೆಗೆ ಪ್ರಧಾನಮಂತ್ರಿಯಾಗಿ ಪದೋನ್ನತಿ ಪಡೆದರು. ಅವರು ಕೆಲಸ ಮಾಡುತ್ತಿದ್ದುದು ರಾಜಕೀಯ ಕ್ಷೇತ್ರದಲ್ಲಾದುದರಿಂದ ಸಹಜವಾಗಿಯೇ ಅವರಿಗೆ ಜನಸಾಮಾನ್ಯರ ಸಂಪರ್ಕ ಬಂದಿತು. ಸಮಕಾಲೀನ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಹೀಗೆ ಪ್ರತಿಯೊಂದು ಕ್ಷೇತ್ರದ ಕಡೆಗೂ ಗಮನಹರಿಸುವ ಪ್ರಸಂಗಗಳು ಬಂದವು. ಭಾಷೆ–ಸಾಹಿತ್ಯ ಕ್ಷೇತ್ರಗಳತ್ತಲೂ ಅವರ ಗಮನ ಹರಿಯಿತು. ಆಗ ಅವರಿಗೆ ಎಲ್ಲ ಕಡೆಯೂ ಅವ್ಯವಸ್ಥೆ, ಅಸಮಾನತೆ, ಭ್ರಷ್ಟತೆ, ಕಂದಾಚಾರ, ಬಡತನ, ಅನಕ್ಷರತೆ, ಜಾತೀಯತೆ, ಅಸ್ಪೃಶ್ಯತೆ, ಮಡಿವಂತಿಕೆ, ಮೌಢ್ಯ, ಭಟ್ಟಂಗಿತನ ಇವೇ ತುಂಬಿಕೊಂಡಿರುವುದು ಕಂಡುಬಂದಿತು. ಪರಿಣಾಮವಾಗಿ ಅವರಿಗೆ ಅವುಗಳ ನಿರ್ಮೂಲನೆಯ ಚಿಂತೆ ಪ್ರಾರಂಭವಾಯಿತು.

ಬಸವಣ್ಣನವರು ಸ್ವಸ್ಥ ಸುಂದರ ಸಮಾಜ ನಿರ್ಮಾಣದ ಕನಸನ್ನು ಕಂಡರು. ತಮ್ಮ ಈ ಕನಸನ್ನು ಸಾಕಾರಗೊಳಿಸಲು ಅವರು ಕಲ್ಯಾಣದಲ್ಲಿ ಅನುಭವಮಂಟಪವನ್ನು ಕಟ್ಟಿಸಿದರು. ಅದಕ್ಕೆ ಅಲ್ಲಮ ಪ್ರಭುದೇವರನ್ನು ಅಧ್ಯಕ್ಷರನ್ನಾಗಿ ಮಾಡಿ ಕ್ರಾಂತಿಕಾರಿ ಹೆಜ್ಜೆಯಿಟ್ಟರು. ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಪ್ರತಿಯೊಬ್ಬರಿಗೂ ಮುಕ್ತವಾದ ಅವಕಾಶವಿತ್ತು. ಹೀಗಾಗಿ ಎಲ್ಲ ವೃತ್ತಿ, ಜಾತಿ, ಲಿಂಗ, ಧರ್ಮ, ಪಂಥ, ಮತ, ಭಾಷೆ, ಪ್ರಾದೇಶಿಕ ಮೂಲದ ಅಸಂಖ್ಯಾತ ಜನರು ಅಲ್ಲಿ ಬರಲು ಪ್ರಾರಂಭಿಸಿದರು. ದೇವರು, ಮಂದಿರ, ಧರ್ಮ, ಸಂಸಾರ, ದಾಂಪತ್ಯ, ಸಮಾಜ, ಶಿಕ್ಷಣ, ಸ್ವರ್ಗ–ನರಕ, ಸ್ತ್ರೀ–ಪುರುಷ, ದೇಹ–ಆತ್ಮ, ಸ್ಥಾವರ–ಜಂಗಮ, ಯೋಗ, ವೈರಾಗ್ಯ, ನಂಬಿಕೆ–ಮೂಢನಂಬಿಕೆ, ರೋಗ–ಆರೋಗ್ಯ, ಭಾಷೆ, ಸಂಸ್ಕೃತಿ, ಸಾಮಾಜಿಕ–

ಧಾರ್ಮಿಕ ಪದ್ಧತಿ, ಆಚರಣೆ, ಧ್ಯಾನ, ಪೂಜೆ, ಕುಲ–ಜಾತಿ, ಶೀಲ, ಮನಸ್ಸು ಹೀಗೆ ಮಾನವಜೀವನಕ್ಕೆ ಸಂಬಂಧಿಸಿದ ಪ್ರತಿಯೊಂದು ವಿಷಯಗಳ ಕುರಿತ ಚಿಂತನ–ಮಂಥನ, ಚರ್ಚೆ ಅಲ್ಲಿ ನಡೆಯುತ್ತಿತ್ತು. ಅದರ ಫಲವಾಗಿ ನಿತ್ಯನೂತನವಾದಂಥ ಅನೇಕ ವೈಜ್ಞಾನಿಕ, ವೈಚಾರಿಕ, ಆಧ್ಯಾತ್ಮಿಕ ಮೌಲ್ಯಗಳು ಹೊರಹೊಮ್ಮಿದವು. ಆ ಮೌಲ್ಯಗಳನ್ನು ಅವರು ವಚನಗಳಲ್ಲಿ ಹಿಡಿದಿಟ್ಟರು. ಅಲ್ಲಿ ಸೇರಿದ ಎಲ್ಲ ಶರಣರೂ ವಚನಗಳನ್ನು ರಚಿಸಿದರು. ಕನ್ನಡದಲ್ಲಿ ಸಮೃದ್ಧವಾದ ವಚನಸಾಹಿತ್ಯ ಸೃಷ್ಟಿಯಾಯಿತು. ಹೀಗೆ ಸೃಷ್ಟಿಯಾದ ಸಾಹಿತ್ಯ ಜನಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಭಾರಿ ಸಂಚಲನವನ್ನುಂಟುಮಾಡಿತು. ಕ್ರಿ.ಶ. 1167ರಲ್ಲಿ ಕಲ್ಯಾಣಕ್ರಾಂತಿ ಸಂಭವಿಸಿತು. ಇದೇ ಕಾಲಕ್ಕೆ ಕೂಡಲ ಸಂಗಮದಲ್ಲಿ ಬಸವಣ್ಣನವರು ಲಿಂಗೈಕ್ಯರಾದರು.

**ವಚನಗಳು :** ಬಸವಣ್ಣನವರ ವಚನಗಳು 'ಕೂಡಲ ಸಂಗಮದೇವ' ಎಂಬ ಅಂಕಿತದಲ್ಲಿವೆ. ಅವರು ಸಾವಿರಾರು ವಚನಗಳನ್ನು ಬರೆದಿದ್ದಾರೆ. ಅದರ ಎಲ್ಲ ವಚನಗಳೂ ನಮಗೆ ಲಭ್ಯವಿಲ್ಲ. ಇಂದು ಅವರ ಕೇವಲ 1,406 ವಚನಗಳು ಮಾತ್ರ ಲಭ್ಯವಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಅವುಗಳನ್ನು ಪ್ರಕಟಿಸಿದೆ.

ಬಸವಣ್ಣನವರ ವಚನಗಳ ಭಾಷೆ ಆಪ್ತವಾಗಿದ್ದು ಎಂಥವರಿಗೂ ಆಪ್ಯಾಯಮಾನವಾಗಿದೆ. ಕಾವ್ಯ ಬರೆಯುವ, ತಾನು ಸಾಹಿತಿ ಎಂದೆನಿಸಿಕೊಳ್ಳಬೇಕು ಎನ್ನುವ ಯಾವ ಉದ್ದೇಶವೂ ಅವರಿಗಿರಲಿಲ್ಲ. ಆದರೆ ಅವರ ವಚನಗಳಲ್ಲಿ ಕಾವ್ಯಗುಣ ಸಹಜವಾಗಿಯೇ ತುಂಬಿಕೊಂಡು ಬಂದಿದೆ. ರೂಪಕಗಳು, ಪ್ರತಿಮೆಗಳು, ದೃಷ್ಟಾಂತಗಳು, ಪ್ರಾಸ, ಲಯ, ಯತಿ, ಗಾದೆ, ಪಡೆನುಡಿಗಳು ಅಲ್ಲಿ ಯಥೇಚ್ಛವಾಗಿ ಕಂಡುಬರುತ್ತವೆ. ದಯವೇ ಧರ್ಮದ ಮೂಲವಯ್ಯ, ಸತ್ಯವ ನುಡಿವುದೇ ದೇವಲೋಕ ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂಬಂಥ ಗಾದೆ ರೂಪದ ಮಾತುಗಳಾಗಲಿ, ನುಡಿದರೆ ಮುತ್ತಿನ ಹಾರದಂತಿರಬೇಕು ಎಂಬಂಥ ಅಲಂಕಾರದ ಮಾತುಗಳಾಗಲಿ ಅವರ ವಚಗಳಲ್ಲಿ ಹೇರಳವಾಗಿ ಸಿಗುತ್ತವೆ.

ಕಾವ್ಯಾಂಶದಂತೆ ಓಜೆ ಬಜಾವಣೆ ಲೆಕ್ಕವನರಿಯೇ, ಆನು ಒಲಿದಂತೆ ಹಾಡುವೆ ಎನ್ನುವ ಬಸವಣ್ಣನವರು ತಮ್ಮ ವಚನಗಳಲ್ಲಿ ಸಂಗೀತದ ಅಂಶವನ್ನೂ ದಟ್ಟವಾಗಿ ತುಂಬಿದ್ದಾರೆ. ರಾಗ, ತಾಳ, ಲಯಗಳಿಂದ ಕೂಡಿರುವ ಅವು ತುಂಬ ಸುಂದರವಾಗಿ ಹಾಡಲು ಬರುತ್ತವೆ. ಹೀಗೆ ಸಂಗೀತ, ಸಾಹಿತ್ಯಗಳ ಸುಮಧುರ ಸಮಾವೇಶ ಹೊಂದಿರುವ ಅವರ ವಚನಗಳು ಮನೋಜ್ಞವಾಗಿವೆ, ನಾದಮಾಧುರ್ಯದಿಂದ ಕೂಡಿವೆ, ನಿತ್ಯನೂತನವಾಗಿವೆ. ಮೊಗೆದಷ್ಟೂ ಅರ್ಥಸಂಪತ್ತು ಅವುಗಳಿಂದ ಹೊರಹೊಮ್ಮುತ್ತದೆ.

ಬಸವಣ್ಣನವರ ವಚನಗಳ ಪ್ರಧಾನ ಉದ್ದೇಶ ಸಮಾಜ ಸುಧಾರಣೆ, ಪರ್ಯಾಯ ಸಮಾಜ ನಿರ್ಮಾಣ. ವೈಜ್ಞಾನಿಕ, ವೈಚಾರಿಕ ನೆಲೆಗಟ್ಟಿನ ನಿತ್ಯ ನೂತನ ಸಮಾಜದ

ನಿರ್ಮಾಣಕ್ಕೆ ಬೇಕಾಗುವ ಎಲ್ಲ ವಿಚಾರಗಳು ಅವರ ವಚನಗಳಲ್ಲಿ ತುಂಬಿವೆ. ಹೀಗಾಗಿ 900 ವರ್ಷಗಳ ಹಿಂದಿನ ಬಸವಣ್ಣ ಇಂದಿಗೂ ಪ್ರಸ್ತುತವಾಗುತ್ತಾರೆ.

ಬಸವಣ್ಣನವರದು ಬಹುಮುಖ ವೈಶಿಷ್ಟ್ಯಗಳಿಂದ ಕೂಡಿದ ಪರಿಪೂರ್ಣ ವ್ಯಕ್ತಿತ್ವ. ನಾವು ಅವರ ವ್ಯಕ್ತಿತ್ವದ ಒಂದೊಂದು ಆಯಾಮಗಳನ್ನು ಅರಿಯುತ್ತ ಹೋದಂತೆಲ್ಲ ಅವು ಹೊಸದಾಗಿ ಅರಳಿಕೊಳ್ಳುತ್ತಲೇ ಹೋಗುತ್ತವೆ. ಅವರ ವಚನಗಳನ್ನು ಅಧ್ಯಯನ ಮಾಡಿದಂತೆ ಅವರ ಬಹುಮುಖ ವ್ಯಕ್ತಿತ್ವದ ದಿವ್ಯದರ್ಶನ ದೊರೆಯುತ್ತದೆ.

ಇಂಥ ವಿಶಿಷ್ಟ ವ್ಯಕ್ತಿತ್ವದ ಬಸವಣ್ಣ ನವರನ್ನು "ಕರ್ನಾಟಕದ ಸಾಂಸ್ಕೃತಿಕ ನಾಯಕ" ಎಂದು ಹೇಳಿಕೊಳ್ಳಲು ಕನ್ನಡಿಗರಿಗೆಲ್ಲ ಹೆಮ್ಮೆ ಎನಿಸುತ್ತದೆ. ಅವರು ಕೇವಲ ಕರ್ನಾಟಕದ ಸಾಂಸ್ಕತಿಕ ನಾಯಕರಲ್ಲ, ಇಡೀ ವಿಶ್ವದ ಸಾಂಸ್ಕತಿಕ ನಾಯಕ ಎನಿಸಿಕೊಳ್ಳುವ ಎಲ್ಲ ಅರ್ಹತೆಗಳನ್ನು ಹೊಂದಿದ್ದಾರೆ. ಅವರ ತತ್ವಗಳ ನೆಲೆಗಟ್ಟಿನಲ್ಲಿ ವಿಶ್ವ ರೂಪುಗೊಂಡಿದ್ದೇ ಆದರೆ ಸ್ವರ್ಗ ಎನ್ನುವುದು ಭೂಮಿಯ ಮೇಲೆಯೇ ನಿರ್ಮಾಣವಾಗುತ್ತದೆ. ಅಂಥ ಸ್ವರ್ಗ ನಿರ್ಮಾಣವಾಗುವಂಥ ದಿನಗಳು ಬಹು ಬೇಗ ಬರಲಿ ಎಂಬುದು ಎಲ್ಲ ಪ್ರಾಜ್ಞರ ಆಶಯ.

❑

ಅಂಗ ಕ್ರಿಯಾಲಿಂಗವ ವೇಧಿಸಿ
ಅಂಗ ಲಿಂಗದೊಳಗಾಯಿತ್ತು
ಮನ ಅರಿವ ಬೆರಸಿ, ಜಂಗಮ ಸೇವೆಯ ಮಾಡಿ
ಮನ ಜಂಗಮಲಿಂಗದೊಳಗಾಯಿತ್ತು
ಭಾವ ಗುರುಲಿಂಗದೊಳಗೆ ಬೆರಸಿ, ಮಹಾಪ್ರಸಾದವ ಭೋಗಿಸಿ
ಭಾವ ಗುರುಲಿಂಗದೊಳಗಾಯಿತ್ತು
ಚೆನ್ನಮಲ್ಲಿಕಾರ್ಜುನಾ
ನಿಮ್ಮ ಒಲುಮೆಯಿಂದ ಸಂದಳಿದು
ಸ್ವಯಲಿಂಗಿಯಾದೆನಯ್ಯಾ ಪ್ರಭುವೆ

**– ಅಕ್ಕಮಹಾದೇವಿ**

# ತುಮಕೂರು ಜಿಲ್ಲೆಯ ವೀರಶೈವ ಮಠಗಳು

ಡಾ. ಬಿ. ನಂಜುಂಡಸ್ವಾಮಿ

(ಹಿಂದಿನ ಸಂಚಿಕೆಯಿಂದ)

ತುಮಕೂರು ತಾಲ್ಲೂಕು ಬೆಳ್ಳಾವಿ ಗ್ರಾಮದಲ್ಲಿ 1. ಮೂಲಮಠ, 2. ರುದ್ರಮಠ, 3. ದೇಶಮಠ, 4. ಹಿರೇಮಠ, 5. ಮಲ್ಲಿಕಾರ್ಜುನ ಮಠ ಅಥವಾ ಕಾರದ ಸ್ವಾಮಿಗಳ ಮಠ, 6. ಕಂಚಿ ಗುರುಮಠಗಳು ಇವೆ.

ಬೆಳ್ಳಾವಿ ಗ್ರಾಮದ ರುದ್ರಮಠ ಶ್ರೀಮದ್ರಂಭಾಪುರಿ ಶಾಖಾ ಮಠವಾಗಿದೆ. ಮಠದ ಆರಾಧ್ಯ ದೈವ ವೀರಭದ್ರಸ್ವಾಮಿ ವಿಗ್ರಹ ಸುಮಾರು ಐದು ಅಡಿ ಎತ್ತರವಿದ್ದು ಬಹಳ ಮಾಟವಾಗಿದೆ. ಈ ಮಠದ ಸ್ವಾಮಿಗಳು ಮತ್ತು ವಂಶಸ್ಥರು ಗಟ್ಟಿಯಾದ ವಿದ್ವಾಂಸರುಗಳ "ಸೂರ್ಯ ಸಿದ್ಧಾಂತ – ಚಂದ್ರ ಸಿದ್ಧಾಂತ"ದ ಅನ್ವಯ ಜ್ಯೋತಿಷ್ಯಗ್ರಂಥವನ್ನು ರಚಿಸಿದ್ದರು. ಈ ಮನೆತನದವರೇ ತುಮಕೂರು ತಾಲ್ಲೂಕ್ ಹಾಲ್ನೂರು ಮಠವನ್ನು ಸ್ಥಾಪಿಸಿದವರು. ಹಾಲ್ನೂರುಮಠದ ಆ ಜಂಗಮಮೂರ್ತಿಗಳು ಅಂದಿನ ದಿನಮಾನಕ್ಕೆ ಗಟ್ಟಿಯಾದ ಆಚರಣೆಗೆ ಪ್ರಸಿದ್ಧರಾಗಿದ್ದವರು. ಕಾರದ ಸ್ವಾಮಿಗಳು ಶಿವೈಕ್ಯರಾದಾಗ ಅವರ ಲಿಂಗ ಶರೀರವನ್ನು ಸಮಾಧಿಯಲ್ಲಿ ಬಿಜಮಾಡಿಸಿದವರು. ತಾವು ಲಿಂಗೈಕ್ಯರಾಗುವ ದಿನವನ್ನು ತಿಳಿಸಿ, ಅದರಂತೆ ಪ್ರತಿನಿತ್ಯ ರುದ್ರಾಭಿಷೇಕ, ಜಂಗಮದಾಸೋಹ, ಪಾದೋದಕ ಪ್ರಸಾದವನ್ನು ಪಡೆದುಕೊಂಡು ಶರಣಲೀಲಾಮೃತ ಗ್ರಂಥಪಾರಾಯಣ ಮಾಡುವಾಗ ಶರಣರ ಐಕ್ಯ ಪ್ರಸಂಗ ಬಂದಾಗ ತಾವೇ ಕರ್ಪೂರ ಹಚ್ಚಿ ಮಂಗಳ ಹೇಳಿ ಶಿವಶಿವ ಎಂದರು. ಸಾವಿರಾರು ಜನ ಭಕ್ತರು ಅವರ ಕ್ರಿಯಾಸಮಾಧಿಯಲ್ಲಿ ಭಾಗವಹಿಸಿ ತಮ್ಮ ಭಕ್ತಿಯನ್ನು ಸಲ್ಲಿಸಿದರು. ಕಾರದ ಸ್ವಾಮಿಗಳು ಶಿವೈಕ್ಯರಾದದ್ದು 1908ರಲ್ಲಿ. ಹಾಲ್ನೂರು ನಂಜುಂಡದೇವರು 1915ರ ಸುಮಾರಿನಲ್ಲಿ ಶಿವೈಕ್ಯರಾಗಿರಬಹುದು.

**ಮೂಲೇಮಠ**

ಬೆಳ್ಳಾವಿಯ ಮೂಲಮಠ ಪುತ್ರವರ್ಗ ಪರಂಪರೆಯ ಮಠ, ಮಠ ಮತ್ತು ಗದ್ದಿಗೆ ಮಾತ್ರ ಉಳಿದುಕೊಂಡಿದೆ. ಗದ್ದಿಗೆ ಮೇಲೆ ವೃಷಭ ವಿಗ್ರಹ ಪ್ರತಿಷ್ಠೆ ಮಾಡಲಾಗಿದೆ. ಮೂಲಮಠದ ರುದ್ರಶಾಸ್ತ್ರಿಗಳು ಅಂದಿನ ದಿನಮಾನದಲ್ಲಿ ವೇದಾಂತ ಮತ್ತು ವೈದಿಕ ಕ್ರಿಯೆಗಳನ್ನು ಮೈಸೂರು ನಗರದಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು ನಂತರ ಪುಂಗನೂರು ಸಂಸ್ಥಾನದ ಆಸ್ಥಾನವಿದ್ವಾಂಸರಾಗಿದ್ದರು. ದೇವನೂರು "ಗುರುಮಲ್ಲೇಶ ವಿಲಾಸ"

ಕೃತಿಯನ್ನು ಬೆಳ್ಳಾವಿ ನರಹರಿ ಶಾಸ್ತ್ರಿಗಳು ಆಸ್ಥಾನ ವಿದ್ವಾನ್ ಪಿ.ಆರ್. ಕರಿಬಸವಶಾಸ್ತ್ರಿಗಳಿಂದ ಬರೆಸಿ ಪ್ರಕಾಶಪಡಿಸಿದ್ದಾರೆ. ರುದ್ರಶಾಸ್ತ್ರಿಗಳು ಕಾರದ ಸ್ವಾಮಿಗಳ ಸೇವೆ ಮಾಡಿದ್ದರು. ಅವರನ್ನು ಕುರಿತು ಅಧಿಕೃತವಾದ ಕೃತಿಯನ್ನು ರಚಿಸಿದರು. ಮೂಲೇಮಠದ ರುದ್ರಶಾಸ್ತ್ರಿಗಳು 1916ರ ಸುಮಾರಿನಲ್ಲಿ ರಚಿಸಿದ ಈ ಕೃತಿಯನ್ನು ಬೆಳ್ಳಾವೆಯ ಯ॥ ಜಿ.ಎನ್. ಗಟ್ಟಪ್ಪನವರು 5.4.1956ರಲ್ಲಿ ಪ್ರಕಟಪಡಿಸಿದರು. ಈ ಕೃತಿಯನ್ನು ಸಂಪಾದಿಸಿದವರು ಬೆಳ್ಳಾವೆ ಮೂಲದ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು.

ಕಾರದ ಸ್ವಾಮಿಗಳ ಮಠವನ್ನು ಪೂರ್ವದಲ್ಲಿ ಮಲ್ಲಿಕಾರ್ಜುನಸ್ವಾಮಿ ಮಠ ಎಂದು ಕರೆಯಲಾಗುತ್ತಿತ್ತು. ಸ್ವಾಮಿಗಳನ್ನು ಕುರಿತು ಮೂಲಮಠದ ರುದ್ರಶಾಸ್ತ್ರಿಗಳು ಬರೆದ "ಶ್ರೀ ಕಾರದ ಗುರುವರೇಣ್ಯ ಚರಿತಂ" ಪುಸ್ತಕದಲ್ಲಿ ಈ ಮಾತುಗಳನ್ನು ಬರೆದಿದ್ದಾರೆ. "ಕರದೊಳ್ ದಂಡ ಕಮಂಡಲುಗಳಂ ಪಿಡಿದು ಸರ್ವಾಂಗದೊಳ್ ಭಸ್ಮ ರುದ್ರಾಕ್ಷ ಧಾರಣಂ ಮಾಡಿ ಕೌಪೀನಾವಶೇಷವಾಗಿ ನಾನಾ ದೇಶಂಗಳಂ ಸಂಚರಿಸುತ್ತಂ ಅಲ್ಲಲ್ಲಿ ಭಕ್ತರಭೀಷ್ಟವಂ ಪರಿಪೂರ್ಣಗೊಳಿಸಿ ಮುಕ್ತರಂ ಮಾಡುತ್ತ ಮಹಾಶೀಲಮಾದಾಚರಣೆಯಂ ಕೈಕೊಂಡು ಆಹಾರಕ್ಕಂ ಬರಿಯ ಕಾರಮಂ ಸೇವಿಸುತ್ತಿರ್ದುದರಿಂ ಶ್ರೀಕಾರದ ಸ್ವಾಮಿಯೆಂಬ ಪೆಸರನಾಂತು ಚರಿಸುತ್ತಿರ್ಪಾಗಳ್"... ಹೀಗೆ ಬಹಳ ಗಟ್ಟಿಯಾದ ಆಚರಣೆ ಮಾಡುತ್ತಾ ಭಕ್ತ ಜನರನ್ನು ಉದ್ಧಾರ ಮಾಡುತ್ತಾ "ನೃಪ ಶಾಲೀವಾಹನ ಶಕ 1830 ಒಂದು ಸಾವಿರದೆಂಟುನೂರ ಮೂವತ್ತಕ್ಕೆ ಸಲ್ಲುವ ಕೀಲಕನಾಮ ಸಂವತ್ಸರದ ಶ್ರಾವಣ ಮಹಾಲಿಂಗದಲ್ಲಿ ಲೀನರಾದರು. ಶ್ರೀ ಮಹಾಗುರುವರ್ಯರ ಯೋಗ ಸಮಾಧಿಯ ಮೇಲೆ ಶಿಷ್ಯ ಶಿರೋಮಣಿಯನಿಪ್ಪ ಚನ್ನಪ್ಪಯೆಂಬೋ ನೃಪ ಶಾಲೀವಾಹನ ಶಕ 1838ನೇ ನಳನಾಮ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮೀ ಇಂದುವಾಸರಂ ದಿವಿ ಸೂರ್ಯೋದಯಾದಿ 8–12 ಘಳಿಗೆ ಲಾಗಾಯ್ತು 10 ಘಳಿಗೆ ಒಳಗಾಗಿ ನಡೆಯುವ ಶ್ರೀ ಶುಭ ಮೇಷ ಲಗ್ನದಲ್ಲಿ ಅತಿ ವೈಭವದಿಂ ಲಿಂಗಪ್ರತಿಷ್ಠಾ ಕಾರ್ಯಂಗಳಂ ಸಾಂಗವಾಗಿ ನೆರವೇರಿಸಿದರು. ಇಂತು ಬೆಳ್ಳಾವೆ ಗ್ರಾಮದೊಳು ಪ್ರತಿಷ್ಠಿಸಲ್ಪಟ್ಟಿರುವ ಶ್ರೀ ಕಾರದ ಶಿವಯೋಗಿಗಳ ತಪಃ ಪ್ರಭಾವದ ಚರಿತ್ರೆಯಂ ಸೂಕ್ಷ್ಮರೂಪದಿಂ ಭಕ್ತರ ಕರ್ಣಾಂದಕೆರೆ ಬೆಳ್ಳಾವೆ ಮೂಲೇಮಠದ ರುದ್ರಾರಾಧ್ಯಶಾಸ್ತ್ರಿಗಳೊಲ್ದು ರಚಿಸಿದರು. ಮೂಲೇಮಠದ ರುದ್ರಶಾಸ್ತ್ರಿಗಳು ಬರೆದ ಗದ್ಯ ಬಹಳ ಸೊಗಸಾಗಿದೆ. ಸೋಮೇಶ್ವರಸ್ವಾಮಿ ಉತ್ಸವಮೂರ್ತಿ ದೇವಾಲಯದ ಹತ್ತಿರ ಮೂಲೆಯಲ್ಲಿ ಮಠ ಇರುವುದರಿಂದ ಈ ಮಠವನ್ನು ಮೂಲೇಮಠ ಎಂದು ಕರೆದಿರಬಹುದು.

ದೇಶಮಠ ಸಂಪೂರ್ಣವಾಗಿ ಶಿಥಿಲವಾಗಿದೆ. ಈ ಮಠಕ್ಕೆ ಸಂಬಂಧಪಟ್ಟ ಒಂದು ಕಾಗದದ ಹಸ್ತಪ್ರತಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇದ್ದು, ಅದು ಪಾಲ್ಕುರಿಕೆ ಸೋಮನಾಥ

ವಿರಚಿತ ಅಕ್ಷರಾಂಕನ ಸ್ತೋತ್ರಕ್ಕೆ ಸೋಸಲೆ ರೇವಣಾರಾಧ್ಯ ಬರೆದ ಟೀಕಿನದ್ದಾಗಿದೆ. ಈ ಕೃತಿಯ ಆರಂಭದಲ್ಲಿ "ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕಾಬ್ದಾಃ 1810ಕ್ಕೆ ಸರಿಯಾದ ಸರ್ವಧಾರಿನಾಮ ಸಂವತ್ಸರದ ಭಾದ್ರಪದ ಬಹುಳ 5 ಸೋಮವಾಸರದಲ್ಲಿ ಬೆಳ್ಳಾವೆ ದೇಶಮಠದ ಮರುಳೈಯ್ಯನವರ ವಹಿಗೆ ಸಟೀಕಾ ಅಕ್ಷರಾಂಕನ ಗದ್ಯ ಬರೆದಿರುತ್ತದೆ. ಯೀ ಪುಸ್ತಕಯವರ ಸ್ವಂತವಾದದ್ದೂ ವಿದುಷಂ ಔತವ್ಯಂ" ಎಂದಿದೆ.

ಗುಬ್ಬಿ ನಗರದಲ್ಲಿ ಹಲವು ಮಠಗಳು ಇದ್ದು ಹತ್ತೊಂಬತ್ತನೆಯ ಶತಮಾನದ ಕಡೇ ಪಾದದ ಸಮಯಕ್ಕೆ ನಿಷ್ಕ್ರಿಯಗೊಂಡವು. ಗುಬ್ಬಿಯಲ್ಲಿ ಇದ್ದ ಮಠಗಳು 1. ಶಂಕರದೇವರ ಮಠ, 2. ಕಲ್ಲುಮಠ ಅಥವಾ ಹಂಪೆ ಲಿಂಗಯ್ಯನ ಮಠ, 3. ದೇಶಮಠ, 4. ಗುಬ್ಬಿಕೋಟೆ ಒಡೆಯರ ಮಠ, 5. ಹೊಸಮಠ, 6. ಚೌಕಿಮಠ, 7. ಕಿಡಿಗಣ್ಣಪ್ಪನವರ ಮಠ, 8. ಶರಣಮ್ಮನ ಮಠ, 9. ತೊರೆಮಠ, 10. ವಿಭೂತಿಪುರ ಮಠದ ಶಾಖಾ ಮಠ, 11. ಕಲ್ಯಾಣಿಮಠ, ಗೋಸಲ ಗುಬ್ಬಿ ಚನ್ನಬಸವೇಶ್ವರಸ್ವಾಮಿ ದೇವಾಲಯದ ಸನಿಹ ಕೆರೆಯ ತೊರೆ ಹರಿಯುವ ದಡದಲ್ಲಿ ಇರುವ ಈ ತೊರೆಮಠ ಪ್ರಾಚೀನವಾದದ್ದು. ಉತ್ತರ ಕರ್ನಾಟಕದ ಅಂಕಲಿಯಿಂದ ಗುಬ್ಬಿಗೆ ಅಡವಿಸ್ವಾಮಿಗಳು ಬಂದಾಗ ಮಠದಲ್ಲಿ ಇದ್ದ ವಿರಕ್ತಮೂರ್ತಿಗಳ ಬಗ್ಗೆ ಮಾಹಿತಿ ಇಲ್ಲ. ಸುಮಾರು ಕ್ರಿ.ಶ. 1840ರ ಸುಮಾರಿಗೆ ಅಡವಿಸ್ವಾಮಿಗಳು ಗುಬ್ಬಿಗೆ ದಯಮಾಡಿಸಿ ಈ ಪರಿಸರದಲ್ಲಿ ಭಕ್ತಾದಿಗಳ ಮೇಲೆ ಅಪಾರವಾದ ಪ್ರಭಾವ ಬೀರಿದರು. ತಮ್ಮ ಶಿಷ್ಯಸಮುದಾಯದ ಸಹಕಾರದಿಂದ "ಪಾಪನಾಶಿನಿ ಮಜ್ಜನಕೊಳ" ಮತ್ತು ಗೋಸಲ ಚನ್ನಬಸವೇಶ್ವರ ಸ್ವಾಮಿಗೆ ಬೆಳ್ಳಿ ಪಲ್ಲಕ್ಕಿಯನ್ನು ಮಾಡಿಸಿದರು. ಏಕಕಾಲದಲ್ಲಿ ಸಿದ್ಧಗಂಗೆ, ಚಿಕ್ಕತೊಟ್ಟಿಲುಕೆರೆ ಮಠಗಳನ್ನು ಕ್ರಿಯಾಚೈತನ್ಯಗೊಳಿಸಿದರು. ನಿ.ಪ್ರ.ಸ್ವ ಶ್ರೀ ಅಡವಿಸ್ವಾಮಿಗಳು 1901 ಕಾರ್ತಿಕ ಶುದ್ಧ ದಶಮಿಯಲ್ಲು ಮಹಾಲಿಂಗದಲ್ಲಿ ಲೀನರಾದರು. ಅವರ ಕ್ರಿಯಾಸಮಾಧಿ ಚಿಕ್ಕತೊಟ್ಟಿಲುಕೆರೆ ಮಠದಲ್ಲಿ ನೆರವೇರಿತು. ಸಿದ್ಧಗಂಗೆ ಮತ್ತು ಗುಬ್ಬಿಯ ಮಠಗಳಲ್ಲಿ ತೋರುಗದ್ದುಗೆಯನ್ನು ಕಟ್ಟಲಾಯಿತು. ವಿಭೂತಿಪುರದ ಸ್ವಾಮಿಗಳು ತಮ್ಮ ಮಠದ ಶಾಖಾಮಠವನ್ನು ಗುಬ್ಬಿಯಲ್ಲಿ ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಪ್ರಾರಂಭವಾಯಿತು. ಸರಕಾರಿ ದಾಖಲೆಯಲ್ಲಿ ಗುಬ್ಬಿಯಲ್ಲಿ "ಚನ್ನವೀರದೇವರ ಮಠ", ಚನ್ನಶೆಟ್ಟಿ ಹಳ್ಳಿಯಲ್ಲಿ "ಗುರುಪಾದ ದೇವರ ಮಠ" ಉಲ್ಲೇಖ ಇದೆ. ಈ ಮಠಗಳು ಎಲ್ಲಿ ಎಂಬ ಇದ್ದವು ವಿವರ ಲಭ್ಯ ಇಲ್ಲ.

ಹಾಗಲವಾಡಿ ಅರಸರು ವೀರಶೈವ ಧರ್ಮಕ್ಕೆ ಕೊಟ್ಟ ಪ್ರೋತ್ಸಾಹದ ಬಗ್ಗೆ ಸಾಕಷ್ಟು ಮಾಹಿತಿ ಇದೆ. ಅಳಿದು ಉಳಿದ ಹತ್ತಾರು ಮಠಗಳ ಅವಶೇಷಗಳನ್ನು ನೋಡಬಹುದಾಗಿದೆ. ಸಂಪಾದನೆ ಸಮಯ ಪ್ರಾರಂಭವಾದದ್ದೇ ಹಾಗಲವಾಡಿಯಲ್ಲಿ ಎಂಬುದು ಕೆಲವರ ಅಭಿಪ್ರಾಯ. 1. ಸಂಪಾದನೆ ಗುರುಪಾದಸ್ವಾಮಿಗಳ ಮಠ, 2.

ಗುರುಪಾದ ಸ್ವಾಮಿಗಳ ಮಠದ ಹತ್ತಿರ ಇರುವ ಗುರುಮಠ, 3. ಬೃಹತ್ ಕಂಬದ ಮಠ (ಗುರುಪಾದ ಸ್ವಾಮಿಗಳ ಮಠದ ಹತ್ತಿರ), 4. ಕಲ್ಲಮ್ಮತಾಯಿ ಗದ್ದುಗೆ ಮಠ, 5. ನಿರಂಜನ ಸ್ವಾಮಿಗಳ ಗದ್ದುಗೆ ಅಥವಾ ಕೂಗೋಮಠ, 6. ಕತ್ತಲು ಮಲ್ಲಪ್ಪನ ಮಠ, 7. ಬಿಸಿಲು ಮಲ್ಲಪ್ಪನ ಗದ್ದಿಗೆ 8. ಕನಗಿಲು ಮಠ, 9. ಕೊಟ್ಟೂರು ಸ್ವಾಮಿಗಳ ಮಠ, 10. ಮಹತ್ತಿನ ಮಠ, 11. ಹಾಗಲವಾಡಿ ಮುದ್ವೀರಸ್ವಾಮಿಗಳ ಮಠ, 12. ಒಪ್ಪತ್ತಯ್ಯನ ಬಂಡೆಮಠ, 13. ಕೋರಿಮಠ ಅಥವಾ ಕೋರಿಶೆಟ್ಟರ ಮಠ, 14. ಚೌಕಿಮಠ ಅಥವಾ ಚೌಕಿ ಬೀಳು, 15. ಕಲ್ಲಮ್ಮತಾಯಿ ಮಠ ಅಥವಾ ಅರಮನೆ ಮಠ, 16. ಕರಲು ಮಠ, 17. ಚನ್ನಪ್ಪನ ಮಠ, 18. ಲಿಂಗಪ್ಪನ ಮಠ.

ಸರಕಾರಿ ದಾಖಲೆಯಲ್ಲಿ 1. ದಳವಾಯಿ ಮಠ, 2. ಅರಸಿನ ಮಠ, 3. ತಂಗುವ ಮಠ, ಮುರುಘಾ ಮಠದ ಉಲ್ಲೇಖಗಳು ಇವೆ. ಹಾಗಲವಾಡಿ ಸಂಪಾದನೆ ಗುರುಪಾದ ಸ್ವಾಮಿಗಳ ಬಗ್ಗೆ 1910 ರಲ್ಲಿ ಚಿಕ್ಕನಾಯಕನಹಳ್ಳಿ ಪಟ್ಟದ ಚನ್ನಬಸವದೇವರು ಪ್ರಕಟಿಸಿದ ಪುಸ್ತಕದಲ್ಲಿ ಈ ರೀತಿ ಬರೆಯಲಾಗಿದೆ:

ಶ್ರೀಮತ್ಪರಮಪಾವನ ಚರಿತ್ರ ಶ್ರೀ ಶ್ರೀ ಪರಬ್ರಹ್ಮಣೇ ನಮಃ ಚಾರುತರ ಸಮ್ಮೋಹನಾಂಗ ಮದನಮರ್ಧನ ಮಾಯಾ ಕೋಲಾಹಲ ನಿತ್ಯನಿರಂಜನ ನಿರಾಕಾರ ಸಚ್ಚಿದಾನಂದ ನಿತ್ಯ ಪರಿಪೂರ್ಣ ಹೃದಯ ಜಗದ್ವಿಸ್ತಾರ ಮೂಲಸ್ತಂಬಾಯಮಾನ ಪರಶಿವಸ್ವರೂಪ ಶ್ರೀಮದಲ್ಲಮಪ್ರಭು ಸ್ವಾಮನ್ವಯ ಸಂಜನಿತರಾದ ಸುಶೀಲ ಸಂಪಾದನ ಸಮಯಾನುವರ್ತಿಗಳಾದ ಶ್ರೀಮರ್ನಿರಂಜನ ಗುರುಪಾದ ದೇಶಿಕೇಂದ್ರ ಸ್ವಾಮಿಗಳ ಗದ್ದಿಗೆ ಮುಂತಾದವುಗಳನ್ನು ಜೀರ್ಣೋದ್ಧಾರ ಮಾಡಿದ ಧರ್ಮಿಷ್ಠರನ್ನು ತೋರಿಸುವ ರಿಜಿಸ್ಟರು....

ಈ ಮೇಲಿನ ಗದ್ಯದಿಂದ ಸಂಪಾದನೆ ಗುರುಪಾದಸ್ವಾಮಿಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಾಗಿದೆ, ಮುಂದಿನ ಸಂಶೋಧನೆಗೆ ಮಾರ್ಗಸೂಚಿಯಾಯಿತು. ಅಖಿಲ ಭಾರತ ನಾಲ್ಕನೆಯ ಶರಣ ಸಾಹಿತ್ಯ ಸಮ್ಮೇಳನ ಚಿಕ್ಕಮಗಳೂರಿನಲ್ಲಿ ನಡೆದಾಗ ಪ್ರಕಟವಾದ "ಶರಣ ಸಂಪದ" 1996 ಸಂಪುಟದಲ್ಲಿ "ಹಾಗಲವಾಡಿ ಸಂಪಾದನೆ ಗುರುಪಾದ ಸ್ವಾಮಿಗಳ ಮಠ" ಎಂಬ ಲೇಖನವಿದೆ. ಹಾಗಲವಾಡಿ ಕೇಂದ್ರಸ್ಥಾನ ಮಾಡಿಕೊಂಡು ಹೊಸಕೆರೆ, ಚೇಳೂರು ಮುಂತಾದ ಗ್ರಾಮಗಳಿನ್ನು ಅಧ್ಯಯನ ಮಾಡಿದರೆ ಇನ್ನಷ್ಟು ಹೊಸ ವಿಷಯಗಳು ಲಭ್ಯವಾಗುತ್ತದೆ.

ಮದ್ದಗಿರಿ ಅಥವಾ ಮಧುಗಿರಿ ಪರಿಸರವನ್ನು ರಾಜ್ಯವಾಳಿದುದು ಬಿಜ್ಜಾವರು ಮದ್ದಗಿರಿ ಏಳುನಾಡ ಪ್ರಭುಗಳು ಇವರು ಸನಾತನ ಧರ್ಮಕ್ಕೆ ವಿಶೇಷವಾಗಿ ವೀರಶೈವ ಧರ್ಮಕ್ಕೆ ಕೊಟ್ಟ ಪ್ರೋತ್ಸಾಹದಿಂದ ಮದ್ದಗಿರಿ ಊರಿನಲ್ಲೆ ನಾವು ಈ ಮಠಗಳನ್ನು ನೋಡಬಹುದು. 1. ಸೋಮೇಕಟ್ಟೆ ಮಠ, 2. ಚೌಕಿಮಠ, 3. ಮಿರ್ಜಿಮಠ ಅಥವಾ

ಗುರುನಂಜಯ್ಯನ ಮಠ, 4. ದಿಣ್ಣೆಚೌಕಿಮಠ ಅಥವಾ ದಿಣ್ಣೆಮಠ, 5. ಮೂಡಲಮಠ, 6. ಗುರುಗಂಜಿ ಮಠ, 7. ಅಜ್ಜಿಮಠ, 8. ಇನ್ನೊಂದು ಅಜ್ಜಿಮಠ, 9. ಗುರುನಂಜಮ್ಮನ ಮಠ, 10. ಗುರಮ್ಮನ ಮಠ, 11. ಕೋಟೆ ಬಾಗಿಲಲ್ಲಿ ಇದ್ದ ಮಠವನ್ನು ಸುಮಾರು ನೂರು ವರ್ಷದ ಮುಂಚೆ ಸರಕಾರಿ ಕಛೇರಿಯಾಗಿದ್ದು ಅದರಲ್ಲಿ ಗುರುಗದ್ದುಗೆ ಲಿಂಗಮುದ್ರೆ ಕಲ್ಲು ಶಿವದ್ವಾರಪಾಲಕರ ಕೆತ್ತನೆ ಹಾಗೆ ಉಳಿದಿದೆ. ಆ ಮಠದ ಹೆಸರು ಊರಿನವರಿಗೆ ಈಗ ಗೊತ್ತಿಲ್ಲ.

ಮದ್ದಗಿರಿಯಲ್ಲಿ ಇರುವ ಬೃಹತ್ ಮಠಗಳಲ್ಲಿ ಗುರಮ್ಮನ ಮಠ ವಿಸ್ತಾರದಲ್ಲಿ ಚಿತ್ರದುರ್ಗ ಬೃಹನ್ಮಠದಷ್ಟು ದೊಡ್ಡದಾಗಿದೆ. ಈ ಮಠದಲ್ಲಿ ಇರುವ ಗದ್ದಿಗೆಯ ಈ ಬಗ್ಗೆ ಸಂಶೋಧನೆಯಾಗಬೇಕು. ಮದ್ದಗಿರಿಯಲ್ಲಿ ವೀರಶೈವ ಧರ್ಮದ ಬೆಳವಣಿಗೆ ಗಣನೀಯವಾಗಿದ್ದು ಆ ಬಗ್ಗೆಯೂ ಅಧ್ಯಯನ ನಡೆಯಬೇಕಾಗಿದೆ. ಮದ್ದಗಿರಿ ಪಕ್ಕ ಸಿದ್ಧಾಪುರದಲ್ಲಿ ಸಂಪಾದನೆ ಬೋಳಬಸವೇಶ್ವರ ಮಠವಿದೆ, ಈ ಮಠದಲ್ಲಿ ಗದ್ದಿಗೆಯಾಗಿರುವವನು ಸಂಪಾದನೆ ಬೋಳಬಸವ ಎಂದು ಹಲವು ಆಕರಗಳಿಂದ ಸಿದ್ಧಪಡಿಸಿ ಸತ್ಯಶುದ್ಧ ಕಾಯಕ ಸಂಪುಟ 8 ಸಂಚಿಕೆಯ (1–4) "ಹಲವು ಬೋಳಬಸವರು : ಕೆಲವು ಸಂಗತಿಗಳು" ಎಂಬ ಲೇಖನದಲ್ಲಿ ಸಿದ್ಧ ಮಾಡಿದ್ದೇನೆ. ಈ ಗ್ರಾಮದ ಹೊರಭಾಗದಲ್ಲಿ ಒಂದು ಸಣ್ಣ ಗುಡ್ಡದ ಮೇಲೆ "ಪುಟ್ಟೇಶ್ವರರ ಮಠ" ಇದೆ. ಜನ ಬಹಳ ಭಯಭಕ್ತಿಯಿಂದ ಈ ಮಠಕ್ಕೆ ನಡೆದುಕೊಳ್ಳುತ್ತಾರೆ. ಇವರು ಸಂಪಾದನೆ ಬೋಳಬಸವೇಶ್ವರರ ಸಮಕಾಲೀನರು. ಇವರ ಗದ್ದುಗೆ ಕೊರಟಗೆರೆ ತಾಲೂಕು ಹೊಳವನಹಳ್ಳಿ ಸೋಮಪುರದಲ್ಲಿ ಇದೆ. ಇಲ್ಲಿ ಸಹ ಬೋಳಬಸವೇಶ್ವರರ ಮತ್ತು ಪುಟ್ಟೇಶ್ವರರ ಮಠಗಳು ಒಂದರ ಹತ್ತಿರ ಒಂದು ಇತ್ತು. ಬೋಳಬಸವೇಶ್ವರ ಮಠ ಶಿಥಿಲವಾಗಿ ಹೋಯಿತು. ಇಷ್ಟಲಿಂಗಾನುಷ್ಠಾನ ಮಾಡುತ್ತಾ ಇರುವ ಬೋಳಬಸವೇಶ್ವರ ಪುಟ್ಟ ಉತ್ಸವಮೂರ್ತಿಯನ್ನು ನಾನು ಈ ಮಠದಲ್ಲಿ ನೋಡಿದ್ದೆ. ಎಸ್. ಶಿವಣ್ಣನವರು 'ರಂಭಾಪುರಿ ಬೆಳಗು' ಸಂಪುಟ 3, ಸಂಚಿಕೆ 6ರಲ್ಲಿ "ಚತುರಾಚಾರ್ಯರ ಮಂಗಳ" ಎಂಬ ಒಂದು ಸ್ವರವಚನವನ್ನು ಪ್ರಕಟಿಸಿದ್ದರು. ಅದರಲ್ಲಿ ಪುಟ್ಟೇಶ್ವರರ ಮತ್ತು ಬೋಳೇಶ್ವರ ಉಲ್ಲೇಖ ಬರುತ್ತದೆ. ಇಲ್ಲಿ ಬೋಳೇಶ ಅಂದರೆ ಸಂಪಾದನೆ ಬೋಳೇಶ್ವರರೇ ಇರಬೇಕು.

ಧರೆಯಾಳು ಮದ್ಗಿರಿ ಪುರವಾಸಗೆ
ತರಳ ಚಂದ್ರನ ಸೂಡಿದಭವನಿಗೆ
ಹರುಷದಿಂ ಭಕ್ತರಿಗೊರವಿತ್ತ ದೇವಗೆ
ಉರಗಭೂಷಣ ಮಲ್ಲಿಕಾರ್ಜುನಗೆ ॥ 6 ॥

ಎಲ್ಲ ದೇವರದೇವರ ಅಲ್ಲಮಪ್ರಭುವಿಗೆ
ಬಲ್ಲಿದ ಬಸವಾದಿ ಪ್ರಮಥರಿಗೆ

ಗೊಲ್ಲಾಳ ಮಡಿವಳ ಚನ್ನಬಸವೇಶಗೆ
ಬಿಲ್ಲೇಶ ಬೋಳೇಶ ಪುಟ್ಟೇಶಗೆ
ಮಂಗಳಂ ಮದ್ಗುರುರಾಯಗೆ ॥ 7 ॥

ಈ ಮಠಕ್ಕೆ ಸಂಬಂಧಪಟ್ಟ ಒಂದು ಪುಷ್ಪಿಕೆ ಎಸ್. ಶಿವಣ್ಣನವರು ಬಸವ ಪಥ (ಸಂಪುಟ 24, ಸಂಚಿಕೆ 6) ಸೆಪ್ಟೆಂಬರ್ 2002 ರಲ್ಲಿ ಬರೆದ "ತೋಂಟದ ಸಿದ್ಧಲಿಂಗ ಸ್ವಾಮಿಗಳ ಷಟ್‌ಸ್ಥಲ ಜ್ಞಾನಸಾರಾಮೃತದ ಪುಷ್ಪಿಕೆಗಳು" ಎಂಬ ಲೇಖನದಲ್ಲಿ ಪ್ರಕಟವಾಗಿದೆ. ಆ ಪುಷ್ಪಿಕೆಯನ್ನು ಯಥಾವತ್ತಾಗಿ ನೀಡಲಾಗಿದೆ: "ಶ್ರೀ ಶಾರ್ವರಿ ಸಂವತ್ಸರದ ಫಾಲ್ಗುಣ ಶು. 2 ಲೂ ಚೆರಕೂರ ಶಾನಬಾಗ ನಾರಶಿದೇವರವರ ಕೊಮಾರ ಕುದುರಿಪತ್ಯೆಯನು ಹೊಳವನಹಳ್ಳಿ ಪುಟ್ಟೀಶ್ವರಯ್ಯನವರ ಮಠದ ಚಂನಬಸವಂಣದೇವರವರಿಗೆ ಬರೆದು ಕೊಟ್ಟ ಜ್ಞಾನಸಾರಾಮೃತ ಪುಸ್ತಕಕ್ಕೆ ಆಚಂದ್ರಾರ್ಕನಿತ್ಯೈಶ್ವರ್ಯಮಸ್ತು" ಎಂದಿದೆ.

ಮಿಡಿಗೇಶಿ ಗ್ರಾಮದಲ್ಲಿ ಕೆಲವು ಪ್ರಾಚೀನ ಮಠಗಳ ಶಿಥಿಲವಾದ ಕಟ್ಟಡಗಳಿವೆ, ಮಿಡಿಗೇಶಿ ಸಮೀಪ "ತೋಂಟದ ಮಡಗು" ವಿರಕ್ತ ತೋಂಟದಾರ್ಯರ ತಪೋಭೂಮಿ. ಪಕ್ಕದ ಬೇಡತ್ತೂರು ಗ್ರಾಮದಲ್ಲಿ ವಿರಕ್ತ ತೋಂಟದಾರ್ಯರ ಸಮಾಧಿ ಇದೆ.

ಕುಣಿಗಲ್ ತಾಲ್ಲೂಕು ಎಡೆಯೂರಿನಲ್ಲಿ ದೇವಾಲಯದ ಪಕ್ಕದಲ್ಲೇ ಶ್ರೀಮದ್ರಂಭಾಪುರಿ ಮಹಾಸಂಸ್ಥಾನದ ಖಾಸಾ ಶಾಖಾ ಮಠವಿದೆ. ಸದ್ಯ ಈ ಮಠದಲ್ಲಿ ಷ.ಬ್ರ. ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಆಗಿದ್ದಾರೆ. ಎಡೆಯೂರು ಕ್ಷೇತ್ರದಲ್ಲಿ "ಗವಿಮಠ", "ಚಿತ್ರಮಠ" ಎಂಬ ಹೆಸರಿನ ಎರಡು ಮಠಗಳು ಇದ್ದು ಅವು ಮಾರ್ಕೋನಹಳ್ಳಿ ಡ್ಯಾಂನ ಹಿನ್ನೀರಿನಲ್ಲಿ ಮುಳುಗಿವೆ. ಗವಿಮಠದಲ್ಲಿ ಅಪಾರವಾದ ಓಲೆಗರಿ ಕಟ್ಟುಗಳ ಸಂಗ್ರಹ ಇತ್ತಂತೆ. ಚಿತ್ರಮಠದಲ್ಲಿ ಅನೇಕ ಭಿತ್ತಿಚಿತ್ರಗಳನ್ನು ಗೋಡೆಯ ಮೇಲೆ ಬಿಡಿಸಿದ್ದಿರಬೇಕು. ಈ ಮಠಗಳನ್ನು ಸುಮಾರು ಎಂಭತ್ತು ವರ್ಷದ ಹಿಂದೆ ನಾವು ಕಳೆದುಕೊಂಡುಬಿಟ್ಟೆವು. ಎಡೆಯೂರಿನ ಗ್ರಾಮಠಾಣ ದಾಖಲೆಯಲ್ಲಿ "ಚಿತ್ರಭಾನು ಸಂವತ್ಸರ ಕಾರ್ತಿಕ ಶು. 12 ಎಂದಿದೆ. ಒಂದು ಮಠ ಚರವಾಗಿ ಕಗ್ಗೆರೆಯಲ್ಲಿ ನೆಲೆಸಿದೆ. ಆ ಮಠದಲ್ಲಿದ್ದ ಒಬ್ಬರು ವಿರಕ್ತಮೂರ್ತಿಗಳು ಇತ್ತೀಚೆಗೆ ಲಿಂಗೈಕ್ಯರಾದರು. ಕುಣಿಗಲ್ ನಗರದಲ್ಲಿ ಹಿರೇಮಠವಿದ್ದು ಆ ಮಠದಲ್ಲಿ ಈಗ ಷಟ್‌ಸ್ಥಲಬ್ರಹ್ಮಿಗಳು ಇದ್ದರು. ಅವರು ಇತ್ತೀಚೆಗೆ ಲಿಂಗೈಕ್ಯರಾಗಿದ್ದಾರೆ. ಬಹಳ ಪ್ರಾಚೀನವಾದ ಇತಿಹಾಸ ಇರುವ ಈ ಮಠದಲ್ಲಿ ಹತ್ತೊಂಬತ್ತನೆಯ ಶತಮಾನದ ಆರಂಭಕಾಲದಲ್ಲಿ ಸಂಸ್ಕೃತ–ಕನ್ನಡ ಸಾಹಿತ್ಯದ ಹಸ್ತಪ್ರತಿ ಭಂಡಾರವೇ ಇತ್ತು. ಈ ವಿಷಯವನ್ನು ಆರ್. ನರಸಿಂಹಾಚಾರ್ಯರು, ಗ್ಯಾಜಿಟಿಯರ್ ರಚನೆಯ ಹಯವದನರಾಯರು ಹೇಳಿದ್ದಾರೆ. ಈ ಮಠದ ಶಿಷ್ಯಪರಂಪರೆಯ ಶಾಂತವೀರ ವಿರಚಿತ "ವೀರಭದ್ರ ಲೀಲಾರತ್ನ" ಕೃತಿ ಮೈಸೂರು ವಿಶ್ವವಿದ್ಯಾನಿಲಯದಿಂದ ಕೆ.ಆರ್.

ಶೇಷಗಿರಿ ಅವರಿಂದ ಸಮರ್ಥವಾಗಿ ಸಂಪಾದನೆಗೊಂಡು ಪ್ರಕಟಗೊಂಡಿದೆ. ಕುಣಿಗಲ್ ತಾಲ್ಲೂಕಿನ ಅಂಕನಹಳ್ಳಿ ಮಠವು ಬಾಳೆಹೊನ್ನೂರು ಶಾಖಾ ಮಠವಾಗಿದೆ.

ತುರುವೇಕೆರೆ ತಾಲ್ಲೂಕು ನೊಣವಿನಕೆರೆಯಲ್ಲಿ ಇರುವ ಸೋಮೇಕಟ್ಟೆ ಪರಂಪರೆಯ ಗವಿಮಠದ ಇತಿಹಾಸ ಬಹಳ ದೊಡ್ಡದು. ಈ ಭಾಗದ ಅನುಭವ ಸಾಹಿತ್ಯ ಅಥವಾ ಸ್ವರವಚನ ಸಾಹಿತ್ಯದ ಬೆಳವಣಿಗೆಯಲ್ಲಿ ಈ ಮಠದ ಕೊಡುಗೆ ಅಪಾರ. ಬಹಳ ದೊಡ್ಡ ಶಿಷ್ಯಸಂಪತ್ತನ್ನು ಈ ಮಠ ಪಡೆದಿದೆ. ಹಿರಿಯ ಶ್ರೀಗಳು ಸಮನ್ವಯ ಅಧಿಕಾರಿಗಳಾಗಿ ಗುರು–ವಿರಕ್ತ ಮಠ ಎರಡೂ ಪರಂಪರೆಯ ಸೌಹಾರ್ದ ಬೆಳವಣಿಗೆಗೆ ಸಾಕಷ್ಟು ಸಹಕಾರಿಗಳಾಗಿದ್ದಾರೆ. ನನಗೆ ನೋಡಲು ಲಭ್ಯವಾದ ಚಿದೈಶ್ವರ್ಯ ಚಿದಾಭರಣದ ಕೃತಿಯ ಕಡೆಯಲ್ಲಿ... "ಈ ಸ್ವಾಮಿಗಳು ತಿಪಟೂರು ಸಿಡ್ಲಗಟ್ಟದ ನಂಜುಂಡಪ್ಪನೆಂಬುವನ ಹಸ್ತಕ್ಕೆ ಕೊಡಲು ನಾನು ತ್ರಿಕರಣಪೂರ್ವಕವಾಗಿ ಅಭಿನಂದಿಸಿ ಈ ಗ್ರಂಥವನ್ನು ತೆಗೆದುಕೊಂಡು ನಮ್ಮ ಸದ್ಗುರುವರೇಣ್ಯರಾದ ನೊಣವಿನಕೆರೆ ಶ್ರೀಮದ್ ಸೋಮೇಕಟ್ಟೆ ಮಠದ ಶಿವಾನುಭವ ಚರ್ಯವರ್ಯ ಶ್ರೀಮದ್ ಕರಿವೃಷಭದೇಶಿಕೇಂದ್ರ ಸ್ವಾಮಿಗಳ ಪ್ರತಿಬಿಂಬ ಸ್ವರೂಪಿಗಳಾಗಿಯೂ ಪೂರ್ಣಶಿವಾನುಭವಿಗಳಾಗಿರುವ ಶ್ರೀಮದ್ ರುದ್ರದೇವ ದೇಶಿಕೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಶ್ರೀಸ್ವಾಮಿಗಳ ಕೃಪಾಕಟಾಕ್ಷಬಲದಿಂದ ಅಸಲಿನಂತೆ..." ಎಂದಿದೆ.

ಸಿಡ್ಲೇಹಳ್ಳಿ ಸ್ವಾಮಿಗಳು ತಮ್ಮ ಮಠದ ಕಾರ್ಯಸ್ಥಾನವನ್ನು ತಿಪಟೂರಿಗೆ ಸ್ಥಳಾಂತರಿಸಿ ವೀರಶೈವ ಗುರುಕುಲಾನಂದಾಶ್ರಮವನ್ನು ಸ್ಥಾಪಿಸಿ, ಬಡಬಗ್ಗರಿಗೆ ವಿದ್ಯಾಭ್ಯಾಸಕ್ಕೆ ಬಹು ದೊಡ್ಡ ಅವಕಾಶವನ್ನು ಮಾಡಿಕೊಟ್ಟರು. ತುಮಕೂರಿನ ವೀರಶೈವ ಗುರುಕುಲ ವಿದ್ಯಾರ್ಥಿನಿಲಯವು ಸಿಡ್ಲೇಹಳ್ಳಿ ಸ್ವಾಮಿಗಳ ಆಶೀರ್ವಾದದಿಂದ ಸ್ಥಾಪಿತವಾದದ್ದು. ಗುಬ್ಬಿ ತಾಲ್ಲೂಕು ಬೆಟ್ಟಹಳ್ಳಿ ಮಠವು ಭಕ್ತರ ಬಗ್ಗೆ ಸಾಕಷ್ಟು ಕಾಳಜಿ ವಹಿಸಿ ದುಡಿಯುತ್ತಿದೆ. ನಿ.ಪ್ರ.ಸ್ವ ಶ್ರೀ ಚಂದ್ರಶೇಖರ ಸ್ವಾಮಿಗಳು ನಿರಂಜನಪೀಠದಲ್ಲಿ ವಿರಾಜಮಾನರಾಗಿದ್ದಾರೆ.

ಬಳ್ಳೇಕಟ್ಟೆ ಮಠ ತಿಪಟೂರಿನ ಪರಿಸರದಲ್ಲಿ ಬಹಳ ಪ್ರಸಿದ್ಧವಾದದ್ದು. ಚಿಕ್ಕನಾಯಕನಹಳ್ಳಿ ಪರಿಸರದ ಕುಪ್ಪೂರು ಮಠ ವಿರಕ್ತಮಠವಾಗಿದ್ದು, ಪರಿಸರದ ಭಕ್ತಾದಿಗಳಿಗೆ ಸಾಕಷ್ಟು ಸೇವೆ ಸಲ್ಲಿಸುತ್ತಾ ಇದೆ.

ಕುಪ್ಪೂರು "ಮರುಳಸಿದ್ಧೇಶ್ವರ ಸ್ವಾಮಿಗಳ ಮಠ" ಚಿಕ್ಕನಾಯಕನಹಳ್ಳಿ ಪರಿಸರದ ಪ್ರಸಿದ್ಧ ಮಠ; ದಾಸೋಹ–ವಿದ್ಯಾದಾನ–ಅರಿವು–ಆಚರಣೆಗೆ ಈ ಮಠ ಪ್ರಸಿದ್ಧವಾದದ್ದು. ಮರುಳಸಿದ್ಧೇಶ್ವರರು ಸಕಲಜ್ಞ ವಿದ್ಯಾಪಾರಂಗತವಾದ ಮರುಳಸಿದ್ಧನು ಭಕ್ತಾದಿಗಳ ಮನಸೆಳೆದ. ಶಿವನಿಚ್ಛೆ ಮಗುವಿನ ಹಂಬಲ ಎರಡೂ ಕೂಡಿ ಮಹಾವಿಭೂತಿಯನ್ನು ಪಡೆದವು. ನಿಡುವಳ್ಳಿ ಶ್ರೀಮಠಕ್ಕೆ ಸಕಲ ಜಂಗಮ ಜ್ಯೋತಿಗಳು, ಚರಮೂರ್ತಿಗಳು ದಯಮಾಡಿಸಿ ಅತ್ಯಂತ ವೈಭವದಿಂದ ಪಟ್ಟಾಧಿಕಾರದ ಮಹಾಕಾರ್ಯವನ್ನು ನೆರವೇರಿಸಿದರು. ನಂತರ ಚರಜಂಗಮನಾಗಿ ಕಂಚಿ, ಕಾಳಹಸ್ತಿ, ಕಾಶಿ, ಕೇದಾರ,

ಗೋಕರ್ಣ, ಕಲ್ಯಾಣ, ಉಳವಿ ಮೊದಲಾದ ಕಡೆ ಸಂಚಾರ ಮಾಡಿ, ಶ್ರೀಶೈಲದಲ್ಲಿ ಸಾಕಷ್ಟು ಕಾಲ ಜಪ, ತಪ, ಅನುಷ್ಠಾನ ಮಾಡುತ್ತಾ ಕ್ಷೇತ್ರನಾಥನಾದ ಮಲ್ಲಿಕಾರ್ಜುನ ಭ್ರಮರಾಂಬೆಯರ ಕೃಪೆಗೆ ಪಾತ್ರರಾದರು. ಹೀಗೆ ಸರ್ವಸಂಗ ಪರಿತ್ಯಾಗಿಯಾಗಿ ತಪಶ್ಶಕ್ತಿಯನ್ನು ಗಳಿಸಿ ಸ್ವಗ್ರಾಮದ ಕಡೆ ದಯಮಾಡಿಸಿದರು. ಕಲ್ಪತರು ಪರಿಸರದ ಹಿರೇಕಲ್, ಶಿರಿವಾಳ, ದಬ್ಬೇಘಟ್ಟ, ಚಿಕ್ಕನಾಯಕನಹಳ್ಳಿ, ಮದನಮಡು, ಮುದ್ದೇನಹಳ್ಳಿ, ತಿಮ್ಮಲಾಪುರ, ಹುಳಿಯಾರು, ಪಟಸಂದ್ರ, ಕೆಂಕೆರೆ ಗ್ರಾಮಗಳಲ್ಲಿ ಅನೇಕ ಪವಾಡಗಳನ್ನು ಮಾಡುತ್ತಾ ಮಲ್ಲಿಕಾರ್ಜುನ ಬೆಟ್ಟದಲ್ಲಿ ಕೆಲ ಕಾಲ ತಪಸ್ಸು ಮಾಡಿ ಸಾಸಲು ಗ್ರಾಮದಲ್ಲಿ ಅನುಷ್ಠಾನ ಮಾಡಿ, ಕುಪ್ಪೂರು ಕೆರೆಯ ಹಿಂಬದಿಯಲ್ಲೇ ಯೋಗಸಮಾಧಿಯಲ್ಲಿ ಲೀನರಾದರು. ಭಕ್ತವೃಂದ ಗುರುವಿನಪ್ಪಣೆಯಂತೆ ಪರ್ಣಕುಟಿಯ ಪಕ್ಕದಲ್ಲೇ ದೊಡ್ಡ ಪ್ರಮಾಣದ ಸಹಸ್ರಸೋಪಾನವುಳ್ಳ ನೆಲಮಾಳಿಗೆಯನ್ನು ನಿರ್ಮಿಸಲು ಶ್ರೀಗುರುವು ಅಲ್ಲಿಗೆ ದಯಮಾಡಿಸಿ ಯೋಗಮುದ್ರಾನಿದ್ರಿತರಾದರು. ಅವರ ಸಮಾಧಿಯ ಮೇಲೆ ಹೈದರ್ ಖಾನನು ಕಲ್ಲಿನ ಮಂಟಪವನ್ನು ನಿರ್ಮಿಸಿದ. ಮರುಳಸಿದ್ಧೇಶ್ವರರ ಕಾಲ ಸುಮಾರು ಕ್ರಿ.ಶ. 1780. ಅವರ ಪ್ರಭಾವ ಎರಡು ಶತಮಾನ ಕಳೆದರೂ ಜ್ಯೋತಿಯಂತೆ ಬೆಳಗುತ್ತಿದೆ. ಇಂತಹ ಭವ್ಯ ಪರಂಪರೆಯ ಮಠದ ಪೀಠಾಧಿಪತಿಗಳಾಗಿ ಬಂದವರು ಪರಮಪೂಜ್ಯ ಷ.ಬ್ರ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು. ಅವರ ಹತ್ತಿರ ಸಂಭಾಷಣೆ ಮಾಡಿದರೆ ಮೂರು ಶತಮಾನದ ಇತಿಹಾಸವೇ ಹೊರಬರುತ್ತಿತ್ತು. ಅಂದಿನ ದಿನಮಾನದ ಪ್ರಖ್ಯಾತ ಜ್ಯೋತಿಷ್ಯ ವಿದ್ವಾಂಸರಾದ ಮದನಮಡು ಶಾಮಣ್ಣನವರು, ಹಾಲ್ಕುರಿಕೆ ಗುಂಡಪ್ಪನವರು ಮುಂತಾದವರ ಒಡನಾಟವಿತ್ತು. ಜೊತೆಗೆ ಬಹು ದೊಡ್ಡ ಸೇವೆಯನ್ನು ಸಲ್ಲಿಸಿದರು. ಅಲ್ಲದೆ ಲಿಂ. ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ 1008 ಜಗದ್ಗುರು ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳ ಸಂಪೂರ್ಣ ಕೃಪಾಶೀರ್ವಾದಕ್ಕೆ ಪಾತ್ರರಾಗಿದ್ದರು. ಅವರ ಕರಕಮಲಸಂಜಾತರಾದ ಷ.ಬ್ರ. ಶ್ರೀ ಯತೀಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಕಳೆದ ಹಲವು ವರ್ಷದಿಂದ ಕುಪ್ಪೂರು ಗದ್ದಿಗೆ ಮರುಳಸಿದ್ಧೇಶ್ವರಸ್ವಾಮಿ ಸೇವೆಯನ್ನು ಸಲ್ಲಿಸುತ್ತಿದ್ದರು. ಅವರು ಇತ್ತೀಚೆಗೆ ಮಹಾಲಿಂಗದಲ್ಲಿ ಲೀನರಾದರು.

ತುಮಕೂರು ಜಿಲ್ಲೆಯ ಮಠಮಾನ್ಯಗಳ ಅಧ್ಯಯನವನ್ನು ತ್ವರಿತವಾಗಿ ಮಾಡಬೇಕಾದ ಅಗತ್ಯವಿದೆ. ಇತಿಹಾಸ ಪ್ರಸಿದ್ಧ ಮಠಗಳ ಜೊತೆಗೆ ಕಾಲಗರ್ಭದಲ್ಲಿ ಅಳಿದು ಹೋಗುತ್ತಿರುವ, ಅಳಿದು ಹೋಗಿದ್ದರೂ ಪರಂಪರೆಯ ಜನರಿಂದ ಪೋಷಿಸಲ್ಪಡುತ್ತಿರುವ ಎಲ್ಲಾ ಮಠಗಳ ಇತಿಹಾಸವನ್ನು ಬರೆಯಬೇಕಾದ ಪರ್ವಕಾಲ ಇದು. ಕುರುಹು ಇಲ್ಲದೆ ನಾಶವಾಗುತ್ತಿರುವ ಭವ್ಯಪರಂಪರೆಯ ಮಠಗಳನ್ನು ಮೊದಲು ಉಳಿಸಬೇಕಾದ ಜವಾಬ್ದಾರಿ ಸಮುದಾಯಕ್ಕೆ ಸೇರಿದೆ.

ಈ ಮಠ ಪರಂಪರೆಯ ಜಂಗಮ ಮೂರ್ತಿಗಳು ಗ್ರಾಮಾಂತರ ಪ್ರದೇಶದಲ್ಲಿ ಮಾಡಿದ ಸೇವೆ ಸ್ಮರಣೀಯವಾದದ್ದು. ಅಲ್ಪ ದಕ್ಷಿಣೆಗೆ ತಮ್ಮ ಕಲಿತ ವಿದ್ಯೆಯನ್ನು

ಮತ್ತೊಬ್ಬರಿಗೆ ಕಲಿಸುತ್ತಾ ಪರಂಪರೆಯನ್ನು ರಕ್ಷಿಸಿಕೊಂಡು ಬಂದ ಆ ಹಿರಿಯ ಚೇತನಗಳ ಸೇವೆ ಸದಾ ಸ್ಮರಣೀಯವಾದದ್ದು. ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಅವರ ಸೇವೆ ದೊಡ್ಡದು. ಗುಬ್ಬಿ ವೀರೇಶ್ವರಶಾಸ್ತ್ರಿಗಳು ಅಥವಾ ಹುಚ್ಚವೀರಶಾಸ್ತ್ರಿಗಳು, ಗುಬ್ಬಿ. ತುಮಕೂರು ದಶಮುಖಿ ಘಂಟೆದೇವರ ಮಠದ ಗುಬ್ಬಿ ರಾಚೋಟಿದೇವರು, ಶಿವರುದ್ರಶಾಸ್ತ್ರಿಗಳು, ಬೆಳ್ಳಾವೆ ರುದ್ರಮಠದ ಮಲ್ಲಿಕಾರ್ಜುನ ಶಾಸ್ತ್ರಿಗಳು, ಬೆಳ್ಳಾವೆ ಮೂಲೇಮಠದ ರುದ್ರಶಾಸ್ತ್ರಿಗಳು, ಸಕ್ಕರೆಗೊಲ್ಲಹಳ್ಳಿ ಮಠದ ಮಹಾರುದ್ರಶಾಸ್ತ್ರಿಗಳು, ತುಮಕೂರು ಮುರಿಗಾಮಠದ ಮಲ್ಲಿನಾಥ ಶಾಸ್ತ್ರಿಗಳು, ಬಿದರೆ ರುದ್ರಮಠದ ಷ॥ಬ್ರ॥ ರಾಚೋಟಿ ಶಿವಾಚಾರ್ಯ ಸ್ವಾಮಿಗಳು, ದೊಡ್ಡಗುಣಿ ಪಟ್ಟದ ದೇವರು, ಗುಬ್ಬಿಹೊಸಹಳ್ಳಿ ಹಿರೇಮಠದ ಪಟ್ಟದ ದೇವರು, ಹೀಗೆ ಬಹು ದೊಡ್ಡ ಪರಂಪರೆಯನ್ನು ರಕ್ಷಿಸಿ ಪೋಷಿಸಲು ಸಾಕಷ್ಟು ಶ್ರಮವಹಿಸಿದ ಅನೇಕ ಹಿರಿಯರನ್ನು ನಾವಿಲ್ಲಿ ನೋಡಬಹುದು. ಅನೇಕ ಪಟ್ಟದ ದೇವರುಗಳು ವಿರಕ್ತಮೂರ್ತಿಗಳು ಹವ್ಯಕವ್ಯಗಳನ್ನು, ಪೌರೋಹಿತ್ಯವನ್ನು ಸಹ ಮಾಡಿ ಮಠವನ್ನು ಪೋಷಣೆ ಮಾಡಿದ್ದು ಉಂಟು.

'ಪಾದೋದಕ', 'ಪ್ರಸಾದ', 'ಅಷ್ಟಾವರಣ' 'ಪಂಚಾಚಾರ', 'ಜಪ', 'ತಪ', 'ಬ್ರಹ್ಮಚರ್ಯ', 'ಧ್ಯಾನ', 'ಅನುಷ್ಠಾನ' ಈ ಎಲ್ಲಾ ಕ್ರಿಯೆಗಳ ಸಹಿತ ವೀರಶೈವ ಧರ್ಮದ ಉದಾತ್ತ ತತ್ತ್ವವನ್ನು ಪ್ರಪಂಚಕ್ಕೆ ಹರಡಬೇಕಾದ ಸಂದರ್ಭ ಇದು. ಈ ಕೇವಲ ಲೇಖನ ಒಂದು ಪಕ್ಷಿನೋಟ ಮಾತ್ರ. ಆಂಧ್ರ, ಮಹಾರಾಷ್ಟ್ರ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಅಲ್ಲಲ್ಲಿ ವೀರಶೈವ ಮಠಗಳು ತಮ್ಮ ಅಸ್ತಿತ್ವಕ್ಕೇ ಇನ್ನೂ ಕಷ್ಟಪಡುತ್ತಿವೆ. ಹತ್ತಾರು ಜನ ಕಿರಿಯ ವಿದ್ವಾಂಸರು ತುಮಕೂರು ಜಿಲ್ಲೆ ವೀರಶೈವ ಮಠಗಳ ಮೇಲೆ ಸಂಶೋಧನೆ ಮಾಡಬಹುದು.

❑

ಆವ ಜಾತಿಯಾದಡೂ ಆಗಲಿ;
ಪುರಾತನ ಚಾರಿತ್ರದಲ್ಲಿ ನಡೆದು,
ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನಮಂ ಕೊಟ್ಟು,
ಅಹಂಕಾರವಳಿದಿಹಂತಹ ಮಹಾತ್ಮರ
ಬಾಯ ತಂಬುಲವ ಮೆಲುವೆ, ಬೀಳುಡಿಗೆಯ ಹೊದಿವೆ.
ಅವರ ಪಾದರಕ್ಷೆಗಳೆರಡನೂ,
ಮಂಡೆಯ ಮೇಲೆ ಹೊತ್ತುಕೊಂಡು ಬದುಕುವೆನಯ್ಯಾ.
ಆ ಗಣಂಗಳ ದಾಸನ ದಾಸ ನಾನು,
ಜನ್ಮ ಜನ್ಮದಲ್ಲಿ ಆಗುವೆ ಕಾಣಾ ಗುಹೇಶ್ವರಾ
– **ಅಲ್ಲಮಪ್ರಭುದೇವರು**

**ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ**

# ಚಿಕ್ಕಮಧುರೆಯ ಮಲ್ಲೇಶ್ವರ ದೇವಾಲಯ

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲೂಕಿನಿಂದ 12 ಕಿ.ಮೀ. ದೂರದಲ್ಲಿರುವ ಗ್ರಾಮವಾಗಿದೆ. ಜಿಲ್ಲಾ ಕೇಂದ್ರದಿಂದ 40 ಕಿ.ಮೀ ದೂರದಲ್ಲಿದೆ. ಸೋಮಗುದ್ದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ. ಗ್ರಾಮವು ಶಿಲಾಯುಗದ ಮಾನವನ ವಾಸದ ಸ್ಥಳವಾಗಿತ್ತು. ಈ ಗ್ರಾಮವು ವೇದಾವತಿ ನದಿಯ ದಂಡೆಯ ಮೇಲಿದೆ.

ಈ ಗ್ರಾಮದ ಪಕ್ಕದಲ್ಲಿ ಹಳ್ಳ ಹರಿಯುತ್ತಿದ್ದು ಈ ಹಳ್ಳದ ಎಡ ಮತ್ತು ಬಲದಂಡೆಗಳು ನವಶಿಲಾಯುಗ ಸಂಸ್ಕೃತಿ, ಬೃಹತ್‌ಶಿಲಾಯುಗ ಸಂಸ್ಕೃತಿಗಳ ಆವಾಸಸ್ಥಾನಗಳಾಗಿವೆ. ಕಲ್ಲಿನ ಆಯುಧಗಳು, ಮಡಿಕೆಯ ಚೂರುಗಳು, ಸಮಾಧಿಗಳು, ಮೂಳೆಗಳು ಶೋಧವಾಗಿವೆ. ಕಬ್ಬಿಣ ಕರಗಿಸಿದ ನಂತರ ಉಳಿಯುವ ಕಿಟ್ಟ ದೊರಕಿದ ಈ ನೆಲೆಯಲ್ಲಿ ಸುಮಾರು 3000 ವರ್ಷಗಳ ಹಿಂದಿನ ಬೃಹತ್‌ಶಿಲಾಯುಗ ಸಂಸ್ಕೃತಿಯ ಮಾನವನು ಅವನ ದೈನಂದಿನ ಜೀವನಕ್ಕೆ ಬೇಕಾದ ಕಬ್ಬಿಣದ ಸಲಕರಣೆಗಳನ್ನು ತಯಾರಿಸಿಕೊಂಡು ಬದುಕುತ್ತಿದ್ದ ಎಂದು ಕ್ಷೇತ್ರ ಅಧ್ಯಯನದಿಂದ ಗುರುತಿಸಲಾಗಿದೆ.

ಗ್ರಾಮದಲ್ಲಿ 8 ವೀರಗಲ್ಲುಗಳು ಇದ್ದು, ಅದರಲ್ಲಿ 5 ಶಾಸನ ಸಹಿತ ವೀರಗಲ್ಲುಗಳು ಇವೆ. ಮಲ್ಲೇಶ್ವರ ದೇವಾಲಯ, ಆಂಜನೇಯ ದೇವಾಲಯ, ದುರ್ಗಾಂಬ ದೇವಾಲಯ, ಮೈಲಾರಲಿಂಗೇಶ್ವರ, ಮಾರಮ್ಮ ಮುಂತಾದ ದೇವಾಲಯಗಳಿವೆ. ಗಣೇಶ, ಪಾರ್ವತಿ, ತೆಳುವಾಗಿ ಉಬ್ಬಿರುವ ಸಪ್ತಮಾತೃಕೆ ಶಿಲ್ಪ, ಸೂರ್ಯ ಶಿಲ್ಪ, ಅಲ್ಲಲ್ಲಿ ಬಿದ್ದಿರುವ ಕಂಬಗಳು, ತೋರಣ ಪಟ್ಟಿಗಳು ಹಾಗೂ ಇತರ ಚಿಕ್ಕ ಚಿಕ್ಕ ಬಿಡಿಶಿಲ್ಪಗಳು ಇಲ್ಲಿವೆ. ಈ ಗ್ರಾಮವು ಗಂಗರ, ರಾಷ್ಟ್ರಕೂಟರ, ಹೊಯ್ಸಳರ, ನೊಳಂಬರ ಹಾಗೂ ಪಾಳೆಯಗಾರರ ಕಾಲದಲ್ಲಿ ಪ್ರಮುಖ ಸ್ಥಳವಾಗಿತ್ತು.

ಗ್ರಾಮದಲ್ಲಿ ನೊಳಂಬರ ಕಾಲದ ವೀರಗಲ್ಲುಗಳು ಇವೆ. ಇವುಗಳಲ್ಲಿ ವಿಶೇಷವಾಗಿ ಕತ್ತಿ, ಗುರಾಣಿಗಳನ್ನು ಹಿಡಿದು ನಿಂತ ಭವ್ಯಾಕೃತಿಗಳನ್ನು ಅವುಗಳಲ್ಲಿ ಕಂಡರಿಸಲಾಗಿದೆ. ಈ ವೀರಗಲ್ಲು ಶಾಸನಗಳಲ್ಲಿ ಪ್ರಭಾಕರದಾಸ ಮುಂತಾದ ಕೆಲವು ವೀರರ ಹೆಸರುಗಳನ್ನು ಉಲ್ಲೇಖಿಸಿರುವುದು ವಿಶೇಷ. ಹಾಗೂ, ಆತ್ಮಬಲಿಯ ವೀರಗಲ್ಲು ಇದ್ದು ಯೋಧನು ಒಂದು ಕೈಯಲ್ಲಿ ಆಯುಧ ಹಿಡಿದು ಕೈಮಡಿಸಿ ಎದೆಗೆ ತಾಗಿಸಿಕೊಂಡಿದ್ದಾನೆ. ಅವನ

ಪಕ್ಕದಲ್ಲಿ ಎರಡು ಕಡೆ ತುರುಗಳು ನಿಂತಿದ್ದು ಇವನು ಆತ್ಮಬಲಿ ಮಾಡಿಕೊಂಡಿರುವುದನ್ನು ಕೆತ್ತಲಾಗಿದೆ. ಆದರೆ ಇವನು ಯಾವ ಕಾರಣಕ್ಕಾಗಿ ಆತ್ಮಬಲಿ ಮಾಡಿಕೊಂಡ ಎಂದು ಹೇಳುವುದು ಕಷ್ಟಸಾಧ್ಯ. ಈ ಎಲ್ಲಾ ವೀರಗಲ್ಲುಗಳು ಶೈವ ಧರ್ಮದ ಮೇಲೆ ಬೆಳಕು ಚೆಲ್ಲುವ ವೀರಗಲ್ಲುಗಳಾಗಿವೆ. ಈ ವೀರಗಲ್ಲುಗಳನ್ನು ಸಂರಕ್ಷಿಸುವುದು ಅಗತ್ಯವಾಗಿದೆ.

**ಗ್ರಾಮದ ಹೆಸರಿನ ಬಗ್ಗೆ :** ಚಿಕ್ಕಮಧುರೆ ಗ್ರಾಮ ನೊಳಂಬ ಪಲ್ಲವರ ಪ್ರಾಂತ್ಯವೊಂದರ ರಾಜಧಾನಿಯಾಗಿತ್ತು. ಈ ಗ್ರಾಮಕ್ಕೆ ಮದರಿಕಲ್ಲು ಎಂಬ ಹೆಸರಿದ್ದ ಬಗ್ಗೆ ಗ್ರಾಮದಲ್ಲಿರುವ ಇಲ್ಲಿನ ನೊಳಂಬರ ಕಾಲದ ಶಾಸನ (ಕ್ರಿ.ಶ. 815) ಮಹತ್ವದ ಮಾಹಿತಿಯನ್ನು ನೀಡುತ್ತದೆ. ನೊಳಂಬರ ಕಾಲದಲ್ಲಿ ನೊಳಂಬ ಪಲ್ಲವರ ಪ್ರಾಂತ್ಯವೊಂದರ ರಾಜಧಾನಿಯಾಗಿತ್ತು ಎನ್ನುವುದನ್ನು ವಿಶೇಷವಾಗಿ ಗಮನಿಸಬೇಕು.

**ಮಲ್ಲೇಶ್ವರ ದೇವಾಲಯ :** ಗ್ರಾಮದಲ್ಲಿ ನೊಳಂಬ ಪಲ್ಲವಾಧಿರಾಜನ ರಾಣಿ ಮತ್ತು ಪಲ್ಲವಮಲ್ಲನ ತಾಯಿ ಗವಗಣಬ್ಬೆಯು ಕ್ರಿ.ಶ. 790ರಲ್ಲಿ ಗವಗಣೇಶ್ವರ ಎಂಬ ಶಿವದೇವಾಲಯವನ್ನು ಕಟ್ಟಿಸಿದಳು ಎಂದೂ ಹಾಗೂ ದೇವಾಲಯಕ್ಕೆ ಉದಾರವಾಗಿ ಭೂಮಿಯನ್ನು ದಾನ ನೀಡಿದ ಬಗ್ಗೆ ಈ ಗ್ರಾಮದ ಶಾಸನ ಮಾಹಿತಿ ನೀಡುತ್ತದೆ. ನಂತರದ ಕಾಲಮಾನದಲ್ಲಿ ಗವಗಣೇಶ್ವರ ಎಂಬುದು ಮಲ್ಲೇಶ್ವರ ಎಂದು ಮರುನಾಮಕರಣ ಆಗಿರಬೇಕು. ಗ್ರಾಮದ ವಾಯುವ್ಯಕ್ಕೆ ಪೂರ್ವಾಭಿಮುಖವಾಗಿ ಮಲ್ಲೇಶ್ವರ ದೇವಾಲಯವು ಇದೆ. ಗರ್ಭಗೃಹ, ಅಂತರಾಳ, ನವರಂಗ, ಮುಂಭಾಗದಲ್ಲಿ ಎಂಟು ಅಡಿ ಎತ್ತರದ ದೀಪಸ್ತಂಭ ಮತ್ತು ಆಂಜನೇಯ ದೇವಾಲಯದ ಬಳಿ ಸುಮಾರು 25 ಅಡಿ ಎತ್ತರದ ಇನ್ನೊಂದು ದೀಪಸ್ತಂಭ ಇರುವ ಪ್ರಾಚೀನ ದೇವಾಲಯ ಇದಾಗಿದೆ.

ಗರ್ಭಗೃಹದಲ್ಲಿ ಮೂರು ಅಡಿ ಎತ್ತರ, ನಾಲ್ಕು ಅಡಿ ಉದ್ದ, ಮೂರು ಅಡಿ ಅಗಲವುಳ್ಳ ಪಾಣಿಪೀಠದ ಮೇಲೆ ಅರ್ಧ ಅಡಿ ಎತ್ತರದ ಕಪ್ಪುಶಿಲೆಯ ನಯವಾದ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಬಾಗಿಲುವಾಡವು ಅಲಂಕೃತವಾಗಿದೆ. ಅವುಗಳಲ್ಲಿ ವಜ್ರ, ಲತೆ ಮುಖ್ಯವಾಗಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪ ಇದೆ.

ಅಂತರಾಳದಲ್ಲಿ ಎರಡು ಚಿಕ್ಕ ಕಂಬಗಳು, ಅವುಗಳ ಮೇಲೆ ತೋರಣಪಟ್ಟಿ ಇದೆ. ಕಂಬಗಳು ಚಚ್ಚೌಕ ಮತ್ತು ವೃತ್ತಾಕಾರವಾಗಿವೆ. ಇವುಗಳ ಮೇಲಿನ ತೋರಣದ ಪಟ್ಟಿಯಲ್ಲಿ ವ್ಯಾಳ, ಹೂಮೊಗ್ಗು, ಕಿನ್ನರ ಶಿಲ್ಪಗಳ ರಚನೆಗಳಿವೆ. ಅಂತರಾಳದ ಎಡಬದಿಯಲ್ಲಿ ನಾಗಶಿಲ್ಪವನ್ನು ಕಾಣಬಹುದು.

ನವರಂಗದಲ್ಲಿ ನಾಲ್ಕು ಕಂಬಗಳು ಮತ್ತು ಒಂಬತ್ತು ಅಂಕಣಗಳ ನವರಂಗವಿದೆ. ಈ ಕಂಬಗಳನ್ನು ವಿವಿಧ ವಿನ್ಯಾಸಗಳಲ್ಲಿ ಕಡೆದಿದ್ದಾರೆ. ಇವು ಪೀಠ, ದಿಂಡು, ವೃತ್ತಾಕಾರದ,

ದಿಂಬಿನಾಕಾರದ ಅಬ್ಯಾಕಸ್, ಫಲಕ ಮತ್ತು ಬೋದಿಗೆಗಳನ್ನು ಹೊಂದಿವೆ. ಈ ಕಂಬಗಳ ದಿಂಡುಗಳಲ್ಲಿ ಸಿಂಹ, ಪೂರ್ಣಕುಂಭ, ಮಾಲೆಗಳ ರಚನೆಗಳಿವೆ. ನವರಂಗದ ಮೇಲ್ಛಾವಣಿಯಲ್ಲಿ ಒಂಬತ್ತು ಪದ್ಮಗಳನ್ನು ಕೆತ್ತಿರುವರು. ನವರಂಗದಲ್ಲಿ ಲಿಂಗಕ್ಕೆ ಎದುರಾಗಿ ಒಂದು ಅಡಿ ಎತ್ತರ ಹಾಗೂ ಒಂದೂವರೆ ಅಡಿ ಉದ್ದದ ನಂದಿ ಶಿಲ್ಪವನ್ನು ಕಾಣಬಹುದು.

ನವರಂಗದ ಎಡ ಮತ್ತು ಬಲಬದಿಯಲ್ಲಿ ಮಹಿಷಮರ್ದಿನಿ, ಗಣೇಶ, ಲಿಂಗ, ಭೈರವ, ನಟರಾಜ, ನರಸಿಂಹ ಶಿಲ್ಪಗಳಿವೆ. ಇವುಗಳಲ್ಲಿ ಮಹಿಷಮರ್ದಿನಿಯ ಮೂರೂವರೆ ಅಡಿ ಎತ್ತರದ ಶಿಲ್ಪವನ್ನು ಮುಕ್ಕಾಲು ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಅಷ್ಟಭುಜಗಳನ್ನು ಹೊಂದಿರುವ ದೇವಿಯು ತ್ರಿಭಂಗಿಯಲ್ಲಿ ನಿಂತಿದ್ದಾಳೆ. ಬಲಗೈಯಲ್ಲಿ ಭರ್ಜಿ ಹಿಡಿದಿದ್ದರೆ, ಮೇಲಿನ ಕೈ ಭಗ್ನವಾಗಿದೆ. ಉಳಿದ ಕೈಗಳಲ್ಲಿ ಕಟಕಮುದ್ರೆ, ಬಾಣ ಮತ್ತು ಖಡ್ಗಗಳನ್ನು ಹಿಡಿದಿದ್ದಾಳೆ. ಬಿಲ್ಲು, ಗುರಾಣಿ ಹಾಗೂ ಮಹಿಷನನ್ನು ಹಿಡಿದು ಕೊಲ್ಲುತ್ತಿರುವ ಭಂಗಿಯಲ್ಲಿ ನಿಂತಿದ್ದಾಳೆ. ದೇವಿಯ ಕೆಳಗೆ ಕೋಣನ ಮೈ ಮತ್ತು ಮಹಿಷನ ಶಿರವನ್ನು ಹಾಗೂ ಬಲಭಾಗದಲ್ಲಿ ದೇವಿಯ ವಾಹನವಾದ ಸಿಂಹವನ್ನು ಚಿತ್ರಿಸಲಾಗಿದೆ. ಶಿಲ್ಪ ತುಂಬ ಸುಂದರವಾಗಿ ಮೂಡಿಬಂದಿದೆ. ದೇವಿಯು ಕಿರೀಟಧಾರಿಯಾಗಿದ್ದು, ಹಾರ, ಕಂಠಹಾರ, ಕೈಬಳೆ, ತೋಳ್ಬಂದಿ, ಕರ್ಣಕುಂಡಲ, ಕಾಲ್ಕಡಗ, ನೂಪುರ ಮೊದಲಾದ ಆಭರಣಗಳನ್ನು ಮತ್ತು ನೆರಿಗೆಯುಳ್ಳ ಸೀರೆಗಳನ್ನು ಧರಿಸಿದ್ದಾಳೆ.

ಮಹಿಷಮರ್ದಿನಿಯ ಬಲಭಾಗದಲ್ಲಿ ಗಣೇಶನ ಶಿಲ್ಪವನ್ನು ಕಾಣಬಹುದು. ಒಂದೂವರೆ ಅಡಿ ಎತ್ತರದ ಗಣೇಶನು ಸುಖಾಸೀನನಾಗಿ ಕುಳಿತಿದ್ದು, ವಿಗ್ರಹಕ್ಕೆ ಅಗಲವಾದ ಕಿವಿಗಳು ಹಾಗೂ ಎರಡು ಕೈಗಳಿವೆ. ಎರಡು ಕೈಗಳಲ್ಲಿರುವ ಗಣೇಶನ ಶಿಲ್ಪಗಳು ಅಪರೂಪವಾಗಿದ್ದು. ಇದು ಬಹುಶಃ ಪ್ರಾಚೀನ ಶಿಲ್ಪವಾಗಿರಬಹುದು. ಬಲಗೈಯಲ್ಲಿ ಲೇಖನಿ ಮತ್ತು ಎಡಗೈಯಲ್ಲಿ ಮೋದಕಗಳಿವೆ.

ಗಣೇಶನ ಪಕ್ಕದಲ್ಲಿ ಲಿಂಗವಿದೆ. ವಿಶಾಲವಾದ ಪಾಣಿಪೀಠದ ಮೇಲೆ ಅಳತೆಯ ಸೇರಿನಾಕಾರದ ಲಿಂಗವಿದೆ. ಲಿಂಗದ ಬಳಿ ಭೈರವನ ಶಿಲ್ಪವನ್ನು ಸಹ ಕಾಣಬಹುದು. ನಾಲ್ಕು ಕೈಗಳಲ್ಲಿ ಡಮರು, ತ್ರಿಶೂಲ, ಖಡ್ಗ ಮತ್ತು ಪಾನವಟ್ಟಲುಗಳಿವೆ. ಸುಖಾಸನದಲ್ಲಿರುವ ಭೈರವನು ಜಟಾಮಕುಟಧಾರಿಯಾಗಿದ್ದು ವಿವಿಧ ಆಭರಣಗಳಿಂದ ಅಲಂಕೃತನಾಗಿದ್ದಾನೆ. ಕರ್ಣಕುಂಡಲ, ತೋಳ್ಬಂದಿ, ಕಂಠಹಾರ, ಹಾರ, ರುಂಡಮಾಲೆ, ಕಾಲ್ಕಡಗಗಳನ್ನು ಹೊಂದಿದ್ದಾನೆ. ಕೆಳಗೆ ನಾಯಿಯನ್ನು ಚಿತ್ರಿಸಲಾಗಿದೆ.

ನವರಂಗದ ಎಡಬದಿಯ ಗೋಡೆಯ ಗೂಡಿನಲ್ಲಿ ಜಟಾಮಕುಟಧಾರಿಯಾದ ನಟರಾಜನ ಶಿಲ್ಪವಿದೆ. ನಾಟ್ಯಭಂಗಿಯಲ್ಲಿರುವ ಈ ಶಿಲ್ಪವು ಎಂಟು ಕೈಗಳನ್ನು ಹೊಂದಿದೆ.

ಬಲ ಕೈಗಳಲ್ಲಿ ಡಮರು, ಪಾಶ, ಅಕ್ಷರಮಾಲೆ, ಅಭಯಮುದ್ರೆ, ಎಡಗೈಗಳಲ್ಲಿ ತರ್ಜನಿ ಮುದ್ರೆ, ಸರ್ಪ, ಗಂಟೆ ಮತ್ತು ಗಜಹಸ್ತ ಭಂಗಿಯಲ್ಲಿವೆ. ವಿವಿಧ ಆಭರಣಗಳಿಂದ ಅಲಂಕೃತನಾಗಿದ್ದು, ಕರ್ಣಕುಂಡಲ, ಕಂಠಹಾರ, ತೋಳ್ಬಂದಿ, ಕೈಕಡಗ, ಕಾಲ್ಕಡಗ ಹಾಗೂ ಪಂಚೆಯನ್ನು ಧರಿಸಿದ್ದಾನೆ. ನಟರಾಜನ ವಿಗ್ರಹದ ಕೆಳಗೆ ವಾದ್ಯಗಾರರನ್ನು ಕಾಣಬಹುದು.

ನವರಂಗದ ಬಲಬದಿಯ ಗೋಡೆಯ ಗೂಡಿನಲ್ಲಿ ಒಂದೂವರೆ ಅಡಿ ಎತ್ತರದ ನರಸಿಂಹನ ಶಿಲ್ಪವಿದೆ. ಕಿರೀಟಧಾರಿಯಾದ ನರಸಿಂಹನು ಹಿರಣ್ಯಕಶ್ಯಪನನ್ನು ತೊಡೆಯ ಮೇಲಿಟ್ಟುಕೊಂಡು ಸಂಹಾರ ಮಾಡುತ್ತಿರುವನು. ಎಂಟು ಕೈಗಳಿರುವ ನರಸಿಂಹನು ಹಿರಣ್ಯಕಶ್ಯಪುವಿನ ಕರುಳನ್ನು ತನ್ನ ಎರಡೂ ಕೈಗಳಲ್ಲಿ ಮಾಲೆಯಂತೆ ಹಿಡಿದಿದ್ದಾನೆ. ಎರಡೂ ಕೈಗಳಲ್ಲಿ ಹಿರಣ್ಯಕಶ್ಯಪನನ್ನು ಹಿಡಿದುಕೊಂಡು ಮತ್ತೆರಡು ಕೈಗಳಲ್ಲಿ ಅವನ ಹೊಟ್ಟೆಯನ್ನು ಬಗೆಯುತ್ತಿರುವಂತೆ ತೋರಿಸಲಾಗಿದೆ.

ನವರಂಗದ ಬಾಗಿಲುವಾಡವನ್ನು ವಿವಿಧ ಲತೆಗಳಿಂದ ಅಲಂಕರಿಸಲಾಗಿದ್ದು, ಅವುಗಳಲ್ಲಿ ವಜ್ರ, ಕಿನ್ನರ ಮತ್ತು ಸ್ತಂಭಗಳಿವೆ. ಕೆಳಭಾಗದಲ್ಲಿ ತ್ರಿಶೂಲ, ಸರ್ಪ, ಅಭಯ ಮತ್ತು ಕಟ್ಯವಲಂಬಿತ ಮುದ್ರೆಗಳಲ್ಲಿ ನಿಂತ ದ್ವಾರಪಾಲಕರ ಶಿಲ್ಪಗಳು, ಕಮಂಡಲ, ಪದ್ಮಗಳನ್ನು ಹಿಡಿದು ನಿಂತಿರುವ ಮಹಿಳೆ ಹಾಗೂ ಪುರುಷರ ಶಿಲ್ಪಗಳನ್ನು ಕಾಣಬಹುದು. ಬಾಗಿಲುವಾಡದ ಲಲಾಟದಲ್ಲಿ ಗಜಲಕ್ಷ್ಮಿ, ಅದರ ಮೇಲಿನ ಪಟ್ಟಿಕೆಯಲ್ಲಿ ಬಾರವಾಹಕ ಶಿಲ್ಪಗಳು, ಉತ್ತರ ಭಾಗದಲ್ಲಿ ಶಿಖರಗಳ ಅಲಂಕರಣೆಯನ್ನು ಕೆತ್ತಲಾಗಿದೆ.

ದೇವಾಲಯದ ಮುಂಭಾಗದ ಬಲಬದಿಯಲ್ಲಿ ಚಿಕ್ಕ ಗರ್ಭಗೃಹವಿದೆ. ಇದು ಮೂಲತಃ ಗಣೇಶ ದೇಗುಲವಾಗಿತ್ತು. ಆದರೆ ರಕ್ಷಣೆಯಿಲ್ಲದ ಕಾರಣ ಈ ವಿಗ್ರಹವನ್ನು ಹಾಗೂ ವೀರಭದ್ರನ ಶಿಲ್ಪವನ್ನು ಗ್ರಾಮದ ಒಳಗೆ ಕೊಂಡೊಯ್ದು ರಕ್ಷಿಸಲಾಗಿದೆ. ಮೂರೂವರೆ ಅಡಿ ಎತ್ತರವಿರುವ ಈ ವಿಗ್ರಹವು ಸುಖಾಸನದಲ್ಲಿ ಕುಳಿತಿದೆ. ಗಣೇಶನು ನಾಲ್ಕು ಕೈಗಳನ್ನು ಹೊಂದಿದ್ದು, ಬಲಗೈಗಳಲ್ಲಿ ಪರಶು ಮತ್ತು ಲೇಖನಿಗಳನ್ನು, ಎಡಗೈಗಳಲ್ಲಿ ಪದ್ಮ ಮತ್ತು ಮೋದಕವನ್ನು ಹಿಡಿದಿರುವನು.

ದೇವಾಲಯದ ಗೋಡೆಯನ್ನು ಇಟ್ಟಿಗೆ, ಬಂಡೆಕಲ್ಲುಗಳಿಂದ ನಿರ್ಮಿಸಿ ಹೊರಬದಿಗೆ ಕಲ್ಲಿನ ಗೋಡೆಯನ್ನು ಓರೆಯಾಗಿಸಿಟ್ಟು ಒಳಭಾಗದಲ್ಲಿ ಮಣ್ಣನ್ನು ತುಂಬಲಾಗಿತ್ತು. ಓರೆಯಾಗಿದ್ದ ಭಾಗವನ್ನು ಇತ್ತೀಚೆಗೆ ಸಂಪೂರ್ಣವಾಗಿ ತೆಗೆದು ನೋಡಿದಾಗ ಇಟ್ಟಿಗೆಯ ಸುಂದರವಾದ ಹೊರಗೋಡೆ ಗೋಚರಿಸಿದೆ.

ಗರ್ಭಗೃಹದ ಮೇಲೆ ಯಾವುದೇ ಬಗೆಯ ಶಿಖರವಿಲ್ಲ. ಇದರಿಂದ ಈ ದೇವಾಲಯದ ಗೋಡೆಯನ್ನು ಸಂಪೂರ್ಣವಾಗಿ ಇಟ್ಟಿಗೆ ಮತ್ತು ಕಲ್ಲಿನ ಕಂಬಗಳನ್ನು

ಬಳಸಿ ಕಟ್ಟಿರುವುದು ಸ್ಪಷ್ಟವಾಗುತ್ತದೆ. ಇತ್ತೀಚೆಗೆ ರಾಜ್ಯ ಪುರಾತತ್ವ ಇಲಾಖೆಯು ಇಟ್ಟಿಗೆಯ ಭಾಗವನ್ನು ತೆಗೆದು ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ್ದಾರೆ.

ಇಲ್ಲಿನ ದೇವಾಲಯದ ಒಳಭಾಗದ ಕಂಬಗಳು, ತೋರಣಗಳು, ಶಿಲ್ಪಗಳ ಹಿನ್ನೆಲೆಯಲ್ಲಿ ಈ ದೇವಾಲಯದ ಕಾಲವನ್ನು ಹಾಗೂ ಇದೇ ತಾಲ್ಲೂಕು ಪರಿಸರದ ಇಸಾಮುದ್ರ ಗ್ರಾಮದ ಕಲ್ಲೇಶ್ವರ ಮತ್ತು ಭೋಗೇಶ್ವರ ದೇವಾಲಯಗಳ ವಾಸ್ತುಶೈಲಿ ಮತ್ತು ಅಲ್ಲಿನ ಶಾಸನಗಳ ಹಿನ್ನೆಲೆಯಲ್ಲಿ ನೋಡಿದಾಗ ಇದು ಬಹುಶಃ ನೊಳಂಬರ ಕಾಲ, ಅಂದರೆ ಕ್ರಿ.ಶ. 8 ನೇ ಹಾಗೂ ರಾಷ್ಟ್ರಕೂಟರ ಕಾಲ ಅಂದರೆ ಕ್ರಿ.ಶ. 9 ಮತ್ತು 10ನೇ ಶತಮಾನದ್ದೆಂದು ಹೇಳಬಹುದಾಗಿದೆ.

ಮಲ್ಲೇಶ್ವರ ದೇವಾಲಯದಲ್ಲಿರುವ ಕ್ರಿ.ಶ. 815ರ ಸ್ತಂಭಶಾಸನಗಳು ಸಿಂಹಪೋತನ ಮಗ ಪರಮೇಶ್ವರ ಪಲ್ಲವಾಧಿರಾಜ ಮತ್ತು ಅವನ ಮಗ ಪಲ್ಲವಮಲ್ಲ ರಾಷ್ಟ್ರಕೂಟರ ಸಾಮಂತರಾಗಿ ಆಡಳಿತ ನಡೆಸುತ್ತಿದ್ದುದರ ಬಗ್ಗೆ ತಿಳಿಸುತ್ತದೆ.

ಒಟ್ಟಾರೆ ಇಡೀ ಗ್ರಾಮವು ಶಿಲಾಯುಗದ ಕಾಲದಿಂದ ಹಿಡಿದು, ನೊಳಂಬರ ಕಾಲದಲ್ಲಿ ಪ್ರಮುಖ ಪ್ರಾಂತ್ಯವಾಗಿ, ಪ್ರಮುಖ ಶಾಸನಗಳನ್ನು, ಮೂರ್ತಿಶಿಲ್ಪಗಳನ್ನು, ದೇವಾಲಯಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡು ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತಿರುವ ಒಂದು ಪ್ರಾಚೀನ ಗ್ರಾಮವಾಗಿದೆ.

ನೊಳಂಬ ಪಲ್ಲವಾಧಿರಾಜನ ರಾಣಿ ಮತ್ತು ಪಲ್ಲವಮಲ್ಲನ ತಾಯಿ ಗವಗಣಬ್ಬೆಯು ಕ್ರಿ.ಶ. 790 ರಲ್ಲಿ ಗವಗಣೇಶ್ವರ ಎಂಬ ಶಿವದೇವಾಲಯವನ್ನು ಕಟ್ಟಿಸಿದಳು. ಅಂದರೆ ಆಕೆಯು ತನ್ನ ಹೆಸರಿನಲ್ಲಿ ಗವಗಣೇಶ್ವರ ಎಂಬ ದೇವಾಲಯವನ್ನು ನಿರ್ಮಿಸಿದ ಬಗ್ಗೆ ಮಾಹಿತಿ ನೀಡುವ ಶಾಸನ ದೊರಕಿರುವುದು ವಿಶೇಷ. ಇಂದು ಸ್ಥಳೀಯರು ಇದನ್ನು 'ಮಲ್ಲೇಶ್ವರ ದೇವಾಲಯ' ಎಂದು ಕರೆಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಶಾಸನಗಳಿಗೆ ಇರುವ ವೀರಗಲ್ಲುಗಳನ್ನು ಹಾಗೂ ದೇವಾಲಯವನ್ನು ಸಂರಕ್ಷಿಸುವ ಕಾರ್ಯವನ್ನು ಜನರು ಮಾಡಬೇಕಿದೆ.

❑

## ಗ್ರಂಥ ಪರಾಮರ್ಶೆ

# ಮಲೆಯೂರು ಮಂದಾರ

## (ಮ.ಗು. ಬದುಕು ಮತ್ತು ಸಾಹಿತ್ಯಾವಲೋಕನ)

– **ನಗರ್ಲೆ ಶಿವಕುಮಾರ**

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಹೇಳುತ್ತಾರೆ : "ವ್ಯಕ್ತಿ ಸತ್ತು ಹೋದ ಮೇಲೆ ಮತ್ತೆ ಬದುಕಬೇಕೆಂದರೆ ಒಂದು ಕೆಲಸ ಮಾಡಿ ಹೋಗಿ. ಜನ ಓದುವ ಹಾಗೆ ಏನಾದರೂ ಬರೆದು ಇಟ್ಟು ಹೋಗಿ. ಇಲ್ಲವಾದರೆ ಜನ ನಿಮ್ಮ ಬಗ್ಗೆ ಬರೆಯುವ ಹಾಗೆ ಏನಾದರೂ ಕಾರ್ಯ ಮಾಡಿ ಹೋಗಿ". ಹಾಗೆ ಚಾಮರಾಜನಗರ ತಾಲೂಕು ಮಲೆಯೂರಿನ ಪ್ರೊ. ಎಸ್. ಗುರುಸ್ವಾಮಿಯವರು ಸಾಹಿತ್ಯಕ್ಷೇತ್ರದಲ್ಲಿ ತಮ್ಮದೇ ಆದ ಉತ್ತಮ ಕಾರ್ಯಗಳನ್ನು ಮಾಡಿ 9.3.2023ರಂದು ಎಲ್ಲರನ್ನೂ ಅಗಲಿ ಹೋಗಿದ್ದಾರೆ. ಇವರ ಸವಿನೆನಪಿಗೋಸ್ಕರ ಅಭಿಮಾನಿಗಳು ಹಾಗೂ ಶಿಷ್ಯವೃಂದದವರು 2023ರಿಂದ ಪ್ರೊ. ಮಲೆಯೂರು ಗುರುಸ್ವಾಮಿ ಪ್ರಶಸ್ತಿಯನ್ನು ಕೊಡುತ್ತಾ ಬಂದಿದ್ದಾರೆ. ಹಾಗೂ, ಈ ವರ್ಷ ಪ್ರಶಸ್ತಿಯ ಜೊತೆಗೆ ಅವರ ಬದುಕು ಮತ್ತು ಸಾಹಿತ್ಯಗಳ ಅವಲೋಕನ ಕುರಿತಂತೆ 'ಮಲೆಯೂರು ಮಂದಾರ' ಗ್ರಂಥ ಹೊರಬಂದಿದೆ.

ನಾಡಿನ 67 ಜನ ಲೇಖಕರುಗಳು ಪಾಲ್ಗೊಂಡಿರುವ 'ಮಲೆಯೂರು ಮಂದಾರ' ಸಂಪುಟದಲ್ಲಿ ಒಡನಾಟ, ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳೆಂಬ ಮೂರು ಭಾಗಗಳಿವೆ. ಒಡನಾಟದಲ್ಲಿ ಮ.ಗು.ರವರ ಆಪ್ತರ ಲೇಖನಗಳು ಹಾಗೂ ಮೂರು ಕವನಗಳು ಸೇರಿದಂತೆ ಒಟ್ಟು 32 ಜನ ಲೇಖಕರು ಬರೆದಿದ್ದಾರೆ. ಸ್ವತಂತ್ರ ಕೃತಿಗಳ ಬಗೆಗೆ 13 ಜನರು ಸಮೀಕ್ಷಾ ಲೇಖನಗಳನ್ನು ಹಾಗೂ ಸಂಪಾದಿತ ಕೃತಿಗಳನ್ನು ಕುರಿತಂತೆ 23 ಜನರು ಪರಿಚಯಿಸಿದ್ದಾರೆ.

ಪ್ರೊ. ಮಲೆಯೂರು ಗುರುಸ್ವಾಮಿಯವರ ಬದುಕು ಮತ್ತು ಸಾಹಿತ್ಯವನ್ನು ಪರಿಚಯಿಸುವ 'ಮಲೆಯೂರು ಮಂದಾರ' ಕೃತಿಯ ಆರಂಭದಲ್ಲಿ ಕೆಲವು ಛಾಯಾಚಿತ್ರಗಳು

ಹಾಗೂ ಎಲ್ಲ ಲೇಖಕರ ವಿಳಾಸಗಳನ್ನು ಕೊನೆಯಲ್ಲಿ ನೀಡಲಾಗಿದೆ. ಗುರುಸ್ವಾಮಿಯವರ ಸಮಗ್ರ ಕೃತಿಗಳನ್ನು ಪರಿಚಯಿಸಲು ಈ ಸಂಪುಟದಲ್ಲಿ ಸಾಧ್ಯವಾಗಲಿಲ್ಲವೆಂಬ ವಿಷಾದ ಉಳಿದಿದೆ. ಕಾರಣ, ಅವರ ಎಲ್ಲ ಕೃತಿಗಳು ಲಭ್ಯವಾಗಲಿಲ್ಲ ಎಂಬುದೂ ಒಂದು ಕಾರಣ. ಪ್ರೊ. ಮಲೆಯೂರರು ಪ್ರಸಿದ್ಧ ಬರಹಗಾರರಾಗಿದ್ದರು ಹಾಗೂ ಒಳ್ಳೆಯ ಮಾತುಗಾರರಾಗಿದ್ದರು. ಇವರು ಇತ್ತೀಚಿಗೆ ಆರು ಉತ್ತಮ ಕಾದಂಬರಿಗಳನ್ನು ರಚಿಸಿದ್ದಾರೆ. 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ', 'ಅಪ್ರತಿಮ ವೀರ', 'ಮಹಾಯಾತ್ರಿಕ', 'ಕಪಿಲೆ ಹರಿದಳು ಕಡಲಿಗೆ', 'ಸಂಸ' ಮತ್ತು 'ಬಂಗಾರ ದೊಡ್ಡಿ' ಕಾದಂಬರಿಗಳು ಮಹತ್ವದ ಕೃತಿಗಳಾಗಿವೆ.

ಮಲೆಯೂರರು ಜೆ.ಎಸ್.ಎಸ್. ಸಂಸ್ಥೆಯ ಕಾಲೇಜುಗಳಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಕನ್ನಡ ಭಾಷಾ ಬೋಧಕರಾಗಿದ್ದರು. ಅವರಿಗೆ ಅಪಾರವಾದ ಶಿಷ್ಯಬಳಗವಿತ್ತು. ಸಭೆ ಸಮಾರಂಭಗಳಲ್ಲಿ ಮಾತಿಗೆ ನಿಂತರೆ ಅಪ್ರತಿಮ ವಾಗ್ವೈಖರಿಯಿಂದ ಇಡೀ ಜನಸ್ತೋಮವನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು. ಸಂಘಟನಾ ಚತುರರಾಗಿದ್ದ ಅವರು ಮೂರು ಅವಧಿಗೆ ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸುತ್ತೂರು ಶ್ರೀಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಸಂಸ್ಥಾಪಿಸಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಉತ್ತಮ ಕಾರ್ಯವನ್ನು ನಿರ್ವಹಿಸಿದ್ದಾರೆ.

ಬಹುಮುಖ ವ್ಯಕ್ತಿತ್ವದ ಪ್ರೊ. ಗುರುಸ್ವಾಮಿಯುವರು ಜೆಎಸ್‌ಎಸ್ ಮಹಾವಿದ್ಯಾಪೀಠವು ಹೊರತರುತ್ತಿರುವ 'ಪ್ರಸಾದ' ಪತ್ರಿಕೆಯ ಸಂಪಾದಕರಾಗಿ ಎರಡು ದಶಕಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿದರು. ನಡೆದಾಡುವ ಗ್ರಾಮೀಣ ವಿಶ್ವಕೋಶದಂತಿದ್ದ ಅವರ ನೆನಪಿನಲ್ಲಿ ಅಭಿಮಾನಿಗಳು, ವಿದ್ಯಾರ್ಥಿಗಳು ಸೇರಿಕೊಂಡು 'ಮಲೆಯೂರು ಮಂದಾರ' ಎಂಬ ಹೆಸರಿನಲ್ಲಿ ಗ್ರಂಥವನ್ನು ಹೊರತರಲಾಗಿದೆ.

ಈ ಕೃತಿಗೆ ಸುತ್ತೂರು ಶ್ರೀಮಠದ ಪರಮಪೂಜ್ಯ ಜಗದ್ಗುರುಗಳವರು ಶುಭ ಸಂದೇಶವನ್ನು ದಯಪಾಲಿಸಿದ್ದಾರೆ. ಸಿದ್ದಗಂಗಾ ಮಠ, ದೇವನೂರು ಮಠ ಮತ್ತು ಶ್ರೀ ಗುರು ಕಂಬಳೀಶ್ವರ ಮಠದ ಶ್ರೀಗಳವರು ಸಂದೇಶಗಳನ್ನು ನೀಡಿದ್ದಾರೆ. ಮೈಸೂರಿನ ಸಂವಹನ ಪ್ರಕಾಶನದ ಮಾಲೀಕರಾದ ಶ್ರೀ ಡಿ.ಎನ್. ಲೋಕಪ್ಪನವರು ಕೃತಿಯನ್ನು ಹೊರತಂದಿದ್ದಾರೆ.

ಕೃತಿಯನ್ನು ರೂಪಿಸುವ ಸಲುವಾಗಿ 15 ಜನರ ಸಂಪಾದಕ ಮಂಡಳಿಯನ್ನು ರಚಿಸಲಾಯಿತು. ಕುಂದೂರು ಶ್ರೀಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳವರು

ಪ್ರಧಾನ ಸಂಪಾದಕರಾಗಿ ಮಾರ್ಗದರ್ಶನ ನೀಡಿದ್ದಾರೆ. ಪ್ರೊ. ಮೊರಬದ ಮಲ್ಲಿಕಾರ್ಜುನ, ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು ಸಂಪಾದಕರಾಗಿದ್ದ ಈ ಸಮಿತಿಯಲ್ಲಿ 11 ಜನ ಸದಸ್ಯರಿದ್ದರು. ಶ್ರೀ ಕಾನ್ಯ ಶಿವಮೂರ್ತಿಯವರು ಸಂಚಾಲಕರಾಗಿ ಕೆಲಸ ನಿರ್ವಹಿಸಿದ್ದಾರೆ.

ಕನ್ನಡ ನಾಡಿನ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಚರಿತ್ರೆಯನ್ನು ಮಲೆಯೂರರು ಚೆನ್ನಾಗಿ ಬಲ್ಲವರಾಗಿದ್ದರು. ಅವರಿಗೆ ನಾಡಿನ ಇತಿಹಾಸ ಗೊತ್ತಿತ್ತು. ಹಾಗೆಯೇ ಸಮಾಜದ ಆಗುಹೋಗುಗಳನ್ನು ಬೌದ್ಧಿಕವಾಗಿ ಅಂದಾಜು ಮಾಡುವುದರಲ್ಲಿ ನಿಪುಣರಾಗಿದ್ದರು. ನಮಗೆ ಚಿರಪರಿಚಿತರಾದ ವ್ಯಕ್ತಿಗಳೇ ಆಗಲಿ, ಅವರ ಬಗ್ಗೆ ನಾವು ತಿಳಿದುಕೊಂಡಿದ್ದಕ್ಕಿಂತಲೂ ಭಿನ್ನವಾದ ಹಲವಾರು ಸಂಗತಿಗಳು ಅವರಿಗೆ ತಿಳಿದಿರುತ್ತಿತ್ತು. ಸ್ಥಳಗಳ ಬಗ್ಗೆ ಅವರಿಗಿದ್ದ ಜ್ಞಾನ ಅಸದೃಶವಾದುದಾಗಿತ್ತು. ಅಪರೂಪದ ಸಾಹಿತ್ಯ ವರ್ಣರಂಜಿತ ವ್ಯಕ್ತಿತ್ವವನ್ನು ಹೊಂದಿದ್ದ ಮಲೆಯೂರರು ಇನ್ನು ಕೇವಲ ನೆನಪು ಮಾತ್ರ.

'ಮಲೆಯೂರು ಮಂದಾರ' ಕೃತಿ ಲೋಕಾರ್ಪಣೆ ಹಾಗೂ ಪ್ರೊ. ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಪ್ರದಾನ ಸಮಾರಂಭವು 20.10.2024ರಂದು ಮೈಸೂರಿನ ಜೆಎಸ್‌ಎಸ್ ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಸುತ್ತೂರು ಜಗದ್ಗುರುಗಳವರ ದಿವ್ಯ ಆಶೀರ್ವಾದಗಳೊಂದಿಗೆ, ಶ್ರೀ ಕುಂದೂರು ಮಠದ ಪೂಜ್ಯ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳ ಅವರ ಸಮ್ಮುಖದಲ್ಲಿ ನಡೆಯಿತು. ಹಿರಿಯ ಸಾಹಿತಿಗಳಾದ ಪ್ರೊ. ಎಚ್.ಎಸ್. ಶಿವಪ್ರಕಾಶ್‌ರವರಿಗೆ ಪ್ರಶಸ್ತಿ ನೀಡಲಾಯಿತು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಸಂಸ್ಮರಣ ಕೃತಿ ಬಿಡುಗಡೆ ಮಾಡಿದರು. 'ಮ.ಗು. ಬದುಕು ಮತ್ತು ಸಾಹಿತ್ಯ' ಕುರಿತು ನಿವೃತ್ತ ಪ್ರಾಧ್ಯಾಪಕ ಡಾ. ಸಿ. ನಾಗಣ್ಣನವರು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಶ್ರೀ ಎಚ್.ಎಸ್. ಗಣೇಶ್ ಪ್ರಸಾದ್, ಶ್ರೀಮತಿ ಜಯಂತಿ ಗುರುಸ್ವಾಮಿ ಅವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಮೈಸೂರು ಮತ್ತು ಚಾಮರಾಜನಗರದಿಂದ ಅಪಾರ ಸಂಖ್ಯೆಯ ಅಭಿಮಾನಿಗಳು, ಶಿಷ್ಯಬಳಗದವರು ಭಾಗವಹಿಸಿದ್ದ ಕಾರ್ಯಕ್ರಮವು ಅವರ ಪ್ರೀತಿ, ಅಭಿಮಾನಗಳ ಕೈಗನ್ನಡಿಯಂತೆ ಇತ್ತು.

❑

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

## ಸುತ್ತೂರು ಶ್ರೀಗಳ ಅನುಗ್ರಹ ದೊರಕಿರುವುದು ನನ್ನ ಪುಣ್ಯ

ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟನೆಗೂ ಮುನ್ನ ಸುತ್ತೂರು ಶ್ರೀಗಳವರ ಅನುಗ್ರಹ ದೊರಕಿರುವುದು ನನ್ನ ಪುಣ್ಯ ಎಂದು ಸಾಹಿತಿಗಳಾದ ನಾಡೋಜ ಹಂ.ಪ. ನಾಗರಾಜಯ್ಯನವರು ಅಕ್ಟೋಬರ್ 2ರಂದು ಶ್ರೀ ಸುತ್ತೂರು ಕ್ಷೇತ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡುತ್ತಾ ತಿಳಿಸಿದರು. ಮೈಸೂರು ದಸರಾ ಮಹೋತ್ಸವವು ಕನ್ನಡಿಗರ ನಾಡು, ನುಡಿ ಸಂಸ್ಕೃತಿಯ ಸಂಕೇತವಾಗಿದೆ. ಸಮಸ್ತ ಕನ್ನಡಿಗರು ಹಾಗೂ ಸಾಹಿತ್ಯ ಲೋಕದ ಪ್ರತಿನಿಧಿಯಾಗಿ ನಾನು ಈ ಮಹೋತ್ಸವವನ್ನು ಉದ್ಘಾಟಿಸುತ್ತಿದ್ದೇನೆ. ಜೈನರ ಕಾವ್ಯ, ಶರಣರ ವಚನಗಳು, ದಾಸರ ಹಾಡಿನ ಪರಂಪರೆಯಿಂದ ಬಂದವರು ನಾವು. ಈ ಸಮಾರಂಭ ಪುಟ್ಟ ಅನುಭವಮಂಟಪವೇ ಸೇರಿಸಿದಂತೆ ಕಾಣುತ್ತಿದೆ. ವಿಶ್ವವ್ಯಾಪಿಯಾಗಿ ಸಮಾಜ ಸೇವೆ ಮಾಡುವ ಮಠವೆಂದರೆ ಅದು ಸುತ್ತೂರು ಮಠ. ಬ್ರಹ್ಮಾಂಡದ ಎಲ್ಲಾ ವಿಚಾರಗಳನ್ನು ಕುರಿತು ಮಾತನಾಡಲು ವಚನಕಾರರು ನೀಡಿರುವ ವಚನ ಪರಂಪರೆಗೆ ಚೈತನ್ಯ ತುಂಬುವ ದಿಶೆಯಲ್ಲಿ ಅವುಗಳನ್ನು ಉಳಿಸಿ, ಬೆಳೆಸಿ, ಕಾಪಾಡಿ, ಪ್ರಸಾರಮಾಡುತ್ತಿರುವುದರಲ್ಲಿ ಸುತ್ತೂರು ಮಠದ ಕಾರ್ಯ ಶ್ಲಾಘನೀಯವಾದುದು. ದಸರಾ ಉದ್ಘಾಟನೆಗೂ ಮುನ್ನ ಶ್ರೀಗಳು ನನಗೂ ನನ್ನ ಕುಟುಂಬ ವರ್ಗದವರಿಗೂ ಆಶೀರ್ವದಿಸುತ್ತಿರುವುದು ನಮ್ಮ ಪುಣ್ಯವೇ ಸರಿ ಎಂದರು.

ಪರಮಪೂಜ್ಯ ಜಗದ್ಗುರುಗಳವರು ನಾಡೋಜ ಹಂ.ಪ. ನಾಗರಾಜಯ್ಯರವರು ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ. ಮೈಸೂರು ದಸರಾ ಹೆಸರಿಗೆ ಮಾತ್ರವಲ್ಲ, ನಿಜವಾಗಿಯೂ ವಾಸ್ತವವಾಗಿಯೂ ಜಗದ್ವಿಖ್ಯಾತವಾದ ನಾಡಹಬ್ಬವಾಗಿದೆ. ಮೈಸೂರು ಎಂದರೆ ದಸರಾ ಎಂದೇ ಪ್ರಸಿದ್ಧಿ. ವಿಜಯದಶಮಿ, ನವರಾತ್ರಿ ಹಾಗೂ ದೇವೀ ಆರಾಧನೆಗಳನ್ನು ನಾಡಿನ ಎಲ್ಲರೂ ಆಚರಿಸುತ್ತಾರೆ. ಆದರೆ ಮೈಸೂರು ದಸರಾ ಭಾರತದ ಹೆಗ್ಗುರುತು. ಇಂಥ ನಾಡಹಬ್ಬವನ್ನು ಹಂಪನಾರವರು ಉದ್ಘಾಟಿಸುತ್ತಿರುವುದು ಅರ್ಥಪೂರ್ಣವಾಗಿದೆ ಎಂದು ಹೇಳಿದರು.

ಕಲಬುರಗಿ ಗ್ರಾಮೀಣ ಕ್ಷೇತ್ರದ ಶಾಸಕರಾದ ಶ್ರೀ ಬಸವರಾಜ್ ಮತ್ತಿಮೂಡು, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾದ ಡಾ. ವೈ.ಡಿ. ರಾಜಣ್ಣ, ಶ್ರೀ

ಜಿ.ಸಿ. ಭಟ್ಟ, ಶ್ರೀ ಎಂ.ಜಿ.ಆರ್. ಅರಸು, ಶ್ರೀಮತಿ ಲತಾ ಸುದರ್ಶನ್, ಹಂ.ಪ.ನಾರವರ ಪುತ್ರಿಯರಾದ ಶ್ರೀಮತಿ ಆರತಿ ಹಂಪನಾ ಮತ್ತು ಶ್ರೀಮತಿ ರಾಜಶ್ರೀ ಹಂಪನಾರವರುಗಳು ಈ ಸಂದರ್ಭದಲ್ಲಿ ಮಾತನಾಡಿದರು. ಶ್ರೀ ಕೆ.ಸಿ. ಶಿವಪ್ಪ, ಡಾ. ರಾಜಶೇಖರ್, ಪ್ರೊ. ನೀಲಗಿರಿ ತಳವಾರ, ಪ್ರೊ. ಮೊರಬದ ಮಲ್ಲಿಕಾರ್ಜುನ, ವಿಕ್ರಂ ಅರಸ್, ಡಾ. ಲತಾ ರಾಜಶೇಖರ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು, ಭಕ್ತಾದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶ್ರೀ ಎಂ. ಚಂದ್ರಶೇಖರ್ ಸ್ವಾಗತಿಸಿ ನಿರೂಪಿಸಿದರು.

**ಶಿಷ್ಯರ ಸಾಧನೆಯೇ ಗುರುವಿಗೆ ಸಲ್ಲಿಸುವ ಗೌರವ**

ಗುರು ನೀಡಿದ ವಿದ್ಯೆಯಿಂದ ಶಿಷ್ಯರು ಮಾಡುವ ಸಾಧನೆಯೇ ಅವರಿಗೆ ಸಲ್ಲಿಸುವ ಗೌರವ ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 3ರಂದು ಮೈಸೂರು ಕುವೆಂಪು ನಗರದಲ್ಲಿ ಕಲಾಂಡಿಕ ಅಕಾಡೆಮಿಯಿಂದ ನಿರ್ಮಿಸಿರುವ ವಸುಂಧರ ಭವನವನ್ನು ಉದ್ಘಾಟಿಸಿ ಆಶೀರ್ವಚನ ನೀಡುತ್ತಾ ತಿಳಿಸಿದರು. ಶ್ರೀಮತಿ ಪ್ರಣೀತಾ ಗೋವಿಂದ್‌ರವರು ಅವರ ಗುರುಗಳಾದ ವಸುಂಧರಾ ದೊರೆಸ್ವಾಮಿಯವರಿಗೆ ಈ ಭವನವನ್ನು ಅರ್ಪಿಸಿದ್ದಾರೆ. ವ್ಯಕ್ತಿ ಇರುವಾಗಲೇ ಇಂತಹ ಗೌರವಗಳು ದೊರೆಯುವುದು ತುಂಬಾ ಅಪರೂಪ. ಇದು ಶಿಷ್ಯೆ ಗುರುವಿಗೆ ನೀಡಿದ ಅಮೋಘ ಕಾಣಿಕೆ. ವಿದುಷಿ ವಸುಂಧರಾ ದೊರೆಸ್ವಾಮಿಯವರು ಇಂತಹ ಹಲವಾರು ಕಲಾವಿದರನ್ನು ನೃತ್ಯಕಲೆಯಲ್ಲಿ ಪರಿಣತಗೊಳಿಸಿದ್ದಾರೆ. ಈ ಭವನವು ನವರಾತ್ರಿಯ ಮೊದಲ ದಿನದಂದು ಉದ್ಘಾಟನೆಯಾಗಿದ್ದು ಮೈಸೂರಿನ ಜನತೆಗೆ ಸದಾ ಸೇವೆಯನ್ನು ಒದಗಿಸುವಂತಾಗಲಿ ಎಂದು ಹಾರೈಸಿದರು.

ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಮುಕ್ತಿದಾನಂದಜೀ ಮಹಾರಾಜ್‌ರವರು ಇಂತಹ ಕಾರ್ಯಕ್ರಮಗಳು ಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತವೆ. ಭಾರತೀಯ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಎಲ್ಲರೂ ಗೌರವಿಸಿ ಬೆಳವಣಿಗೆಗೆ ಸಹಕರಿಸಬೇಕು ಎಂದು ಹೇಳಿದರು. ಕಲಾಂಡಿಕ ಅಕಾಡೆಮಿಯ ಶ್ರೀ ರಮೇಶ್ ಕಣ್ಣನ್, ಶ್ರೀಮತಿ ಸವಿತಾ ರಮೇಶ್ ಮತ್ತು ಶ್ರೀಮತಿ ಪ್ರಣೀತಾ ಗೋವಿಂದ್ ಹಾಗೂ ಶ್ರೀ ಗೋವಿಂದ್‌ರವರುಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಾಹಿತಿಗಳು, ಗಣ್ಯರು, ಕಲಾವಿದರು, ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶುಭ ಹಾರೈಸಿದರು.

**ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಶ್ರೇಷ್ಠ ಸ್ಥಾನವಿದೆ**

ಅನಾದಿ ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಶ್ರೇಷ್ಠ ಸ್ಥಾನವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 4ರಂದು ಕೊಳ್ಳೇಗಾಲ

ತಾಲ್ಲೂಕು ಆಲಹಳ್ಳಿ ಶ್ರೀ ಪಟ್ಟದ ಮಠದ ಶ್ರೀ ಶಿವಕುಮಾರ ಸ್ವಾಮಿಗಳ ಸಂಸ್ಮರಣೆ ಮತ್ತು ನೂತನ ಪಟ್ಟಾಧಿಕಾರ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಾ ತಿಳಿಸಿದರು. ನಿಸರ್ಗದಲ್ಲಿ ಉಸಿರಾಟಕ್ಕೆ ಮರಗಿಡಗಳು ಹೇಗೆ ಅವಶ್ಯವೋ ಹಾಗಯೇ ಮಾನವನಿಗೆ ಧರ್ಮದ ಆಚರಣೆ ಸಹಜವಾಗಿ ಇರಬೇಕು. ಭಾರತದಲ್ಲಿ ಗುರುಪರಂಪರೆಗೆ ಮಹತ್ವಪೂರ್ಣವಾದ ಅರ್ಥವಿದೆ. ಗುರು ಒಲಿದು ಪಾದವಿಟ್ಟ ಜಾಗ ಸುಕ್ಷೇತ್ರ, ಜಲ ಪಾವನತೀರ್ಥ ಎಂದು ಮೈಲಾರ ಬಸವಲಿಂಗ ಶರಣರು ಹೇಳಿದ್ದಾರೆ. ಆಲಹಳ್ಳಿ ಶ್ರೀಮಠ ಶ್ರೀ ಗುರುಮಲ್ಲೇಶ್ವರರಿಂದ ಸ್ಥಾಪನೆಗೊಂಡಿತು. ಶ್ರೀ ಬಸಪ್ಪ ಸ್ವಾಮಿಗಳು ಮತ್ತು ಶ್ರೀ ಶಿವಕುಮಾರ ಸ್ವಾಮಿಗಳು ಭಕ್ತಿ ಮತ್ತು ಸದ್ವಿಚಾರಗಳ ಮೂಲಕ ಭಕ್ತರನ್ನು ಜಾಗೃತಗೊಳಿಸಿದರು. ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ವಚನದಂತೆ ನಡೆದವರು ಶ್ರೀ ಶಿವಕುಮಾರ ಸ್ವಾಮಿಗಳು. ಸಮಾಜದ ಎಲ್ಲರ ಬಗ್ಗೆಯೂ ಅಪಾರ ಪ್ರೀತಿ, ವಿಶ್ವಾಸಗಳನ್ನು ಹೊಂದಿದ್ದರು. ಅದೇ ರೀತಿ ನೂತನ ಶ್ರೀಗಳಾದ ಶ್ರೀ ಇಮ್ಮಡಿ ಬಸಪ್ಪ ಸ್ವಾಮಿಗಳಿಗೆ ಗ್ರಾಮಸ್ಥರು ಮತ್ತು ಭಕ್ತರು ಸಹಾಯ ಸಹಕಾರ ನೀಡುತ್ತಾ ಶ್ರೀಮಠದ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು ಎಂದು ಹೇಳಿದರು.

ದೇವನೂರು ಮಠದ ಶ್ರೀ ಮಹಾಂತ ಸ್ವಾಮಿಗಳು ಮನುಷ್ಯನ ನಡೆ–ನುಡಿ ಆತನ ಗುಣ ಸ್ವಭಾವಗಳನ್ನು ಸೂಚಿಸುತ್ತದೆ. ಜೀವನದಲ್ಲಿ ನಡೆ ಮತ್ತು ನುಡಿ ಎರಡೂ ಒಂದೇ ಆಗಿರಬೇಕು ಎಂದು ಹೇಳಿದರು. ಕನಕಪುರ ಶ್ರೀ ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮಿಗಳು ಅನೇಕ ವರ್ಷಗಳ ಕಾಲ ಶ್ರೀ ಶಿವಕುಮಾರ ಸ್ವಾಮಿಗಳು ಸಮಾಜಕ್ಕೆ ಸೇವೆಯನ್ನು ಸಲ್ಲಿಸಿದ ಫಲವಾಗಿ ಶ್ರೀಮಠ ಅಪಾರವಾದ ಭಕ್ತರನ್ನು ಹೊಂದಿದೆ. ಹೃದಯ ಶ್ರೀಮಂತಿಕೆಯುಳ್ಳವರಾಗಿದ್ದ ಶ್ರೀಗಳ ಸೇವೆ ಸ್ಮರಣೀಯವಾದುದು ಎಂದು ಹೇಳಿದರು. ಶ್ರೀ ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಜೀವನ ಎಷ್ಟು ವಿಸ್ತಾರವಾಗಿದೆ ಎಂಬುದು ಮುಖ್ಯವಲ್ಲ, ಏನು ಸಾಧನೆ ಮಾಡಿದ್ದೇವೆ ಎಂಬುದು ಮುಖ್ಯ ಎಂದು ಅಬ್ರಾಹಂ ಲಿಂಕನ್‌ರವರು ಹೇಳಿದ್ದಾರೆ. ಜೀವನದಲ್ಲಿ ಏನೇ ಕಷ್ಟಗಳು ಬಂದರೂ ಅವನ್ನು ಎದುರಿಸುವ ಶಕ್ತಿ ನಮ್ಮಲ್ಲಿರಬೇಕು. ಶ್ರೀ ಶಿವಕುಮಾರ ಸ್ವಾಮಿಗಳು ಮಠವನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ಭಕ್ತರೊಂದಿಗೆ ಅತ್ಯಂತ ನಿಕಟವಾದ ಬಾಂಧವ್ಯವನ್ನು ಹೊಂದಿದ್ದರು ಎಂದು ತಿಳಿಸಿದರು. ಸೋಮಹಳ್ಳಿಯ ಶ್ರೀ ಸಿದ್ಧಮಲ್ಲ ಸ್ವಾಮಿಗಳವರು ಶ್ರೀ ನಾಗೇಂದ್ರಸ್ವಾಮಿ ಎಂಬ ವಟುವಿಗೆ ಷಟ್‌ಸ್ಥಲ ಬ್ರಹ್ಮೋದೇಶಪೂರ್ವಕ ವಿಧ್ಯುಕ್ತವಾಗಿ ಅನುಗ್ರಹಿಸಿ ಷ.ಬ್ರ. ಶ್ರೀ ಇಮ್ಮಡಿ ಬಸಪ್ಪ ಸ್ವಾಮಿಗಳು ಎಂಬ ನೂತನ ಅಭಿದಾನವನ್ನಿತ್ತು ಆಶೀರ್ವದಿಸಿದರು. ಕುದೇರು ಮಠ, ಮಲ್ಲನಮೂಲೆ, ಸಾಲೂರು ಮಠ, ಬೆಟ್ಟದಪುರದ ಶ್ರೀಗಳು ಮಾತನಾಡಿ ಶ್ರೀ ಶಿವಕುಮಾರ ಸ್ವಾಮಿಗಳು ಶ್ರೀಮಠಕ್ಕೆ ಏನೇ ಬಂದರೂ ದಾನದ ರೂಪದಲ್ಲಿ ಸಮಾಜಕ್ಕೆ ಹಿಂತಿರುಗಿಸುತ್ತಿದ್ದರು. ಅಪಾರವಾದ

ಜ್ಯೋತಿಷ್ಯ ಜ್ಞಾನವನ್ನು ಹೊಂದಿದ್ದರು. ಮೃದು ಸ್ವಭಾವದವರಾಗಿದ್ದರು. ಸದಾ ಭಕ್ತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು ಎಂದು ಹೇಳಿದರು.

ಮಠಾಧಿಪತಿಗಳು, ಹರಗುರು ಚರಮೂರ್ತಿಗಳು, ಗ್ರಾಮಸ್ಥರು, ಶ್ರೀಮಠದ ಭಕ್ತಾದಿಗಳು ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಶ್ರೀ ಆರ್. ಮಹದೇವಪ್ಪ ಪ್ರಾರ್ಥಿಸಿದರು. ಶ್ರೀ ತೋಂಟೇಶ್ ಸ್ವಾಗತಿಸಿದರು. ಶ್ರೀಮತಿ ರೂಪಾ ತೋಂಟೇಶ್ ಕಾರ್ಯಕ್ರಮ ನಿರೂಪಿಸಿದರು.

**ಸತ್ಸಂಗದಿಂದ ಉನ್ನತಿ**

ಸತ್ಸಂಗದಿಂದ ಮಾನವನ ಉನ್ನತಿ ಸಾಧ್ಯವಾದರೆ ದುಸ್ಸಂಗದಿಂದ ಅವನತಿಯಾಗುತ್ತದೆ ಎಂದು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಅಕ್ಟೋಬರ್ 8ರಂದು ಸತ್ಸಂಗದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು.

ಎಲ್ಲೋ ಹುಟ್ಟುವ ನದಿಗಳು ಹರಿಯುವ ಪ್ರದೇಶವನ್ನೆಲ್ಲ ಹಸಿರುಗೊಳಿಸಿ ನಾಡನ್ನೆಲ್ಲಾ ಸಮೃದ್ಧಗೊಳಿಸಿ ಸಾಗರ ಸೇರುತ್ತವೆ. ನದಿಗಳ ನೀರು ಜೀವಸಂಕುಲಕ್ಕೆಲ್ಲಾ ಯಾವುದೇ ಬೇಧ ಭಾವವಿಲ್ಲದೆ ಉಪಯೋಗವಾಗುವಂತೆ ಮಠಗಳು ಜನಕಲ್ಯಾಣಕ್ಕೆ ಉಪಯೋಗ ವಾಗುತ್ತಿವೆ. ಮಠಗಳು ನದಿಗಳಂತೆಯೇ ಎಲ್ಲವನ್ನೂ ಪವಿತ್ರಗೊಳಿಸುತ್ತವೆ. ಎಲ್ಲಾ ಜನರ ಬದುಕನ್ನು ಹಸನುಗೊಳಿಸುವುದೇ ಮಠಗಳ ಗುರಿಯಾಗಿದೆ. ಮಠಗಳೆಂದರೆ ದೊಡ್ಡ ದೊಡ್ಡ ಕಟ್ಟಡಗಳಷ್ಟೇ ಅಲ್ಲ. ಕಾಲಕಾಲಕ್ಕೆ ತಕ್ಕಂತೆ ಅನ್ನ, ಅಕ್ಷರ, ಆಧ್ಯಾತ್ಮವನ್ನು ಧಾರೆ ಎರೆಯುತ್ತ ಎಲ್ಲರಿಗೂ ಜ್ಞಾನವನ್ನು ನೀಡುತ್ತವೆ. ಈ ಭಾಗದಲ್ಲಿ ಹರಿಯುವ ಕಾವೇರಿ ಮತ್ತು ಕಪಿಲಾ ನದಿಗಳಂತೆ ಶ್ರೀ ಸುತ್ತೂರು ಮಠ ಹಾಗೂ ಶ್ರೀ ರಾಘವೇಂದ್ರ ಸ್ವಾಮಿ ಮಠಗಳು ಸಮೃದ್ಧ ನಾಡನ್ನು ಕಟ್ಟಿ ಬೆಳೆಸುವಲ್ಲಿ ಪರಸ್ಪರ ಒಂದಾಗಿ ಸಾಗುತ್ತಿವೆ ಎಂದು ನುಡಿದರು.

ಪರಮಪೂಜ್ಯ ಜಗದ್ಗುರುಗಳವರು ಮಂತ್ರಾಲಯದ ಮೂಲ ಬೇರು ನಂಜನಗೂಡಿನಲ್ಲಿದೆ. ಜನರ ಮನಸ್ಸಿನಲ್ಲಿ ಸ್ಥಿರ ಹಾಗೂ ವಿಶೇಷವಾದ ಪ್ರಭಾವ ಬೀರಿದಂತವರು ಪೂಜ್ಯ ಶ್ರೀ ರಾಘವೇಂದ್ರ ಸ್ವಾಮಿಗಳವರು. ಧಾರ್ಮಿಕವಾಗಿ ತನ್ನ ಬದುಕನ್ನ ಸುಧಾರಿಸಿಕೊಳ್ಳಲು ಮನುಷ್ಯ ಪ್ರಯತ್ನಶೀಲನಾಗಬೇಕೆನ್ನುವುದಕ್ಕೆ ಶ್ರೀಗಳು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಮಠ ದೊಡ್ಡದಿದ್ದರೂ, ಮಾನವೀಯ ಸಂಬಂಧಗಳನ್ನು ರೂಢಿಸಿಕೊಂಡು ಅತ್ಯಂತ ಸರಳ–ಸಜ್ಜನಿಕೆಯ ರೂಪದಂತಿದ್ದಾರೆ ಎಂದು ನುಡಿದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಬಹುಮಾನವನ್ನು ಪ್ರಾಯೋಜಿಸಿದ್ದ ಬೆಂಗಳೂರಿನ ಡಿ.ಸಿ.ಎಕ್ಸ್ ಸಿಸ್ಟಮ್ಸ್ ಲಿಮಿಟೆಡ್‌ನ ಉದ್ಯಮಿಗಳಾದ ಡಾ. ಹೆಚ್.ಎಸ್. ರಾಘವೇಂದ್ರರಾವ್‌ರವರು, ಸುತ್ತೂರು ಮಠದ ವಿದ್ಯಾರ್ಥಿಯಾಗಿದ್ದ ನಾನು ನನ್ನ ಹೆತ್ತವರು ಕಂಡ ಕನಸನ್ನು ನನಸು ಮಾಡಲು ಸಾಧ್ಯವಾಗಿರುವುದಕ್ಕೆ ಸಂತಸವಾಗುತ್ತಿದೆ. ಸುತ್ತೂರು ಶಾಲೆಯಲ್ಲಿ ಕಲಿಯುವುದೇ ಒಂದು ಪುಣ್ಯ ಎಂದು ಹೇಳಿದರು.

ವಿಶ್ವವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್‌ರವರು ಮರಗಳು ಹೇಗೆ ಬಯಸಿ ಬಂದವರಿಗೆ ನೆರಳು, ಆಶ್ರಯ ನೀಡುತ್ತವೆಯೋ ಹಾಗೆಯೇ ಮಠಗಳು ಸಹ ಯಾವುದೇ ಬೇಧ-ಭಾವ ಎಣಿಸದೆ ಎಲ್ಲರನ್ನು ಸಮಾನ ದೃಷ್ಟಿಯಲ್ಲಿ ನೋಡುತ್ತವೆ. ಸುತ್ತೂರು ಮತ್ತು ಮಂತ್ರಾಲಯ ಮಠಗಳು ಜಾತ್ಯಾತೀತವಾಗಿ ಎಲ್ಲರಿಗೂ ಆಶ್ರಯ ನೀಡುತ್ತಿವೆ. ಮರ ಎಂಬ ಪದದಲ್ಲಿ ರ ಅಕ್ಷರದ ಒಳಗೆ ಒಂದು ಚುಕ್ಕೆ ಹಾಕಿದರೆ, ಮಠ ಎಂದಾಗುತ್ತದೆ. ಮಠಕ್ಕೆ ನಾಯಕತ್ವ ಕೊಡುವಂಥದ್ದು ಗುರುತರ ಜವಾಬ್ದಾರಿ. ಮಠಗಳಿಗೆ ಘನತೆ ಗೌರವ, ಸಂಪ್ರದಾಯವನ್ನು ಎತ್ತರಿಸಿದಂತವರು ಈ ಪೀಠದ್ವಯರು. ಸುತ್ತೂರಿಗೆ ಬಂದರೆ ನನಗೆ ತವರಿಗೆ ಬಂದಂಥಾಗುತ್ತದೆ. ಮಾನವೀಯ ಮೌಲ್ಯಗಳನ್ನು ಮೆರೆಯುವ ಈ ಮಠಗಳು ಉದಾತ್ತತೆಯನ್ನು ಅನುಸರಿಸುತ್ತಿವೆ. ಸಮಾಜದ ಕಣ್ತೆರೆಸುವ ಮಹತ್ತರ ಕಾರ್ಯ ಇಲ್ಲಿ ನಡೆದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಸುತ್ತೂರಿನ ಉಚಿತ ವಸತಿ ಶಾಲೆಯಲ್ಲಿ ವಿವಿಧ ವಿಷಯಗಳಲ್ಲಿ ವಿಶೇಷ ಸಾಧನೆ ಮಾಡಿದ 56 ವಿದ್ಯಾರ್ಥಿಗಳಿಗೆ ಡಾ. ಹೆಚ್.ಎಸ್. ರಾಘವೇಂದ್ರರಾವ್ ರವರು ನೀಡಿದ ಪ್ರತಿಭಾ ಪುರಸ್ಕಾರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮಂತ್ರಾಲಯ, ಶ್ರೀ ಸುತ್ತೂರು ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಆಡಳಿತವರ್ಗದವರು, ಅಧಿಕಾರಿಗಳು, ಸುತ್ತೂರು ಹಾಗೂ ಸುತ್ತಮುತ್ತಲ ಗ್ರಾಮಗಳ ಭಕ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ನಿವೃತ್ತ ಪ್ರಾಂಶುಪಾಲರು ಹಾಗೂ ಖ್ಯಾತ ವಾಗ್ಮಿಗಳಾದ ಪ್ರೊ. ಎಂ. ಕೃಷ್ಣೇಗೌಡರವರು ಸ್ವಾಗತಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ಮ.ಗು. ಬಸವಣ್ಣ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪಟ್ಟಿ ಮಂಡಿಸಿದರು. ಶ್ರೀ ಜಿ.ಎಲ್. ತ್ರಿಪುರಾಂತಕ ಕಾರ್ಯಕ್ರಮ ನಿರೂಪಿಸಿ, ವಂದನೆ ಸಲ್ಲಿಸಿದರು.

**ಸಮಾಜಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟಿದ್ದ ರಾಜೇಂದ್ರ ಶ್ರೀಗಳು**

ರಾಜೇಂದ್ರ ಶ್ರೀಗಳು ಸಮಾಜಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟಿದ್ದರು ಎಂದು ಶ್ರೀ ಸುತ್ತೂರು ಮಠದ ಪರಮಪೂಜ್ಯ ಜಗದ್ಗುರುಗಳು ಅಕ್ಟೋಬರ್ 13ರಂದು ಸಾಲಿಗ್ರಾಮ ತಾಲ್ಲೂಕು ಭೇರ್ಯದಲ್ಲಿ ಮೈಸೂರು-ಚಾಮರಾಜನಗರ ಜಿಲ್ಲಾ ವೀರಶೈವ-

ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಆಯೋಜಿಸಿದ್ದ ರಾಜೇಂದ್ರ ಶ್ರೀಗಳವರ 109ನೇ ಜಯಂತಿ ಮತ್ತು ಪ್ರತಿಭಾ ಪುರಸ್ಕಾರ ಹಾಗೂ ದೀಕ್ಷಾ ಸಂಸ್ಕಾರದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ರಾಜೇಂದ್ರ ಶ್ರೀಗಳದು ಸದಾ ಸಮಾಜದ ಕಷ್ಟಕ್ಕೆ ಸ್ಪಂದಿಸುವ ಹೃದಯ ವೈಶಾಲ್ಯತೆ. 1960 ದಶಕದಲ್ಲಿಯೇ ಕೆ.ಆರ್. ನಗರ ಸೇರಿದಂತೆ ಹಲವಾರು ಕಡೆಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ರಾಜೇಂದ್ರ ಶ್ರೀಗಳು ಮತ್ತು ಸಿದ್ಧಗಂಗೆಯ ಶ್ರೀ ಶಿವಕುಮಾರ ಶ್ರೀಗಳು ಎರಡು ದೇಹ ಒಂದೇ ಆತ್ಮ ಎಂಬಂತೆ ಬದುಕಿದವರು. ಸಮಾಜ ಯಾವ ರೀತಿಯಲ್ಲಿ ಸಾಗಬೇಕು ಎಂಬುದಕ್ಕೆ ಮಾರ್ಗದರ್ಶನ ಮಾಡುತ್ತಿದ್ದರು. ರಾಜೇಂದ್ರ ಶ್ರೀಗಳದ್ದು ವಿಶೇಷವಾದ ವ್ಯಕ್ತಿತ್ವ. ಅವರ ಸನಿಹಕ್ಕೆ ಬಂದವರೆಲ್ಲರೂ ಪವಿತ್ರವಾದ ಆಧ್ಯಾತ್ಮದ ಅನುಭೂತಿಯನ್ನು ಅನುಭವಿಸುತ್ತಿದ್ದರು. ರಾಷ್ಟ್ರಕವಿ ಕುವೆಂಪುರವರು ಶ್ರೀಗಳ ಪಟ್ಟಾಧಿಕಾರ ಸುವರ್ಣ ಮಹೋತ್ಸವದಲ್ಲಿ ಭಾಗವಹಿಸಿ ಪೂಜ್ಯರ ಕುರಿತಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಎಲ್ಲಿ ಜ್ಞಾನವಿರುತ್ತದೆಯೊ ಅಲ್ಲಿ ಅಜ್ಞಾನಕ್ಕೆ ಜಾಗವಿಲ್ಲ. ಮಠಾಧಿಪತಿಗಳ ಗೋಷ್ಠಿಯಿಂದ ಪ್ರತಿಭಾ ಪುರಸ್ಕಾರ, ಸಾಮೂಹಿಕ ವಿವಾಹಗಳಂತಹ ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು ಈ ದೇಶಕ್ಕೆ ಆಧ್ಯಾತ್ಮವೇ ಭದ್ರ ಬುನಾದಿ. ಹೀಗಾಗಿಯೇ ಎಂತೆಂತಹ ದಾಳಿಗಳು ನಡೆದರು ಭಾರತವನ್ನು ನಾಶ ಮಾಡಲು ಸಾಧ್ಯವಾಗಿಲ್ಲ. ಆಧುನಿಕ ಶಿಕ್ಷಣ ಪದ್ಧತಿಯಿಂದ ದೇಶದಲ್ಲಿ ಹಲವಾರು ಬದಲಾವಣೆಗಳಾದವು. ಆಧ್ಯಾತ್ಮದೊಂದಿಗೆ ಶಿಕ್ಷಣದ ಬೇರುಗಳು ಗಟ್ಟಿಯಾಗಲು ಮಠಮಾನ್ಯಗಳು ಕಾರಣವಾದವು. ಅದರಲ್ಲಿ ಕರ್ನಾಟಕದ ಸುತ್ತೂರು ಮತ್ತು ಸಿದ್ಧಗಂಗಾ ಮಠಗಳು ಕಲಶಪ್ರಾಯವಾಗಿ ನಿಂತಿವೆ. ಎರಡೂ ಮಠಕ್ಕೂ ಅತ್ಯಂತ ಅವಿನಾಭಾವ ಸಂಬಂಧವಿದೆ. ಜಗವೆಲ್ಲ ನಗುತಿರಲಿ, ಜಗದಳಿವು ನನಗಿರಲಿ ಎಂಬಂತೆ ಬಾಳಿದವರು ರಾಜೇಂದ್ರ ಶ್ರೀಗಳು. ಬೆರಳೆಣಿಕೆಯ ವಿದ್ಯಾರ್ಥಿಗಳಿಂದ ಆರಂಭವಾದ ಸಂಸ್ಥೆ ಇಂದು ಬೃಹತ್ ಆಲದಮರವಾಗಿ ಬೆಳೆದು ನಿಂತಿದೆ. ಜಗತ್ತಿನಲ್ಲಿ ಏನನ್ನಾದರೂ ಬದಲಾಯಿಸಲು ಸಾಧ್ಯವಿದ್ದರೆ ಅದು ಶಿಕ್ಷಣದಿಂದ ಮಾತ್ರ ಎಂಬುದನ್ನು ಪೂಜ್ಯರು ಅರಿತಿದ್ದರು ಎಂದು ತಿಳಿಸಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಅಡಗೂರು ಎಚ್. ವಿಶ್ವನಾಥ್‌ರವರು ಸಮಾಜದಲ್ಲಿ ಹೇಗೆ ಬದುಕಬೇಕು ಎಂದು ನನ್ನಂತಹ ಅನೇಕರಿಗೆ ಸುತ್ತೂರು ಶ್ರೀಮಠ ಕಲಿಸಿಕೊಟ್ಟಿದೆ. ರಾಜೇಂದ್ರ ಶ್ರೀಗಳನ್ನು ನೆನೆಯುವುದೇ ನಮಗೆ ಸೌಭಾಗ್ಯ. ಇಂದು ಸುತ್ತೂರು ಶ್ರೀಗಳು ಶ್ರೀಮಠದ ಕೀರ್ತಿಯನ್ನು ಜಗದ್ವ್ಯಾಪಿಗೊಳಿಸಿದ್ದಾರೆ ಎಂದರು. ಶಾಸಕರಾದ ಶ್ರೀ ಡಿ. ರವಿಶಂಕರ್‌ರವರು ರಾಜೇಂದ್ರ ಶ್ರೀಗಳು ಸಮಾಜಕ್ಕೆ ಅನೇಕ

ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ವಿದೇಶಗಳಲ್ಲೂ ಇಂದು ಶ್ರೀಮಠದ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿ. ಇದೆಲ್ಲದಕ್ಕೂ ರಾಜೇಂದ್ರ ಶ್ರೀಗಳ ಕೃಪಾಶೀರ್ವಾದವೇ ಕಾರಣ. ಸಮಾಜ ಸರಿಯಾದ ಹಾದಿಯಲ್ಲಿ ನಡೆಯಲು ಮಠಗಳ ಮಾರ್ಗದರ್ಶನ ಬಹಳ ಮುಖ್ಯ ಎಂದು ತಿಳಿಸಿದರು. ಮುಡಿಗುಂಡ ಶ್ರೀಗಳು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಬೆಟ್ಟದಪುರ ಮತ್ತು ಕರ್ಪೂರವಳ್ಳಿ ಮಠಗಳ ಶ್ರೀಗಳು ರಾಜೇಂದ್ರ ಶ್ರೀಗಳವರ ಸೇವಾಕಾರ್ಯಗಳನ್ನು ಸ್ಮರಿಸಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಪಡೆದ 76 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಪ್ರಾತಃಕಾಲದಲ್ಲಿ 150 ಮಂದಿ ದೀಕ್ಷಾ ಸಂಸ್ಕಾರ ಪಡೆದುಕೊಂಡರು.

ಇದೇ ಸಂದರ್ಭದಲ್ಲಿ ಕರ್ಪೂರವಳ್ಳಿ ಶ್ರೀ ಜಂಗಮ ಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಗೋಷ್ಠಿಯಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಒಂದು ಲಕ್ಷದ ಎಂಟು ಸಾವಿರ ರೂ.ಗಳನ್ನು ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿಗೆ ಒಂದು ಲಕ್ಷದ ಎಂಟು ಸಾವಿರ ರೂ.ಗಳನ್ನು ನೀಡುವುದಾಗಿ ಪ್ರಕಟಿಸಿದರು.

ಅಂಕನಹಳ್ಳಿ ಶ್ರೀಗಳು ಪ್ರಾರ್ಥಿಸಿದರು. ಎಲೆಮುದ್ದನಹಳ್ಳಿ ಶ್ರೀಗಳು ಸ್ವಾಗತಿಸಿದರು. ಹರವೆ ಶ್ರೀಗಳು ಕಾರ್ಯಕ್ರಮ ನಿರೂಪಿಸಿದರು. ಅರಕೆರೆ ಶ್ರೀಗಳು ವಂದಿಸಿದರು.

## ಮೌಲ್ಯಾಧಾರಿತ ಜೀವನ ನಡೆಸಿದವರು ಡಾ. ಲೀಲಾದೇವಿ ಪ್ರಸಾದ್

ಮಾಜಿ ಸಚಿವರಾದ ಡಾ. ಲೀಲಾದೇವಿ ಆರ್. ಪ್ರಸಾದ್‌ರವರು ಮೌಲ್ಯಾಧಾರಿತ ಜೀವನ ನಡೆಸಿದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಬಸವ ಸಮಿತಿ ಮತ್ತು ಕದಳಿ ಮಹಿಳಾ ವೇದಿಕೆಯಿಂದ ಅಕ್ಟೋಬರ್ 17ರಂದು ಆಯೋಜಿಸಿದ್ದ ಡಾ. ಲೀಲಾದೇವಿ ಆರ್. ಪ್ರಸಾದ್–92 'ಸಾರ್ಥಕ ಬದುಕಿನ ಸುಂದರ ಪಯಣ' ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸುಸಂಸ್ಕೃತ ಕುಟುಂಬದಲ್ಲಿ ಜನಿಸಿ ಉತ್ತಮ ಆದರ್ಶಗಳನ್ನು ರೂಢಿಸಿಕೊಂಡವರು ಲೀಲಾದೇವಿ ಪ್ರಸಾದ್. ಬಡತನದಂತಹ ಸಮಸ್ಯೆಗಳನ್ನು ಅನುಭವಿಸಿಯೂ ತೃಪ್ತಿ ಮತ್ತು ಸಂತೋಷದ ಜೀವನ ಸಾಗಿಸಿದವರು. ಅಕ್ಕಮಹಾದೇವಿಯ ಜನ್ಮಸ್ಥಳ ಉಡುತಡಿಯನ್ನು ಪ್ರವಾಸಿ ಸ್ಥಳವಾಗಿಸಲು ಅಲ್ಲಿಂದ ಕದಳಿಯವರೆಗೆ ಯಾತ್ರೆಯನ್ನು ಮಾಡಿದರು. ವಿಜಯಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕನ ಹೆಸರಿಡಲು ಪ್ರಮುಖ ಕಾರಣರಲ್ಲಿ ಒಬ್ಬರು. ರಾಜಕೀಯದಲ್ಲಿಯೂ ಶಿಸ್ತು ಮತ್ತು ಸಾರ್ಥಕವಾದ ಜೀವನವನ್ನು ಸಾಗಿಸಿದ್ದಾರೆ ಎಂದು ಹೇಳಿದರು.

ವಿಧಾನಪರಿಷತ್ತಿನ ಮಾಜಿ ಸಭಾಪತಿಗಳಾದ ಡಾ. ಬಿ.ಎಲ್. ಶಂಕರ್‌ರವರು ಲೀಲಾದೇವಿ ಪ್ರಸಾದ್‌ರವರದು ವಿಶಾಲವಾದ ವ್ಯಕ್ತಿತ್ವ. ಕರ್ನಾಟಕದ ರಾಜಕೀಯದಲ್ಲಿ ಅನೇಕ ಏರುಪೇರುಗಾಳದರೂ ಸ್ಥಿತಪ್ರಜ್ಞರಾಗಿದ್ದವರು. ಅವರ ಹೋರಾಟ ಮತ್ತು ಸಾಮರ್ಥ್ಯಕ್ಕೆ ತಕ್ಕ ಸ್ಥಾನಮಾನಗಳು ಅವರಿಗೆ ದೊರೆಯಲಿಲ್ಲ. ಇಂದು ಸಮಾಜವನ್ನು ಮಾತಿನ ಮಾಲಿನ್ಯ ಆವರಿಸಿಕೊಂಡಿದೆ. ಇಂದಿನ ವ್ಯವಸ್ಥೆಯ ಮಧ್ಯೆ ಯಾವುದಕ್ಕೂ ಬಲಿಯಾಗದೇ ನಿರಂತರವಾದ ಹೋರಾಟ ಮಾಡಬೇಕಾಗಿದೆ ಎಂದು ತಿಳಿಸಿದರು.

ಮಾಜಿ ಸಚಿವರಾದ ಡಾ. ಲೀಲಾದೇವಿ ಆರ್. ಪ್ರಸಾದ್‌ರವರು ಪ್ರತಿಯೊಬ್ಬರಿಗೂ ಹೆತ್ತವರು, ಭೂಮಿ ಮತ್ತು ಸಮಾಜದ ಋಣವನ್ನು ತೀರಿಸಲು ಸಾಧ್ಯವಿಲ್ಲ. ಕೆಳಗೆ ಬಿದ್ದವರನ್ನು ಮೇಲಕ್ಕೆ ಎತ್ತುವ ಮೂಲಕ ಸಮಾಜಮುಖಿಯಾಗಿ ಬಾಳಬೇಕು. ಪ್ರಸ್ತುತ ದಿನಗಳಲ್ಲಿ ಮಹಿಳೆಯರಿಗೆ ರಕ್ಷಣೆ ಮತ್ತು ಸ್ವಾತಂತ್ರ್ಯ ಇಲ್ಲದಂತಾಗಿದೆ. ಮಕ್ಕಳಿಗೆ ವಿದ್ಯಾಲಯದ ಶಿಕ್ಷಣಕ್ಕಿಂತ ಬದುಕಿನ ಶಿಕ್ಷಣ ಬಹಳ ಮುಖ್ಯ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಡಾ. ಲೀಲಾದೇವಿಯವರ ಆತ್ಮಕಥೆ 'ಕಾಡಿ ಬೇಡದ ಬುತ್ತಿ' ಕೃತಿಯನ್ನು ಅನಾವರಣಗೊಳಿಸಲಾಯಿತು. ಮೋಟಗಿ ಮಠದ ಶ್ರೀಗಳು, ಡಾ. ಅರವಿಂದ ಜತ್ತಿ, ಡಾ. ಸಿ. ಸೋಮಶೇಖರ್, ಶ್ರೀಮತಿ ಸುಶೀಲಮ್ಮ, ಶ್ರೀಮತಿ ಪ್ರತಿಭಾ ನಾರಾಯಣ್‌ರವರುಗಳು ಲೀಲಾದೇವಿಯವರ ಕುರಿತು ಮಾತನಾಡಿದರು.

ಶ್ರೀ ಹೇಮಾ ಪ್ರಸಾದ್ ಪ್ರಾರ್ಥಿಸಿದರು. ಶ್ರೀಮತಿ ಪ್ರೇಮಾ ಸೋಮಸುಂದರ್ ಸ್ವಾಗತಿಸಿದರು. ಶ್ರೀ ಕೆ.ವಿ. ನಾಗರಾಜಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ದಯಾನಂದ ಪಾಟೀಲ್ ವಂದಿಸಿದರು. ಶ್ರೀಮತಿ ಪ್ರಮೀಳಾ ಫಾಲನೇತ್ರ ಕಾರ್ಯಕ್ರಮ ನಿರೂಪಿಸಿದರು.

**ಸಾಂಸ್ಕೃತಿಕ ಮೌಲ್ಯ ಉಳಿಸಿಕೊಂಡು ಜನರ ಒಳಗಣ್ಣು ತೆರೆಸಬೇಕು**

ನಾಡಿನ ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿಕೊಂಡು ಜನರ ಒಳಗಣ್ಣನ್ನು ತೆರೆಸಬೇಕು ಎಂದು ಕವಿ ಹಾಗೂ ನಾಟಕಕಾರರಾದ ಪ್ರೊ. ಎಚ್.ಎಸ್. ಶಿವಪ್ರಕಾಶ್‌ರವರು ಅಕ್ಟೋಬರ್ 20ರಂದು ಮೈಸೂರು ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಪ್ರೊ. ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ ಮತ್ತು ಸಂವಹನ ಪ್ರಕಾಶನ ವತಿಯಿಂದ ಆಯೋಜಿಸಿದ್ದ 'ಮಲೆಯೂರು ಮಂದಾರ' ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತಾ ತಿಳಿಸಿದರು. ಜಗತ್ತು ಬದಲಾಗುತ್ತಿದ್ದು, ಮೌಲ್ಯಗಳು ವಿನಾಶವಾಗುತ್ತಿವೆ. ಬಂಡವಾಳ ಹೆಚ್ಚಾದ ಹಾಗೇ ಮನುಷ್ಯನು ಕಾಣುವ ಜಗತ್ತನ್ನು ಬಿಟ್ಟು ಕಾಣದ ಜಗತ್ತನ್ನು ತೋರಿಸಲಾಗುತ್ತಿದೆ. ಇಂದು ಶಿಕ್ಷಣ ಕೂಡ ಉದ್ಯಮೀಕರಣವಾಗಿ ಎಲ್ಲವನ್ನು ನಾಶ ಮಾಡುತ್ತಿದೆ. ಇದರ ನಡುವೆ ಅಧ್ಯಾತ್ಮಿಕ ಮೌಲ್ಯಗಳನ್ನು ಉಳಿಸಿಕೊಳ್ಳಬೇಕು. ಹಿಂದೆ

ಮನುಷ್ಯರಲ್ಲಿ ಬಹಳಷ್ಟು ಮಂದಿ ಯೋಗ್ಯರಿದ್ದರು. ಇವತ್ತಿನ ವೈದ್ಯಕೀಯ ಕ್ಷೇತ್ರದಲ್ಲಿ ಬದಲಾವಣೆಯಾಗಿದೆ. ಆದರೆ ಪ್ರಯೋಜನಕಾರಿ ಆಗಿಲ್ಲ. ಮಲೆಯೂರು ಗುರುಸ್ವಾಮಿ ಅವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಛಾಪು ಮೂಡಿಸಿದ್ದಾರೆ. ಕಾಲೇಜಿನ ಪ್ರಾಧ್ಯಾಪಕರಾಗಿದ್ದ ವ್ಯಕ್ತಿ ಯಾವುದೇ ಪ್ರಚಾರವನ್ನೂ ಬಯಸದೇ ಇಷ್ಟೊಂದು ಕೆಲಸ ಮಾಡಿದ್ದಾರೆ ಎಂದು ಅವರು ಹೇಳಿದರು.

ವಿಮರ್ಶಕರಾದ ಡಾ. ಸಿ. ನಾಗಣ್ಣನವರು ಚಾಮರಾಜನಗರ ಜಿಲ್ಲೆ ಮತ್ತು ಸಾಹಿತ್ಯದ ಸಮಗ್ರ ಚಿತ್ರಣವನ್ನು ಮಲೆಯೂರು ಗುರುಸ್ವಾಮಿಯವರು ಕಟ್ಟಿಕೊಟ್ಟಿದ್ದಾರೆ. ಸತತ ಮೂರು ಬಾರಿ ಜಿಲ್ಲಾ ಕಸಾಪ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಕಪಿಲೆ ಹರಿದಳು ಕಡಲಿಗೆ, ಸಂಸ, ಬಂಗಾರದೊಡ್ಡಿ, ಸುವರ್ಣಾವತಿ ಸೇರಿದಂತೆ ಅನೇಕ ಕೃತಿಗಳನ್ನು ಹೊರ ತಂದಿದ್ದಾರೆ. ಅವರ 75 ವರ್ಷಗಳ ಜೀವನದಲ್ಲಿ ಸುಮಾರು 50 ವರ್ಷ ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು ಎಂದು ತಿಳಿಸಿದರು.

ಶ್ರೀ ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ 'ಮಲೆಯೂರು ಮಂದಾರ' ಕೃತಿ ಲೋಕಾರ್ಪಣೆಗೊಳಿಸಿದರು. ಶಾಸಕರಾದ ಶ್ರೀ ಎಚ್.ಎಂ. ಗಣೇಶ್‌ಪ್ರಸಾದ್, ಶ್ರೀಮತಿ ಜಯಂತಿ ಮಲೆಯೂರು ಗುರುಸ್ವಾಮಿ ಶ್ರೀ ಡಿ.ಎನ್. ಲೋಕಪ್ಪ, ಶ್ರೀ ಕಾನ್ಯ ಶಿವಮೂರ್ತಿ ಮೊದಲಾದವರು ಉಪಸ್ಥಿತರಿದ್ದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಎಂ. ಸುಗುಣ ಪ್ರಾರ್ಥಿಸಿದರು. ಶ್ರೀ ಕೆಬ್ಬೆಪುರ ರಾಜು ಸ್ವಾಗತಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಬಸವಣ್ಣನವರ ಕಾಯಕವೇ ಕೈಲಾಸ ತತ್ವದಡಿ ಸಾಗುತ್ತಿರುವ ಜೆಎಸ್‌ಎಸ್ ಸಂಸ್ಥೆ**

ಬಸವಣ್ಣನವರ ಕಾಯಕವೇ ಕೈಲಾಸ ತತ್ವದಡಿ ಜೆಎಸ್‌ಎಸ್ ಸಂಸ್ಥೆ ಸಾಗುತ್ತಿದೆ ಎಂದು ಗೌರವಾನ್ವಿತ ವಿಶ್ರಾಂತ ನ್ಯಾಯಮೂರ್ತಿಗಳು ಹಾಗೂ ಆಂಧ್ರಪ್ರದೇಶದ ಘನತೆವೆತ್ತ ರಾಜ್ಯಪಾಲರು ಆದ ಶ್ರೀ ಎಸ್. ಅಬ್ದುಲ್ ನಜೀರ್‌ರವರು ಅಕ್ಟೋಬರ್ 23ರಂದು ಜೆಎಸ್‌ಎಸ್ ಆಸ್ಪತ್ರೆಯ ಆವರಣದಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಲಯದ ಕಟ್ಟಡವನ್ನು ಉದ್ಘಾಟಿಸಿ ಮಾತನಾಡುತ್ತ ತಿಳಿಸಿದರು. ಜೆಎಸ್‌ಎಸ್ ಸಂಸ್ಥೆಯ ಕಾರ್ಯಕ್ರಮಕ್ಕೆ ನಾನು ಇದೇ ಪ್ರಥಮ ಬಾರಿಗೆ ಭೇಟಿ ನೀಡುತ್ತಿದ್ದೇನೆ ತುಂಬಾ ಸಂತೋಷವಾಗುತ್ತಿದೆ, ಇಂದು ಜೆಎಸ್‌ಎಸ್ ಸಂಸ್ಥೆಯ ಕಾರ್ಯಕ್ರಮಕ್ಕೆ ಆಗಮಿಸಿರುವುದು ಹಿಂದಿನ ಜನ್ಮದ ಪುಣ್ಯದ ಫಲ ಎಂದು ಭಾವಿಸುತ್ತೇನೆ.

ಇಂದು ಕಿತ್ತೂರು ರಾಣಿಚೆನ್ನಮ್ಮ ಜಯಂತಿ, ಅವರ ಕೆಲವಾದರೂ ಅಂಶಗಳನ್ನು ಅಳವಡಿಸಿಕೊಳ್ಳಿ ಎಂದು ಸಭೆಯಲ್ಲಿದ್ದ ಮಹಿಳೆಯರಿಗೆ ಕರೆ ನೀಡಿದರು. ಗುರುಗಳು, ಸ್ವಾಮೀಜಿಗಳು, ಪುಣ್ಯಕ್ಷೇತ್ರಗಳು ಮತ್ತು ತೀರ್ಥಕ್ಷೇತ್ರಗಳು ನಮಗೆ ದಾರಿ ದೀಪಗಳಾಗಿವೆ.

ಬಸವಣ್ಣನವರ ಕಾಯಕವೇ ಕೈಲಾಸ ಸಂದೇಶದ ಜೊತೆಗೆ ನನಗೆ ತುಂಬಾ ಇಷ್ಟವಾದ ವಚನ ಕಳಬೇಡ, ಕೊಲಬೇಡ, ಹುಸಿಯನುಡಿಯಲು ಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮದೇವರ ನೊಲಿಸುವ ಪರಿ, ಇದನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನ್ಯಾಯಾಲಯಗಳು ಮತ್ತು ಪೊಲೀಸ್ ಠಾಣೆಗಳ ಅವಶ್ಯಕತೆಯೇ ಇರುವುದಿಲ್ಲ.

ಜೆಎಸ್‌ಎಸ್ ಸಂಸ್ಥೆಯು ಶಿಕ್ಷಣ, ಆರೋಗ್ಯ, ಆಧ್ಯಾತ್ಮಿಕ ಮೊದಲಾದ ಕ್ಷೇತ್ರಗಳಲ್ಲಿ ದಾಸೋಹ ಸೇವೆ ಸಲ್ಲಿಸುತ್ತಿದೆ. ದೇಶ ವಿದೇಶಗಳಲ್ಲಿ 300ಕ್ಕೂ ಹೆಚ್ಚು ಸಂಸ್ಥೆಗಳನ್ನು ಸ್ಥಾಪಿಸಿ "ಮಾನವ ಸೇವೆಯೇ ಮಾದವ ಸೇವೆ" ಎಂಬಂತೆ ಸೇವೆಯಲ್ಲಿ ತೊಡಗಿಸಿಕೊಂಡಿದೆ. ಆಸ್ಪತ್ರೆಯ ಆವರಣದಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಲಯ ಕಟ್ಟಡ ಇಂದು ಉದ್ಘಾಟನೆಯಾಗಿದೆ. ಸಾರ್ವಜನಿಕರಿಗೆ 24 ಗಂಟೆಯು ವೈದ್ಯರಿಂದ ಗುಣಮಟ್ಟದ ಸೇವೆ ದೊರೆಯಲಿ ಎಂಬುದು ಪೂಜ್ಯ ಶ್ರೀಗಳ ಆಶಯವಾಗಿದೆ, ಪ್ರತಿಯೊಬ್ಬ ವ್ಯಕ್ತಿಯು ದೊಡ್ಡ ಕನಸು ಕಾಣಬೇಕು ಅದನ್ನು ಆತ್ಮವಿಶ್ವಾಸದಿಂದ ಸಾಧಿಸಬೇಕು ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳವರು ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಲಯ ಕಟ್ಟಡದ ಉದ್ಘಾಟನೆ ಶ್ರೀ ರಾಜೇಂದ್ರ ಶ್ರೀಗಳ ಜನ್ಮದಿನದಂದು ಆಗಬೇಕಾಗಿತ್ತು, ಆದರೆ ದೇವರ ಇಚ್ಛೆಯಂತೆ ಆಂಧ್ರ ಪ್ರದೇಶದ ರಾಜ್ಯಪಾಲರಿಂದ ಈ ಕಟ್ಟಡ ಉದ್ಘಾಟನೆಯಾಗಿದೆ, ಶ್ರೀ ಎಸ್. ಅಬ್ದುಲ್ ನಜೀರ್‌ರವರು ನಮ್ಮ ಕರ್ನಾಟಕದ ಮಂಗಳೂರಿನ ಮೂಡಬಿದಿರೆಯವರು, ಇವರು ಕರ್ನಾಟಕ ಹೈಕೋರ್ಟ್‌ನಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿರುವಾಗಲೇ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರಾಗಿ ನೇರವಾಗಿ ನೇಮಕಗೊಂಡದ್ದು ಒಂದು ವಿಶೇಷ. ಇವರು ಪ್ರತಿಭಾನ್ವಿತ ಮತ್ತು ದಕ್ಷ ನ್ಯಾಯಾಧೀಶರಾಗಿ ನಿಷ್ಪಕ್ಷಪಾತವಾಗಿ ತೀರ್ಪುಗಳನ್ನು ನೀಡಿದ್ದಾರೆ, ಅದರಲ್ಲಿ ತಲಾಕ್‌ಗೆ ಸಂಬಂಧಿಸಿದ ತೀರ್ಪು, ಆಧಾರ್ ಕಾರ್ಡ್ ಗೌಪ್ಯತೆ ರಕ್ಷಣೆಯ ತೀರ್ಪು ಹಾಗು ಅಯೋಧ್ಯೆ ರಾಮಮಂದಿರ ತೀರ್ಪುಗಳು ಮಹತ್ವವಾದವುಗಳಾಗಿವೆ. ಸುತ್ತೂರು ಗುರುಪರಂಪರೆಯ ಆಶೀರ್ವಾದ ಹಾಗೂ ರಾಜೇಂದ್ರ ಶ್ರೀಗಳ ದೂರದೃಷ್ಟಿಯಿಂದ ಜೆಎಸ್‌ಎಸ್ ಸಂಸ್ಥೆ ಬೆಳೆಯುತ್ತಿದೆ, ಇಲ್ಲಿ ನಾವು ನೆಪಮಾತ್ರ ಎಂದು ತಿಳಿಸಿದರು. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯು ನ್ಯಾಕ್ ಎ++ ಗ್ರೇಡ್ ಅನ್ನು ಪಡೆದಿದ್ದು, ಇದಕ್ಕಾಗಿ ಶ್ರಮಿಸಿದ ಎಲ್ಲರನ್ನು ಅಭಿನಂದಿಸಿ, ಉತ್ತಮ ಗುಣಮಟ್ಟದ ಶಿಕ್ಷಣ ಹೀಗೆಯೇ ನಿರಂತರ ಮುಂದುವರಿಸಿಕೊಂಡು ಹೋಗಲೆಂದು ಹಾರೈಸಿದರು.

ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು ಜೆಎಸ್‌ಎಸ್ ಸಂಸ್ಥೆ ಒಂದು ವಿಶ್ವಕೋಶದಂತಿದೆ. ಧಾರ್ಮಿಕವಾಗಿ ನಮ್ಮ ಮಠಗಳು, ಸ್ವಾಮೀಜಿಗಳು ಇಲ್ಲದಿದ್ದರೆ ನಮ್ಮ ದೇಶ ಶಿಕ್ಷಣ ಮತ್ತು ಅಭಿವೃದ್ಧಿಯಲ್ಲಿ ಹಲವಾರು ವರ್ಷ ಹಿಂದಿರುತ್ತಿತ್ತು. ಶ್ರೀ ಎಸ್. ಅಬ್ದುಲ್ ನಜೀರ್‌ರವರು ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದಾಗ ನ್ಯಾಯಯುತವಾದ ಮತ್ತು ಐತಿಹಾಸಿಕವಾದ ತೀರ್ಪುಗಳನ್ನು ನೀಡಿ ದೇಶ ಒಂದುಗೂಡುವಂತೆ ಮಾಡಿದ್ದಾರೆ ಎಂದು ತಿಳಿಸಿದರು.

ಕುಲಪತಿಗಳಾದ ಡಾ ಸುರೀಂದರ್ ಸಿಂಗ್, ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ನಿರ್ದೇಶಕರಾದ ಶ್ರೀ ಆರ್. ಮಹೇಶ್, ಕುಲಸಚಿವರಾದ ಡಾ. ಬಿ. ಮಂಜುನಾಥ್, ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಜೆಎಸ್‌ಎಸ್ ಎಹೆಚ್‌ಇಆರ್‌ನ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರು, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯರುಗಳು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿವರ್ಗದವರು ಪಾಲ್ಗೊಂಡಿದ್ದರು.

ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪನವರು ಸ್ವಾಗತಿಸಿದರು. ವೈದ್ಯಕೀಯ ಅಧೀಕ್ಷಕರಾದ ಡಾ. ಸಿ.ಪಿ. ಮಧುರವರು ವಂದಿಸಿದರು. ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಆರ್. ಸುಧೀಂದ್ರ ಭಟ್‌ರವರು ಕಾರ್ಯಕ್ರಮ ನಿರೂಪಿಸಿದರು.

❑

ಘನವಪ್ಪ ಬೋನವನು ಒಂದು ಅನುವಿನ ಪರಿಯಾಣದಲ್ಲಿ ಹಿಡಿದು
ಗುರುಲಿಂಗವಾರೋಗಣೆಯ ಮಾಡಿ ಮಿಕ್ಕುದು ಪ್ರಸಾದ
ಈ ತೆರೆದ ಘನವಪ್ಪ ಲಿಂಗವನು
ಒಂದನುವಿನಲ್ಲಿ ತಂದಿರಿಸಿ
ಘನವಪ್ಪ ಬೋನವನು ಲಿಂಗವಾರೋಗಣೆಯ ಮಾಡಿ
ಮಿಕ್ಕುದ ಕೊಳ್ಳಬಲ್ಲಡೆ ಪ್ರಸಾದಿ
ಇಂತೀ ತೆರನ ಬೆಸಗೊಳ್ಳಬಲ್ಲಡೆ
ಎನ್ನ ಬೆಸಗೊಳ್ಳೈ – ಗುಹೇಶ್ವರಾ

**– ಅಲ್ಲಮಪ್ರಭುದೇವರು**

# ಪ್ರಸಾದ



## ಕೃತಿ–ಸ್ವೀಕೃತಿ

**ಮಹದೇಶ್ವರ ಗೀತಾಮೃತ**
ಎಸ್. ಪುಟ್ಟಪ್ಪ ಮುಡಿಗುಂಡ
ಪ್ರ: ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಮೈಸೂರು
ಪು : 76, ಬೆಲೆ : 100/–

**ರೂಹಿಲ್ಲದ ಚಲುವ**
**(ಅಕ್ಕಮಹಾದೇವಿ ಐತಿಹಾಸಿಕ ಕಾದಂಬರಿ)**
ವಿ.ಮಾ. ಜಗದೀಶ್
ಪ್ರ: ಶೃತಿ ಪ್ರಕಾಶನ
ಶಿಕ್ಷಕರ ಬಡಾವಣೆ, ಮೈಸೂರು
ಪು : 308, ಬೆಲೆ : 300/–

**ಕರ್ನಾಟಕದ ಸಾಧನೆ ಸಂಪನ್ನರು**
ಹೆಚ್.ಎಸ್. ಸಿದ್ಧಗಂಗಪ್ಪ
ಪ್ರ: ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ, ಗಾಂಧಿನಗರ, ಬೆಂಗಳೂರು
ಪು : 580, ಬೆಲೆ : 500/–

**ಮೂಕನಡುಕು**
**(ಶತತಾರ ನಕ್ಷತ್ರ ವೃಷಭರಾಶಿಗೆ ಹೇಳಿದ ಪ್ರಸಂಗ)**
ಕುಂ. ವೀರಭದ್ರಪ್ಪ
ಪ್ರ: ವಸಂತ ಪ್ರಕಾಶನ
ಜಯನಗರ, ಬೆಂಗಳೂರು
ಪು : 344, ಬೆಲೆ : 350/–

**ಶಾಕುಂತಲ**
ಸಿದ್ಧಲಿಂಗ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ
ಶ್ರೀದೇವಿ ನಗರ, ವಿದ್ಯಾಗಿರಿ, ಧಾರವಾಡ
ಪು : 164, ಬೆಲೆ : 180/–

**ಮುಸುಕಿದೀ ಮಬ್ಬಿನಲಿ**
ಡಾ. ಹೇಮಾ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ
ಶ್ರೀದೇವಿ ನಗರ, ವಿದ್ಯಾಗಿರಿ, ಧಾರವಾಡ
ಪು : 104, ಬೆಲೆ : 120/–

**ವ್ಯಾಸರ ಬಿನ್ನಪ**
**(ಮಹಾಭಾರತಾವಲೋಕನ ಪ್ರಬಂಧಗಳು)**
ಎಸ್.ಆರ್. ರಾಮಸ್ವಾಮಿ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ
ಕೆಂಪೇಗೌಡನಗರ, ಬೆಂಗಳೂರು
ಪು : 126, ಬೆಲೆ : 125/–

**ಪ್ರಸಾದವಾಣಿ**
ಪೂಜ್ಯ ಶ್ರೀ ನಾಡೋಜ
ಡಾ. ಬಸವಲಿಂಗ ಪಟ್ಟದೇವರು
ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ
ಹಿರೇಮಠ ಸಂಸ್ಥಾನ, ಬಾಲ್ಕಿ
ಬೀದರ ಜಿಲ್ಲೆ
ಪು : 124, ಬೆಲೆ : 50/–

**ವಚನ ಬೆಳಕು**
ಪೂಜ್ಯ ಶ್ರೀ ನಾಡೋಜ
ಡಾ. ಬಸವಲಿಂಗ ಪಟ್ಟದೇವರು
ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ
ಹಿರೇಮಠ ಸಂಸ್ಥಾನ, ಬಾಲ್ಕಿ
ಬೀದರ ಜಿಲ್ಲೆ
ಪು : 84, ಬೆಲೆ : 20/–

**ಅಮೃತ ಗೋಸಲ ನಿರಂಜನ ವಂಶಪರಂಪರೆ**
ಎಸ್. ಮಲ್ಲಿಕಾರ್ಜುನಪ್ಪ
ಪ್ರ: ಕನ್ನಡಮ್ಮ ಪ್ರಕಾಶನ
ಪು : 116, ಬೆಲೆ : 200/–

**ಕವಿಗೆ ಸಾವಿರದ ಚಿಂತೆ**
ಸಿದ್ಧಲಿಂಗ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ
ಶ್ರೀದೇವಿ ನಗರ, ವಿದ್ಯಾಗಿರಿ
ಧಾರವಾಡ
ಪು : 120, ಬೆಲೆ : 130/–

**ಮಳೆ–ಬೆಳೆ**
**(ನುಡಿಸಾರುವುದು, ಹೇಳಿಕೆಗಳು)**
ಪಿ.ಡಿ. ವಾಲೀಕಾರ
ಪ್ರ: ನಿಸರ್ಗ ಪ್ರಕಾಶನ, ಲಕ್ಕಸಕೊಪ್ಪ
ಗುಳೇದಗುಡ್ಡ ತಾ., ಬಾಗಲಕೋಟೆ ಜಿ.
ಪು : 96, ಬೆಲೆ : 100/–

**ಮರೆಯಲಾಗದ ನೆನಪು**
**(ಕವನ ಸಂಕಲನ)**
ಡಾ. ರುದ್ರಣ್ಣ ಚಿಲುಮಿ
ಪ್ರ: ನಿವೇದಿತ ಪ್ರಕಾಶನ
ಬನಶಂಕರಿ, ಬೆಂಗಳೂರು
ಪು : 236, ಬೆಲೆ : 250/–

**ಹೆಣ್ಮಕ್ಳೇ ಸ್ಟ್ರಾಂಗು ಗುರು**
ಡಾ. ಸುಕನ್ಯಾ ಸೂನಗಹಳ್ಳಿ
ಪ್ರ: ಸಾಹಿತ್ಯಲೋಕ ಪಬ್ಲಿಕೇಶನ್ಸ್
ರಾಜಾಜಿನಗರ, ಬೆಂಗಳೂರು
ಪು : 120, ಬೆಲೆ : 150/–

**ವಿಜ್ಞಾನಗಂಗೆಯ ಹರಿಸಿದ ಭಗೀರಥರು**
ಡಾ. ಸುಕನ್ಯಾ ಸೂನಗಹಳ್ಳಿ
ಪ್ರ: ಸಾಹಿತ್ಯಲೋಕ ಪಬ್ಲಿಕೇಶನ್ಸ್
ರಾಜಾಜಿನಗರ, ಬೆಂಗಳೂರು
ಪು : 278, ಬೆಲೆ : 320/–

**ಹಸಿರುಹಾದಿಯ ಕೃಷಿಕರು**
ಡಾ. ಸುಕನ್ಯಾ ಸೂನಗಹಳ್ಳಿ
ಪ್ರ: ಸಾಹಿತ್ಯಲೋಕ ಪಬ್ಲಿಕೇಶನ್ಸ್
ರಾಜಾಜಿನಗರ, ಬೆಂಗಳೂರು
ಪು : 150, ಬೆಲೆ : 185/–

**ಕಾಡುಹುಡುಗನ ಹಾಡುಪಾಡು**
**(ಅನುಭವ ಕಥನ)**
ಸ್ವಾಮಿ ಪೊನ್ನಾಚಿ
ಪ್ರ: ಅಮೂಲ್ಯ ಪುಸ್ತಕ
ವಿಜಯನಗರ, ಬೆಂಗಳೂರು
ಪು : 180, ಬೆಲೆ : 150/–

**ದಾರಿ ತಪ್ಪಿಸುವ ಗಿಡ**
ಸ್ವಾಮಿ ಪೊನ್ನಾಚಿ
ಪ್ರ: ವೈಷ್ಣವಿ ಪ್ರಕಾಶನ
ಕೆ. ಗುಡದಿನ್ನಿ, ಮಾನ್ವಿ ತಾ.
ರಾಯಚೂರು ಜಿಲ್ಲೆ
ಪು : 120, ಬೆಲೆ : 120/–

**ಬಾಳಿಗೊಂದು ಅಮೃತ ಸಿಂಚನ**
ಡಾ. ಡಿ.ಕೆ. ರಾಜೇಂದ್ರ
ಪ್ರ: ಶ್ರುತಿ ಪ್ರಕಾಶನ
ಟೀಚರ್ಸ್ ಲೇಔಟ್, ಮೈಸೂರು
ಪು : 184, ಬೆಲೆ : 185/–

**ನನ್ನ ಜೀವ ನನ್ನ ಭಾವ**
ಡಾ. ಡಿ.ಕೆ. ರಾಜೇಂದ್ರ
ಪ್ರ: ಮಣಿ ಪ್ರಕಾಶನ
ವಿಜನಗರ 3ನೇ ಹಂತ
ಮೈಸೂರು
ಪು : 560, ಬೆಲೆ : 895/–

**ನಯನ ಗೀತಾ**
ಚಿಲ್ಕುಂದ ನಾಗಪ್ಪಶಾಸ್ತ್ರಿ
ನಾಗಶಯನ
ಪ್ರ: ಸನ್‌ಸ್ಟಾರ್ ಪಬ್ಲಿಷರ್
ಕಬ್ಬನ್‌ಪೇಟೆ, ಬೆಂಗಳೂರು
ಪು : 288, ಬೆಲೆ : 300/–

**ವಚನಶಿಲ್ಪ (ಕಾದಂಬರಿ)**
ಡಾ. ಪ್ರದೀಪಕುಮಾರ ಹೆಬ್ರಿ
ಪ್ರ: ಅಮ್ಮಯ್ಯಮ್ಮ ಪ್ರಕಾಶನ
ಹಲ್ಲೆಗೆರೆ, ಮಂಡ್ಯ ತಾ. ಮತ್ತು ಜಿ.
ಪು : 526, ಬೆಲೆ : 600/–

**ಬುದ್ಧನ ಧಮ್ಮಪದಗಳು**
**(ಕನ್ನಡ ಕಾವ್ಯಾನುವಾದ)**
ಡಾ. ಪ್ರದೀಪಕುಮಾರ ಹೆಬ್ರಿ
ಪ್ರ: ಅಮ್ಮಯ್ಯಮ್ಮ ಪ್ರಕಾಶನ
ಹಲ್ಲೆಗೆರೆ, ಮಂಡ್ಯ ತಾ. ಮತ್ತು ಜಿ.
ಪು : 236, ಬೆಲೆ : 250/–

## ಲೇಖಕರ ವಿಳಾಸ

**ಡಾ. ಎಂ.ಎಸ್. ನಂದೀಶ್ ಹಂಚೆ**
# 217, 6ನೇ ಕ್ರಾಸ್
ಲಲಿತಮಹಲ್ ನಗರ
ಮೈಸೂರು 570028
ಮೊ: 90088 15888

**ಡಾ. ಎನ್.ಎಂ. ಗಿರಿಜಾಪತಿ**
#1249, ಭೈರವೇಶ್ವರ ನಿಲಯ
ಮೊದಲ ಮಹಡಿ
1ನೇ ಮುಖ್ಯ ರಸ್ತೆ
ವಿನಾಯಕ ನರ್ಸಿಂಗ್ ಹೋಂ ಹತ್ತಿರ
ಕೃಷ್ಣಮೂರ್ತಿಪುರಂ
ಮೈಸೂರು 570 004
ಮೊ.: 9844582238

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ ಆಯುರ್ವೇದ
ಚಿಕಿತ್ಸಾಲಯ, ಬಿ.ಹೆಚ್. ರಸ್ತೆ
ತುಮಕೂರು 572 102
ಮೊ: 98809 96196

**ಡಾ. ಗುರುಲಿಂಗಪ್ಪ ಧಬಾಲೆ**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಸಿ.ಬಿ.ಖೇಡಗಿ ಬಸವೇಶ್ವರ
ಮಹಾವಿದ್ಯಾಲಯ, ಅಕ್ಕಲಕೋಟ
ಸೊಲ್ಲಾಪುರ ಜಿಲ್ಲೆ, ಮಹಾರಾಷ್ಟ್ರ
ಮೊ: 70192 45756

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಇತಿಹಾಸ ಪ್ರಾಧ್ಯಾಪಕರು
ಎಚ್.ಐ.ಜಿ. 32, ಗ್ರೂಪ್–1
ಕೆ.ಎಚ್.ಬಿ. ಕಾಲೋನಿ
ಹೂಟಗಳ್ಳಿ, ಮೈಸೂರು 570018
ಮೊ: 98453 09081

**ಶ್ರೀ ನಗರ್ಲೆ ಶಿವಕುಮಾರ**
ನಗರ್ಲೆ ಗ್ರಾಮ & ಅಂಚೆ
ನಂಜನಗೂಡು ತಾ.
ಮೈಸೂರು ಜಿಲ್ಲೆ
ಮೊ: 98456 09652

**ಹಿಂಬದಿ ಪುಟದ ಚಿತ್ರ**

ಮೈಸೂರು ಶ್ರೀ ಸುತ್ತೂರು ಮಠಕ್ಕೆ ಸರ್ವೋಚ್ಚ ನ್ಯಾಯಾಲಯದ ಮುಖ್ಯನ್ಯಾಯಮೂರ್ತಿಗಳಾದ ಗೌ.ನ್ಯಾ. ಶ್ರೀ ಡಿ.ವೈ. ಚಂದ್ರಚೂಡ್‌ರವರು ಮತ್ತು ಅವರ ಧರ್ಮಪತ್ನಿ ಶ್ರೀಮತಿ ಕಲ್ಪನಾ ದಾಸ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಅಭಿನಂದಿಸಿದರು (3 ಅಕ್ಟೋಬರ್ 2024)



ಆಲಹಳ್ಳಿ ಶ್ರೀ ಪಟ್ಟದ ಮಠದ ಶ್ರೀ ಶಿವಕುಮಾರ ಸ್ವಾಮಿಗಳ ಸಂಸ್ಮರಣೆ ಮತ್ತು ನೂತನ ಪಟ್ಟಾಧಿಕಾರ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಬೆಟ್ಟದಪುರ, ಕನಕಪುರ, ಸೋಮಹಳ್ಳಿ, ನೂತನ ಶ್ರೀಗಳಾದ ಶ್ರೀ ಇಮ್ಮಡಿ ಬಸಪ್ಪ ಸ್ವಾಮಿಗಳು, ಸಾಲೂರು ಮಠ, ಮಲ್ಲನಮೂಲೆ ಮಠಗಳ ಶ್ರೀಗಳು, ಶ್ರೀ ತೋಂಟೇಶ್, ಶ್ರೀ ವೃಷಭೇಂದ್ರಪ್ಪ ಹಾಗೂ ಶ್ರೀ ಬಸವಣ್ಣ ಮೊದಲಾದವರುಗಳಿದ್ದಾರೆ (4 ಅಕ್ಟೋಬರ್ 2024)



ಶ್ರೀ ಸುತ್ತೂರು ಕ್ಷೇತ್ರಕ್ಕೆ ಆಗಮಿಸಿದ್ದ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರನ್ನು ಪರಮಪೂಜ್ಯ ಜಗದ್ಗುರುಗಳವರು ಗೌರವಿಸಿ ಸನ್ಮಾನಿಸಿದರು (4 ಅಕ್ಟೋಬರ್ 2024)



ಭೇರ್ಯದಲ್ಲಿ ಮೈಸೂರು–ಚಾಮರಾಜನಗರ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯಿಂದ ಆಯೋಜಸಿದ್ದ ರಾಜೇಂದ್ರ ಶ್ರೀಗಳವರ 109ನೇ ಜಯಂತಿ ಮಹೋತ್ಸವದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸುತ್ತೂರು ಮತ್ತು ಸಿದ್ಧಗಂಗೆ ಕಿರಿಯ ಶ್ರೀಗಳು ಹಾಗೂ ಇತರ ಮಠಾಧಿಪತಿಗಳೊಂದಿಗೆ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳಿದ್ದಾರೆ (13 ಅಕ್ಟೋಬರ್ 2024)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ವಿಜಯದಶಮಿಯಂದು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಭೇಟಿ ನೀಡಿದ್ದಾಗ ಪರಮಪೂಜ್ಯ ಜಗದ್ಗುರುಗಳವರು ಗೌರವಿಸಿ ಸನ್ಮಾನಿಸಿದರು. ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ಡಾ. ಹೆಚ್.ಸಿ. ಮಹದೇವಪ್ಪ ಮತ್ತು ಶ್ರೀ ಸುನೀಲ್ ಬೋಸ್ ಮೊದಲಾದವರುಗಳಿದ್ದಾರೆ (12 ಅಕ್ಟೋಬರ್ 2024)



ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಬಸವ ಸಮಿತಿ ಮತ್ತು ಕದಳಿ ಮಹಿಳಾ ವೇದಿಕೆಯಿಂದ ಆಯೋಜಿಸಿದ್ದ ಡಾ. ಲೀಲಾದೇವಿ ಆರ್. ಪ್ರಸಾದ್–92 'ಸಾರ್ಥಕ ಬದುಕಿನ ಸುಂದರ ಪಯಣ' ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಡಾ. ಲೀಲಾದೇವಿಯವರನ್ನು ಸನ್ಮಾನಿಸಲಾಯಿತು. ಶ್ರೀಮತಿ ಪ್ರಮೀಳಾ ಗರಡಿ, ಶ್ರೀ ಕೆ.ವಿ. ನಾಗರಾಜಮೂರ್ತಿ, ಡಾ. ಸಿ. ಸೋಮಶೇಖರ್, ಮೋಟಗಿಮಠದ ಶ್ರೀಗಳು, ಶ್ರೀಮತಿ ಸುಶೀಲಮ್ಮ, ಶ್ರೀ ಬಿ.ಎಲ್. ಶಂಕರ್, ಡಾ. ಅರವಿಂದ ಬಿ. ಜತ್ತಿ ಹಾಗೂ ಶ್ರೀಮತಿ ಪ್ರೇಮ ಸೋಮಸುಂದರ್‌ರವರುಗಳಿದ್ದಾರೆ (17 ಅಕ್ಟೋಬರ್ 2024)



ಕೆ.ಆರ್. ನಗರ ತಾಲ್ಲೂಕು ಮಾರಗೌಡನಹಳ್ಳಿಯ ಶ್ರೀ ಲಕ್ಷ್ಮೀದೇವಿ ದೇವಸ್ಥಾನದ 48ನೇ ದಿನದ ಮಂಡಲ ಪೂಜಾ ಕಾರ್ಯಕ್ರಮ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ದಾನಿಗಳಾದ ಶ್ರೀಮತಿ ಡಿ.ಎಸ್. ಕಾಮಾಕ್ಷಿ, ಶ್ರೀ ಸೋಮಶೇಖರ್, ಶ್ರೀಮತಿ ರಶ್ಮಿ ನಟೇಶ್ ಮತ್ತು ಶ್ರೀ ಡಿ.ಬಿ. ನಟೇಶ್ ದಂಪತಿಗಳನ್ನು ಸನ್ಮಾನಿಸಲಾಯಿತು. ಗಾವಡಗೆರೆ ಶ್ರೀಗಳು, ದೇವಸ್ಥಾನದ ಟ್ರಸ್ಟಿಗಳು ಹಾಗೂ ಗ್ರಾಮಸ್ಥರುಗಳಿದ್ದಾರೆ (16 ಅಕ್ಟೋಬರ್ 2024)




ಮೈಸೂರು ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಪ್ರೊ. ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ ಮತ್ತು ಸಂವಹನ ಪ್ರಕಾಶನ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ 'ಮಲೆಯೂರು ಮಂದಾರ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಪ್ರೊ. ಡಿ.ಎಸ್. ಸದಾಶಿವಮೂರ್ತಿ, ಶ್ರೀಮತಿ ಜಯಂತಿ ಗುರುಸ್ವಾಮಿ, ಶ್ರೀ ಡಿ.ಎನ್ ಲೋಕಪ್ಪ, ಡಾ. ಸಿ. ಸೋಮಶೇಖರ್, ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು, ಪ್ರೊ. ಎಚ್.ಎಸ್. ಶಿವಪ್ರಕಾಶ್, ಪ್ರೊ. ಸಿ. ನಾಗಣ್ಣ, ಶ್ರೀ ಶಿವಮೂರ್ತಿ ಕಾನ್ಯ, ಪ್ರೊ. ಮೊರಬದ ಮಲ್ಲಿಕಾರ್ಜುನ ಹಾಗೂ ಶ್ರೀ ನಗರ್ಲೆ ಶಿವಕುಮಾರ್‌ರವರುಗಳಿದ್ದಾರೆ (20 ಅಕ್ಟೋಬರ್ 2024)




ಶ್ರೀ ಸುತ್ತೂರು ಕ್ಷೇತ್ರಕ್ಕೆ ಆಗಮಿಸಿದ 2024ರ ದಸರಾ ಮಹೋತ್ಸವದ ಉದ್ಘಾಟಕರಾದ ಖ್ಯಾತ ಸಾಹಿತಿ ನಾಡೋಜ ಹಂ.ಪ ನಾಗರಾಜಯ್ಯನವರನ್ನು ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಅಭಿನಂದಿಸಿದರು. ಶ್ರೀಮತಿ ಆರತಿ ಹಂಪನಾ, ಶ್ರೀಮತಿ ರಾಜಶ್ರೀ ಹಂಪನಾ, ಕಲಬುರಗಿ ಗ್ರಾಮೀಣ ಶಾಸಕರಾದ ಶ್ರೀ ಬಸವರಾಜ್ ಮತ್ತಿಮೂಡ ಹಾಗೂ ಶ್ರೀ ಎಂ. ಚಂದ್ರಶೇಖರ್‌ರವರುಗಳಿದ್ದಾರೆ (2 ಅಕ್ಟೋಬರ್ 2024)




ಮೈಸೂರು ಕುವೆಂಪು ನಗರದಲ್ಲಿ ಕಲಾಂಡಿಕ ಅಕಾಡೆಮಿಯಿಂದ ನಿರ್ಮಿಸಿದ ವಸುಂಧರ ಭವನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಗೋವಿಂದ್, ಶ್ರೀ ರಮೇಶ್ ಕಣ್ಣನ್, ಶ್ರೀ ಮುಕ್ತಿದಾನಂದಜೀ ಮಹಾರಾಜ್, ಡಾ. ವಸುಂಧರಾ ದೊರೆಸ್ವಾಮಿ, ಶ್ರೀಮತಿ ಸವಿತಾ ರಮೇಶ್ ಮತ್ತು ಶ್ರೀಮತಿ ಪ್ರಣೀತಾ ಗೋವಿಂದ್ ಮೊದಲಾದವರುಗಳಿದ್ದಾರೆ (3 ಅಕ್ಟೋಬರ್ 2024)

Registered with the Registrar of Newspapers in India Under No. 50622 / 1986
'Prasada' Monthly, Vol. 39 Issue No. 10, October 2024



ISSN 2583-7648
9 772583 764006

ಬಿಡಿ ಪ್ರತಿ : ರೂ.10/-

e-mail: prasada@jssonline.org ⋆ www.jssonline.org